# ಚಿಂತನ ಬಯಲು

ತ್ರೈಮಾಸಿಕ ISSN 2278-2192 ಸಂಪುಟ 1 ಸಂಚಿಕೆ 3



Volume 1, Issue 3, January-March 2013





# ಚಿಂತನ ಬಯಲು

ಸಂಪಾದಕಿ

**ರೇಶ್ಮಾ ಜಿ. ಭಟ್**

ಸಂಪಾದಕೀಯ ಸಲಹೆ

**ಡಾ. ಅಜಕ್ಕಳ ಗಿರೀಶ ಭಟ್**

**ಡಾ. ಶ್ರೀಧರ್ ಎಚ್.ಜಿ.**

**ಡಾ. ವರದರಾಜ ಚಂದ್ರಗಿರಿ**

**ಡಾ. ಜಿ.ಬಿ. ಹರೀಶ್**

**ಶ್ರೀ ಎಂ.ಎ. ಸುಬ್ರಹ್ಮಣ್ಯ**

**ಚಿಂತನ ಬಯಲು**

ನಂ. 15-109, ಮೊಡಂಕಾಪು ಅಂಚೆ

ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ - 574 219

**CHINTHANA BAYALU**
Kannada Quarterly
Volume 1, Issue 3, January - March 2013.

Edited, Published, Printed & Owned by
**Reshma G. Bhat**
Door No. 15-109, Modankapu Post,
Bantwal Taluk, Dakshina Kannada 574 219.
Karnataka
Phone : 9449772651
Email :chinthanabayalu@gmail.com

© : Reserved

Price : Rs. 60

Pages : 88

Cover Design : **Kalloor Nagesh**

Designed & Printed at :

**Aakrithi Prints**
Maximus Complex
Light House Hill Road
Mangalore - 575 001
Tel. : 0824 2443002

---

**ಸೂಚನೆ :** ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

# ಪುಟನೋಟ


1. ಶಕ್ತಿಯಿಂದ ಶಿವಪುರ ಸೃಷ್ಟಿಸಬಯಸುವ ಕಂಬಾರರ ನಾಟಕಗಳು — ■ ಡಾ. ಬಿ.ವಿ.ವಸಂತಕುಮಾರ್ 7

2. ಪ್ರಾಚೀನ ಕನ್ನಡ ಸಾಹಿತ್ಯವು ಅನುವಾದವೇ? — ■ ಡಾ. ಮಾಧವ ಪೆರಾಜ 17

3. ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಕೃಷಿನಿಷ್ಠೆ — ■ ರೇಖಾ ವಿ. ಬನ್ನಾಡಿ 34

4. ಸಂಪಾದಕೀಯಕ್ಕೆ ಹೊಸ ಆಯಾಮ ನೀಡಿದ ಗುಲ್ವಾಡಿ : ಒಂದು ವಿಶ್ಲೇಷಣೆ — ■ ಮೌಲ್ಯ ಜೀವನ್ 42

5. ಸೆಕ್ಯುಲರಿಸಮ್ಮಿನ ಪರಿಕಲ್ಪನೆ : ಭಾರತೀಯ, ಪಾಶ್ಚಾತ್ಯ ಹಾಗೂ ಸಂವಿಧಾನದ ದೃಷ್ಟಿಯಲ್ಲಿ — ■ ಪ್ರೊ.ಆರ್.ಎಲ್.ಎಂ.ಪಾಟೀಲ್ 52

6. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿನ ಅನಂತಭೋಗೀಶ್ವರ ಶಬ್ದದ ಅರ್ಥ ಮತ್ತು ಪ್ರಯೋಗ : ಕಿರು ವಿಮರ್ಶೆ — ■ ಎಸ್. ಕಾರ್ತಿಕ್ 56

7. 'ಸಂಬೋಳಿ' : ಆತ್ಮಕಥನವನ್ನು ಕುರಿತು — ■ ಡಾ|ಕಾ.ವೆಂ.ಶ್ರೀನಿವಾಸಮೂರ್ತಿ 59

8. ಕನ್ನಡಕ್ಕೆ ಕತ್ತರಿ ಪ್ರಯೋಗ? — ■ ಸರಸ್ವತಿ ಬಡೆಕ್ಕಿಲ 62

## ಸಂಪಾದಕೀಯ

ಪತ್ರಿಕೆಯ ನೋಂದಣಿಗೆ ಸಂಬಂಧಿಸಿದ ತಾಂತ್ರಿಕ ಕಾರಣಗಳಿಂದಾಗಿ ಈ ಸಂಚಿಕೆ ಮತ್ತೆ ಮೂರನೇ ಸಂಚಿಕೆಯಾಗಬೇಕಾಗಿದೆ. ಈ ವಿಲಕ್ಷಣ ಸನ್ನಿವೇಶಕ್ಕೆ ಕಾರಣವಾದ ಅಂಶಗಳನ್ನು ಮುಂದೆ ವಿವರವಾಗಿ ಬರೆಯುವ ಆಸೆಯಿದೆ. ಕಳೆದ ನಾಲ್ಕು ಸಂಚಿಕೆಗಳೊಂದಿಗೆ ಒಂದು ವರ್ಷದ ಚಂದಾ ಹಣ ನೀಡಿದವರ ಚಂದಾ ಅವಧಿ ಮುಗಿದಿದೆ. ದಯವಿಟ್ಟು ಅಂತಹ ಚಂದಾದಾರರು ಚಂದಾ ನವೀಕರಿಸಬೇಕಾಗಿ ಹಾಗೂ ಪರಿಚಿತರಿಗೆ ಹೇಳಿ ಚಂದಾದಾರರ ಸಂಖ್ಯೆ ವೃದ್ಧಿಸಲು ಸಹಕರಿಸಬೇಕಾಗಿ ಕೋರಿಕೆ.

ಕನ್ನಡದಲ್ಲಿ ಸಣ್ಣಮಟ್ಟಿಗಾದರೂ ಸಂಚಲನ ಮೂಡಿಸುವಲ್ಲಿ ಪತ್ರಿಕೆಯು ಯಶಸ್ವಿಯಾಗಿದೆ ಎಂಬುದಕ್ಕೆ ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ವಚನ ಸಾಹಿತ್ಯವು ಜಾತಿ ವ್ಯವಸ್ಥೆಯ ವಿರುದ್ಧ ಮಾತನಾಡುತ್ತದೆಯೇ?' (ಡಂಕನ್ ಜಳಕಿ ಮತ್ತು ಬಾಲಗಂಗಾಧರ) ಎಂಬ ಲೇಖನದ ವಿಚಾರಗಳ ಬಗ್ಗೆ ನಡೆಯುತ್ತಿರುವ ಚರ್ಚೆಯೇ ಸಾಕ್ಷಿ. ಪ್ರಜಾವಾಣಿ ಪತ್ರಿಕೆಯಲ್ಲಿ ಈ ಲೇಖನದ ಬಗ್ಗೆ ಪ್ರಸ್ತಾಪಿಸಿದ ಎಚ್.ಎಸ್. ಶಿವಪ್ರಕಾಶರ ಲೇಖನವನ್ನು ಆಧಾರವಾಗಿಟ್ಟುಕೊಂಡು, ಕನ್ನಡ ಸಾಹಿತ್ಯ ಸಂಶೋಧನೆಯ ಕ್ಷೇತ್ರಗಳಲ್ಲಿ ಹೆಸರು ಮಾಡಿರುವ ಹಲವರು ಚರ್ಚಿಸಿದರು. ಆದರೆ ಪ್ರತಿಕ್ರಿಯಿಸಿದವರಲ್ಲಿ ಹಲವು ಮಂದಿ 'ಚಿಂತನ ಬಯಲು' ಪತ್ರಿಕೆಯಲ್ಲಿ ಬಂದ ಲೇಖನ ವನ್ನಾಗಲೀ, ಡಂಕಿನ್ ಅವರ ಪಿಎಚ್.ಡಿ. ಮಹಾಪ್ರಬಂಧ ವನ್ನಾಗಲೀ ಓದಿದಂತೆ ಕಾಣಲಿಲ್ಲ. ಏನೇ ಇರಲಿ, ವಿವಿಧ ವೇದಿಕೆಗಳಲ್ಲಿ ವಿದ್ವಾಂಸರು ವಚನದ ಬಗ್ಗೆ ಮಾತನಾಡು ವಾಗ ಈ ಲೇಖನದ ವಿಚಾರಗಳನ್ನು ಟೀಕಿಸಲಿಕ್ಕಾದರೂ ಪ್ರಸ್ತಾಪಿಸುವಂತಾಗಿದೆ.

ಪರ–ವಿರೋಧ ಎಂಬುದು ಮುಖ್ಯವಲ್ಲ. ವಿಚಾರ ಪ್ರಚೋದಕ ವಾಗ್ವಾದಗಳು ನಡೆಯುವುದು ಮುಖ್ಯ. ಚಿಂತನ ಬಯಲು ಹುಟ್ಟಿಕೊಂಡದ್ದೇ ಇಂತಹ ಒಂದು ಆಶಯದೊಂದಿಗೆ. ಕಳೆದ ಒಂದು ವರ್ಷದ ಸಣ್ಣ ಅವಧಿಯಲ್ಲಿ ಇಂತಹ ದೊಡ್ಡ ಮಟ್ಟದ ವಾಗ್ವಾದಕ್ಕೆ ಪತ್ರಿಕೆ ಪ್ರೇರಕ ಶಕ್ತಿಯಾಗಿರುವುದು ನಮ್ಮ ಶ್ರಮವನ್ನು ಮರೆಸುವ ಸಂಗತಿ.

**ಸಂಪಾದಕಿ**






# ಶಕ್ತಿಯಿಂದ ಶಿವಪುರ ಸೃಷ್ಟಿಸಬಯಸುವ ಕಂಬಾರರ ನಾಟಕಗಳು




**ಡಾ. ಬಿ.ವಿ. ವಸಂತಕುಮಾರ್**
ಕನ್ನಡ ಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು

ಜ್ಞಾನಪೀಠ ಪ್ರಶಸ್ತಿ ವಿಜೇತ ಚಂದ್ರಶೇಖರ ಕಂಬಾರರ ಪ್ರತಿಭೆಯೆಂದರೆ ಅದು ಶಾಕ್ತ ಪ್ರತಿಭೆ. ಶಕ್ತಿಯಿಂದ ಅರ್ಥಾತ್ ಹೆಣ್ಣಿನಿಂದ 'ಶಿವ'ನೆಂಬ ಬೆಳಕನ್ನು ಸೃಷ್ಟಿಸುವ ಮೂಲಕ 'ಶಿವಪುರ'ವನ್ನು ನಿರ್ಮಿಸಬೇಕೆಂಬ ಹಂಬಲವನ್ನು ಸೃಜನಶೀಲ ವಾಗಿ ದುಡಿಸಿಕೊಂಡ ಪ್ರತಿಭೆಯಾಗಿದೆ. ಇದನ್ನು ಅವರ ಮೊದಲ ನಾಟಕವಾದ 'ಋಷ್ಯಶೃಂಗ'ದಿಂದ ಹಿಡಿದು ಇತ್ತೀಚಿನ 'ಶಿವರಾತ್ರಿ' ಹಾಗೂ 'ಮಾರಿಕಾಡು' ನಾಟಕಗಳವರೆಗೂ ಕಾಣಬಹುದಾಗಿದೆ. ಕಂಬಾರರ ನಾಟಕಗಳನ್ನಾಗಲೀ, ವಚನಕಾರರ ವಚನಗಳನ್ನಾಗಲೀ ನಾವು ಅರ್ಥ ಮಾಡಿಕೊಂಡು, ಅನುಭವಿಸಿ, ವಿಮರ್ಶಿಸಬೇಕಾದರೆ ಅದಕ್ಕೆ ಬೇಕಾದ ಮಾನದಂಡಗಳನ್ನು ಪಾಶ್ಚಾತ್ಯ ನೆಲೆಗಳಿಂದ ಹುಡುಕಿಕೊಳ್ಳುವುದಕ್ಕಿಂತ 'ದೇಸಿ' ಅಂದರೆ 'ನೆಲ'ದ ಮೂಲದ ನೆಲೆಗಳಿಂದಲೇ ಹುಡುಕಿಕೊಳ್ಳಬೇಕು. ಇಲ್ಲವಾದರೆ ಕಂಬಾರರ ನಾಟಕಗಳ ಸಂಕೀರ್ಣತೆಯನ್ನು ನಾವು ಗ್ರಹಿಸುವುದು ಕಷ್ಟವಾಗುತ್ತದೆ ಹಾಗೂ ನಮ್ಮ ವಿಮರ್ಶೆ ತಪ್ಪಾಗುವ ಸಾಧ್ಯತೆಯೂ ಇದೆ. ಗ್ರಹಿಕೆಯ ಮಾನದಂಡ ಗಳು 'ನೆಲ'ದ 'ದೇಸಿ'ಯ 'ಜನಪದೀಯ', 'ಪೌರಾಣಿಕ' ನೆಲೆಯದ್ದು ಎಂದರೂ ಅದು 'ಶಾಕ್ತ', 'ಶಾಕ್ತಧರ್ಮ', 'ಶಾಕ್ತಸಂಸ್ಕೃತಿ' ಈ ನೆಲದಲ್ಲಿ ಹುಟ್ಟುಹಾಕಿದ್ದ ಸ್ತ್ರೀಮೂಲದ, ಮಾತೃ ಮೂಲದ 'ಶಾಕ್ತ' ನೆಲೆಯ ಮಾನದಂಡಗಳೆಂದೇ ಭಾವಿಸಬೇಕು. ಇಲ್ಲವಾದಲ್ಲಿ ಕಂಬಾರರ ನಾಟಕದಲ್ಲಿ ಪ್ರಧಾನವಾಗಿ ಬರುವ 'ಕಾಮ'ವನ್ನು ಅದರ ಅಗ್ನಿಗರ್ಭ ವಾದ ಹೆಣ್ಣು ಮತ್ತು ಭೂಮಿ, ಅವುಗಳಿಂದ ಹೊರಹೊಮ್ಮುವ ಬದುಕು, ಅದರ ಅಳಿವು- ಬೆಳವು- ಉಳಿವುಗಳ ಸಂಘರ್ಷದ ಸಂಕಥನವನ್ನು 'ಅಶ್ಲೀಲ'ವೆಂತಲೋ, 'ಮಹಿಳಾ ವಿರೋಧಿ' ಎಂತಲೋ, ಪುರುಷಪ್ರಧಾನತೆಯೆಂತಲೋ, ಪ್ರತಿಗಾಮಿ

ಎಂತಲೋ ಭಾವಿಸುವ ಅಪಾಯವಿದೆ. ಆದರೆ ಕಂಬಾರರಿಗೆ ಕಾಮ ಬೆಳಕಲ್ಲ ಬೆಂಕಿ ಎಂಬುದು ಗೊತ್ತಿದೆ. ಹಾಗೆಯೇ ಬೆಂಕಿಯಿಲ್ಲದಿದ್ದರೆ ಬೆಳಕಿಲ್ಲ ಎಂಬುದೂ ಗೊತ್ತಿದೆ. ಹಾಗಾಗಿಯೇ ಅವರು ತಮ್ಮ ನಾಟಕಗಳಲ್ಲಿ ಕಾಮದ ಬೆಂಕಿಯಿಂದಲೇ ಪ್ರೇಮದ ಬೆಳಕನ್ನು ಹಡೆಯಲು ಸಂಧಿಸುತ್ತಾರೆ. ಹೀಗೆ 'ಸಂಧಿಸುವ' ಆಶಯ ಋಷ್ಯಶೃಂಗದಿಂದ ಶಿವಪುರದವರೆಗೂ ಕಂಡುಬರುತ್ತದೆ. ಅದಕ್ಕೆ ಕಾರಣ ಕಂಬಾರರ ಪ್ರತಿಭೆ 'ವಿಘಟಿತ' ಪ್ರಜ್ಞೆಯ ಪ್ರತಿಭೆಯಲ್ಲ. 'ಕೂಡುವ' ಐಕ್ಯಪ್ರಜ್ಞೆಯ ಪ್ರತಿಭೆ. ಅದನ್ನು ಅವರೇ ಹೀಗೆ ದಾಖಲಿಸುತ್ತಾರೆ. ಅವರಿಗೆ ಸಂದರ್ಶಕರೊಬ್ಬರು ''ನೀವು ಅರ್ಥ ಮಾಡಿಕೊಳ್ಳಲು ತೊಡಗಿರುವುದು ನಿರ್ವಸಾಹತೀಕರಣಗೊಂಡ ಭಾರತದ ಒಳತೋಟಿಗಳನ್ನೋ ಅಥವಾ ಮನುಷ್ಯ ಸಮಾಜದ ಮೂಲಭೂತ ಅಸ್ತಿಭಾರವನ್ನು ಕುರಿತು ಚಿಂತಿಸುತ್ತಿರುವಿರೋ'' ಎಂದು ಪ್ರಶ್ನಿಸಿದಾಗ ಕಂಬಾರರು ಉತ್ತರಿಸುತ್ತ ''ಇವೆರಡನ್ನೂ ನಾನು ಪ್ರತ್ಯೇಕವಾಗಿ ನೋಡಲಾರೆ. ಏಕೆಂದರೆ ಇಡಿಯಾಗಿರುವುದರಲ್ಲಿ ನನಗೆ ನಂಬಿಕೆ, ವ್ಯಕ್ತಿನೆಲೆಯಲ್ಲಾಗಲೀ ಅಥವಾ ಸಮಾಜದ ನೆಲೆಯಲ್ಲಾಗಲೀ ಎಲ್ಲ ಬಗೆಯ ವಿಘಟನೆಯನ್ನೂ ನಾನು ವಿರೋಧಿಸುತ್ತೇನೆ'' ಎಂದಿದ್ದಾರೆ. ಕಂಬಾರರು ತಮ್ಮ ನಾಟಕಗಳಲ್ಲಿ ವಿಘಟನೆಯ ಸಂಘರ್ಷವನ್ನು ಚಿತ್ರಿಸುತ್ತಲೇ ಆ ವಾಸ್ತವದಿಂದ 'ಇಡಿಯಾಗುವ' ಆ ಮೂಲಕ 'ಶಿವ'ನಾಗುವ, ಅವನಿಂದ 'ಶಿವಪುರ'ವಾಗುವ ಆದರ್ಶವನ್ನೇ ತಮ್ಮ ನಾಟಕಗಳ ಆಶಯವನ್ನಾಗಿಸುತ್ತಾರೆ. ಇದು ಅವರ 'ಸಿರಿಸಂಪಿಗೆ' ನಾಟಕದಲ್ಲಿ ಸ್ಪಷ್ಟವಾದ ರೂಪವನ್ನು ಪಡೆದುಕೊಂಡಿದೆ. ಶಿವ ತನ್ನ ಲೀಲೆಗೆ ಹೋಳಾಗಿ ಸತಿ–ಪತಿ, ದೇಹ–ಮನಸ್ಸು, ದೇಹ–ಆತ್ಮಗಳೆಂದು ಎರಡಾಗುವ, ಅದರಿಂದಾಗಿಯೇ ಆಟ, ನಾಟಕಗಳಾಗುವ, ಸೃಜನಶೀಲತೆ ಹುಟ್ಟುವ ಮತ್ತೆ ಆ ಸೃಜನಶೀಲತೆಯಿಂದಾಗಿಯೇ ಎರಡಳಿದು ಶಿವನಾಗುವ ಐಕ್ಯದ ಅಪೇಕ್ಷೆ ನಾಟಕದ ಪ್ರಾರ್ಥನಾ ಪದ್ಯದಿಂದ ಪ್ರಾರಂಭವಾಗಿ ರಾಜಕುಮಾರ ತನ್ನ ಮಡದಿ ಸಂಪಿಗೆಗೆ ಮಗನನ್ನು 'ಸೀಳಿಕೊಳ್ಳದ' ಹಾಗೆ ನೋಡಿಕೋ ಎಂದು ಹೇಳುವ ಭರತವಾಕ್ಯದಂಥಾ ವಾಕ್ಯದವರೆಗೂ ಬಂದಿದೆ. ಶಿವನಾಗುವ ರಾಜಕುಮಾರ ಕಾಳಿಂಗನಾಗಿ ಸೀಳಿಕೊಂಡು ಇಬ್ಬರೂ ವಿಫಲಗೊಂಡು ಸಾಯುವುದನ್ನು, ಆ ಮೂಲಕ ಮನುಷ್ಯತ್ವದ ಸಾವಿಗೂ ಕಾರಣವಾಗುವುದನ್ನು ಕಂಬಾರರು ಧ್ವನಿಪೂರ್ಣವಾಗಿ ಚಿತ್ರಿಸಿದ್ದಾರೆ. ಈ ಸೀಳುವ್ಯಕ್ತಿತ್ವದ ಧ್ವನಿಯನ್ನೇ 'ಶಿವರಾತ್ರಿ' ನಾಟಕದಲ್ಲಿ ಬಿಜ್ಜಳನ ಕೊನೆಯ ಮಾತುಗಳಲ್ಲಿಯೂ ಕಾಣಬಹುದಾಗಿದೆ. ಸೀಳಲ್ಪಟ್ಟಿರುವುದು ವಾಸ್ತವ ಒಂದಾಗಬೇಕಾದದ್ದು ಆದರ್ಶ. ಅದಕ್ಕೆ ದಾರಿಗಳು ಯಾವುವು ಎಂಬ ಕಂಬಾರರ ಸೃಜನಶೀಲ ಹುಡುಕಾಟ, ಅವರ ನಾಟಕಗಳ ಕೇಂದ್ರ ಕಾಳಜಿಯಾಗಿ ಹೊರಹೊಮ್ಮುತ್ತದೆ. ಈ ದಾರಿಗಳು ಕಾಮವೋ? ಜನನವೋ? ಚಾಳೀಸು ಹಾಕಿಕೊಂಡು ಮುಖವಾಡಗಳನ್ನು ಧರಿಸುತ್ತ ಬದುಕುವ ಕಪಟತನಗಳೋ, ಬಂಜೆತನವೋ, ಷಂಡತನವೋ, ಕನಸುಗಾರಿಕೆಯೋ ಹೀಗೆ ಯಾವುದು ಯಾವುದು ಆ ದಾರಿ ಎಂಬ ಹುಡುಕಾಟದಲ್ಲಿ 'ಮೃತ್ಯು'ವೂ ಕೂಡ ಪ್ರಧಾನ ಸ್ಥಾನವನ್ನೇ ಪಡೆದುಕೊಳ್ಳುತ್ತದೆ. ಕಾಮ, ಹುಟ್ಟು, ಬದುಕು, ಸಾವು, ಪ್ರೇಮ, ಬೆಳಕು ಯಾವುದು ಸತ್ಯ ಎಂಬ ಶೋಧ ಇಲ್ಲಿದೆ.

ಚಂದ್ರಶೇಖರ ಕಂಬಾರರನ್ನು ವಿನೋದ ಚೈತನ್ಯದ ನಾಟಕಕಾರ ಎನ್ನುವ ಡಿ.ಆರ್. ನಾಗರಾಜ್ ಅವರು ತಮ್ಮ ಲೇಖನದಲ್ಲಿ ''ಭಾರತೀಯ ಬರವಣಿಗೆಗೆ ನೀಡಿರುವ ಮಹತ್ವದ ಕೊಡುಗೆ ಎಂದರೆ ಅವರ (ಕಂಬಾರರ) 'ದೇಸಿ' ಕಲ್ಪನೆ; ಅವರ ಸಂವೇದನೆಯ ಕೇಂದ್ರ ಚೈತನ್ಯವಾದದ್ದು ದೇಸೀಯತೆ'' ಎನ್ನುತ್ತಾರೆ. ಮುಂದುವರೆದು ''ಭಾರತೀಯ ಸೃಜನಶೀಲತೆಯಲ್ಲಿ ಕಂಡುಬರುವ ಪ್ರಧಾನವಾದ ಪಾಶ್ಚಾತ್ಯ ಪ್ರಭಾವವನ್ನು ಸೌಮ್ಯೋಕ್ತಿಯಲ್ಲಿ ವಿಶಾಲವಾದ ವಿಶ್ವೀಯತೆ ಎಂದು ಕರೆಯಲಾಗುತ್ತಿದೆ. ಇದನ್ನು ನಾಲ್ಕು ಮಾರ್ಗಗಳಿಂದ ನಾವು ಎದುರುಗೊಳ್ಳಬಹುದೆಂದು ತೋರುತ್ತದೆ. ಅನುಕರಣೆಗಳು,

ಬುಡಮೇಲುಗಾರರು, ಮುಗ್ಧರು ಮತ್ತು ದೇವದಾಸಿಗಳು. ನನ್ನ ಪ್ರಕಾರ ಇವರೇ ಆ ನಾಲ್ಕು ವಿಧಾನಗಳನ್ನು ಪ್ರತಿನಿಧಿಸುವವರಾಗಿದ್ದಾರೆ. ಮೊದಲನೇ ಎರಡು ವರ್ಗದ ಜನರು ಪಶ್ಚಿಮದೊಡನೆ ಸರಾಗವಾದ ಸಂಬಂಧವನ್ನು ಹೊಂದಿದ್ದಾರೆ – ಬುಡಮೇಲುಗಾರರು ಅಂತಿಮವಾಗಿ ಪಶ್ಚಿಮದ ಪ್ರಭಾವವನ್ನು ಮೀರುವ ತುಡಿತವನ್ನು ಹೊಂದಿರುವುದು ನಿಜವಾದರೂ ಸಹ ಮೂರು ಮತ್ತು ನಾಲ್ಕನೇ ಮಾದರಿಯ ಸೃಜನಶೀಲತೆ ನಮಗೆ ಬಹಳವಾಗಿ ಒಗ್ಗುವಂಥವು. ಸಾಹಿತ್ಯಕ ಸಂಸ್ಕೃತಿಗಳನ್ನು ಘಾಸಿಗೊಳಿಸುವಂಥ ಉತ್ಕಟವಾದ ವಿವಾದಗಳ ಬಗ್ಗೆ ದಿವ್ಯ ನಿರ್ಲಕ್ಷ್ಯದಿಂದಿರುವ ಹುನ್ನಾರವನ್ನು ಮುಗ್ಧರು ರೂಢಿಸಿಕೊಂಡಿದ್ದಾರೆ. ನಾಲ್ಕನೇ ವರ್ಗವಾದ 'ದೇವದಾಸಿ'ಗಳು ಮುಗ್ಧರು ಹಾಗೂ ಬುಡಮೇಲುಗಾರರು ಇಬ್ಬರ ವಿಧಾನಗಳನ್ನೂ ತಮ್ಮಲ್ಲಿ ಒಳಗೊಂಡಿದ್ದಾರೆ. ಕಂಬಾರರು 'ದೇಸಿ' ಕಲ್ಪನೆಯಲ್ಲಿ ಒಡಮೂಡಿಬಂದ ಮುಗ್ಧ ಬರಹಗಾರರಾಗಿದ್ದಾರೆ... ಸೃಜನಾತ್ಮಕ ಮುಗ್ಧತೆ ಎನ್ನುವುದು ಕಂಬಾರರಿಗೆ ಒಂದು ಸಹಜ ಸ್ಥಿತಿಯಾಗಿರುವಂತೆಯೇ ಅದು ಒಂದು ಸೈದ್ಧಾಂತಿಕವಾದ ಆಯ್ಕೆಯೂ ಕೂಡ ಆಗಿದೆ... ಅವರ ತಾತ್ವಿಕತೆಯ ಮೂಲವನ್ನು ನಾವು ಅವರ ಸೃಜನಶೀಲತೆಯಲ್ಲೇ ಹುಡುಕ ಬೇಕಾಗಿದೆ. ವಿಪರ್ಯಾಸವೆನ್ನುವಂತೆ ಕಂಬಾರರ ಅತಿ ದೇಸೀಯತೆಯು ಅವರನ್ನು ಒಬ್ಬ ಅತ್ಯಾಧುನಿಕ ನನ್ನಾಗಿ ಮಾಡಿದೆ. ಕಂಬಾರರ ನಾಟಕಗಳು ಹೊಸ ಜಗತ್ತಿನೊಡನೆ ಹೊಂದಾಣಿಕೆ ಮಾಡಿಕೊಳ್ಳುತ್ತಿರುವ ಹಳೆಯ ಜಗತ್ತಿನ ಪ್ರಸಂಗಗಳಾಗಿವೆ'' ಎಂದು ಅರ್ಥಪೂರ್ಣವಾಗಿ ವ್ಯಾಖ್ಯಾನಿಸಿದ್ದಾರೆ.

ಆದರೆ ಕಂಬಾರರ ತಾತ್ವಿಕತೆಯ ಹಾಗೂ ಅವರ ಸೃಜನಶೀಲತೆಯ ಮೂಲವನ್ನು ಅವರ ಶಾಕ್ತಪ್ರತಿಭೆಯ ಹಾಗೂ ಶಾಕ್ತ, ಸಾಂಖ್ಯದರ್ಶನಗಳ 'ನೆಲ'ದ ಮೂಲದ ನೆಲೆಯಲ್ಲಿ ಗುರುತಿಸಬಹುದಾಗಿದೆ. ಪ್ರಕೃತಿಯಿಂದ ಪುರುಷ ಹುಟ್ಟುವ, ಚೈತನ್ಯರೂಪಿಯಾಗುವ 'ಶಿವ', 'ಶಿವಪುರ'ಗಳ ದರ್ಶನ ಅವರಲ್ಲಿದೆ.

ಕಂಬಾರರನ್ನು 'ಮುಗ್ಧ' ಬರಹಗಾರರು ಎಂದು ಗುರುತಿಸುವುದಕ್ಕಿಂತ 'ದೇವದಾಸಿ' ಬರಹಗಾರರೆಂದು ಗುರುತಿಸುವುದು ಉತ್ತಮ. ಏಕೆಂದರೆ ಡಿ.ಆರ್. ನಾಗರೇಜ್ ಅವರ ಪ್ರಕಾರ 'ದೇವದಾಸಿ' ಬರಹಗಾರರ ಮಾದರಿಯೆಂದರೆ ''ನಾಲ್ಕನೇ ವರ್ಗದ 'ದೇವದಾಸಿ'ಗಳು ಮುಗ್ಧರು ಹಾಗೂ ಬುಡಮೇಲುಗಾರರು ಇಬ್ಬರ ವಿಧಾನಗಳನ್ನೂ ತಮ್ಮಲ್ಲಿ ಒಳಗೊಂಡಿದ್ದಾರೆ.'' ಇದು ಕಂಬಾರರಲ್ಲಿಯೂ ಕಂಡುಬರುತ್ತದೆ. ಹಾಗಾಗಿಯೇ ಅವರ 'ದೇಸಿ'ಯತೆ ಪ್ರಕೃತಿ ತತ್ವ ಅಥವಾ ಭೂತತ್ವ ಅಥವಾ ಶಕ್ತಿತತ್ವಗಳೊಂದಿಗೆ ಪುರುಷತತ್ವ ಅಥವಾ ಆಕಾಶತತ್ವ ಅಥವಾ ಶಿವತತ್ವಗಳನ್ನು ಸಂಗಮಗೊಳಿಸುವ ಶೈವ ವೈಷ್ಣವ ಪೂರ್ವದ ತಾತ್ವಿಕತೆಯಾಗಿ ಹೊರಹೊಮ್ಮುತ್ತದೆ. ಡಿ.ಆರ್. ನಾಗರಾಜ್ ಅವರು ಹೇಳುವಂತೆ ''ಕಂಬಾರರ ನಾಟಕಗಳು ಹೊಸ ಜಗತ್ತಿನೊಡನೆ ಹೊಂದಾಣಿಕೆ ಮಾಡಿಕೊಳ್ಳುತ್ತಿರುವ ಹಳೆಯ ಜಗತ್ತಿನ ಪ್ರಸಂಗಗಳಾಗಿವೆ'' ಎಂಬುದು ಸರಿಯಲ್ಲ. ನಿಜವಾಗಿಯೂ ಕಂಬಾರರ ನಾಟಕಗಳು ಹೊಸ ಜಗತ್ತು ಹಳೆಯ ಜಗತ್ತಿನೊಡನೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ಬದಲಾಗಿ ಸಾರ್ವಕಾಲಿಕ ಸತ್ಯವನ್ನು ಶೋಧಿಸುತ್ತಿರುವ ಸೃಜನಶೀಲ ಪ್ರಸಂಗಗಳಾಗಿವೆ. ಹಾಗಾಗಿಯೇ ಅವರು ಹಳೆಯ ಜಗತ್ತಿನ ಅಪ್ಪಟವಾದ ಅಂಗವಾಗಿರುವಂತೆಯೇ ಅತ್ಯಾಧುನಿಕ ಜಗತ್ತಿನ ಅಂಗವಾಗಿಯೂ ಕಂಡುಬರುತ್ತಾರೆ. ಅದರಿಂದಾಗಿಯೇ ''ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ ಒಟ್ಟಿನಲ್ಲಿ ಕಂಬಾರರಂಥ ಲೇಖಕರು ಸಮಗ್ರ ಸೃಷ್ಟಿಕರ್ತರಾಗಿದ್ದಾರೆ'' ಎಂಬ ಮಾತಿಗೆ ಅರ್ಹರಾಗಿದ್ದಾರೆ. ಅವರು ಸಮಗ್ರ ಸೃಷ್ಟಿಕರ್ತರಾಗಿರುವಂತೆ ಅವರ ಸೃಷ್ಟಿಯಲ್ಲಿಯೂ ಒಂದು ಸಮಗ್ರತೆ ಕಂಡುಬರುತ್ತದೆ. ಅದಕ್ಕೆ ಕಾರಣವನ್ನು ಅವರ ಮಾತಿನಲ್ಲಿಯೇ ಗುರುತಿಸುವುದಾದರೆ –

''ನನ್ನ ಬಗ್ಗೆಯೇ ಮಾತನಾಡುತ್ತೇನೆ ಮೊದಲು. ಭೌಗೋಳಿಕವಾಗಿ ನಾನು ಒಂದು ಗ್ರಾಮಕ್ಕೆ

ಸೇರಿದವನು, ಸಾಮಾಜಿಕವಾಗಿ ಒಂದು ಅಲಕ್ಷಿತವಾದ, ಅಶಿಕ್ಷಿತವಾದ ಸಮುದಾಯಕ್ಕೆ ಸೇರಿದವನು. ಹಾಗಾಗಿ ನಾನೊಬ್ಬ ಜಾನಪದ ಮನುಷ್ಯ – ಏಕೆಂದರೆ ನಾನು ಬೇರೇನೂ ಆಗಲಿಕ್ಕೆ ಸಾಧ್ಯವಿಲ್ಲ. (ಈ ಅಂಶವನ್ನು ನಾನು ಒತ್ತಿ ಹೇಳಲು ಕಾರಣ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಸುಶಿಕ್ಷಿತ ನಗರ ಪ್ರದೇಶದವರ ಪೈಕಿ 'ಜಾನಪದೀಯತೆ' ಎಂಬುದು ಬಹಳ ಆಕರ್ಷಕವಾಗತೊಡಗಿದೆ.) ನಾನು ಬರೆದ ಮೊದಲಿನ ದೀರ್ಘ ಪದ್ಯ 'ಹೇಳತೇನ ಕೇಳ'ವು ಸಂಪೂರ್ಣವಾಗಿ ನನ್ನ ನೆಲದಿಂದ ರೂಪುಗೊಂಡದ್ದು. ಇಪ್ಪತ್ತೈದು ವರ್ಷಗಳ ನಂತರ ಮತ್ತೆ ಆ ಪದ್ಯದತ್ತ ಹೊರಳಿ ನೋಡಿದಾಗ ಇದುವರೆಗೆ ನಾನು ಬರೆದಿರುವುದೆಲ್ಲವೂ ಅದರೊಡನೆ ವಸ್ತುವಿಷಯದಲ್ಲಿ ಒಂದು ಸಂಬಂಧವನ್ನು ಹೊಂದಿರುವುದು ಕಾಣುತ್ತೆ... 'ಹೇಳತೇನ ಕೇಳ'ವನ್ನು ರೂಪಿಸಿದ ಜಾನಪದ ಮಾಧ್ಯಮವೇ ಜೋಕುಮಾರಸ್ವಾಮಿ ಮತ್ತು ಇತರ ನಾಟಕಗಳನ್ನು ಸಾಧ್ಯವಾಗಿಸಿತು ಎಂದು ಧೈರ್ಯವಾಗಿ ಹೇಳುತ್ತೇನೆ. ನನ್ನೊಳಗಿನ ಉತ್ಕಟವಾದ ಅನಿಸಿಕೆಯೆಂದರೆ ಒಂದು ಸಮಗ್ರವಾದ ಕಲೆಯನ್ನು ನಾನು ನಿಭಾಯಿಸಿದ್ದೇನೆ ಎಂಬುದು. ಇಷ್ಟು ವರ್ಷ ಈ ಅನಿಸಿಕೆ ನನ್ನೊಳಗಿದೆ – ಇನ್ನು ಮುಂದೆಯೂ ಅದು ಸ್ಥಾಯಿಯಾಗಿರುವುದೆನ್ನಲು ಅಡ್ಡಿಯಿಲ್ಲ'' ಎಂದಿದ್ದಾರೆ. ಅವರ ಈ ಮಾತು ಅವರ ಕೃತಿಗಳನ್ನು ಓದಿದಾಗ ಇನ್ನಷ್ಟು ಹೆಚ್ಚು ಸ್ಪಷ್ಟವಾಗುತ್ತದೆ. ''ಸಮಗ್ರ ಕಲೆಯನ್ನು ನಿಭಾಯಿಸಿದ್ದೇನೆ'' ಎಂಬ ಮಾತಿನಲ್ಲಿ 'ಕಲೆ' ಎಂಬುದನ್ನು 'ಸಕಲಾ' ಅಂದರೆ ಪಾರ್ವತಿ ಎಂಬ ಭಾರತೀಯ ಸಂಸ್ಕೃತಿಯ ತಾತ್ವಿಕ ಅರ್ಥದಲ್ಲಿಯೂ ಗ್ರಹಿಸಬಹುದು. ಸಮಗ್ರ ಕಲೆ – ಸಕಲಾ ಕಂಬಾರರ ನಾಟಕಗಳಿಗೆ ಧ್ವನಿಪೂರ್ಣವಾಗಿ ಒಪ್ಪುತ್ತದೆ. ಅವರದು 'ನಿಷ್ಕಲ' ಮಾರ್ಗವಲ್ಲ 'ಸಕಲಾ' ಮಾರ್ಗ! ಅದನ್ನು ಮುಂದೆ ಅವರ ನಾಟಕಗಳ ಮೂಲಕ ಗ್ರಹಿಸೋಣ.

ಚಂದ್ರಶೇಖರ ಕಂಬಾರ ಅವರು 'ಋಷ್ಯಶೃಂಗ'ದಿಂದ 'ಮಾರೀಕಾಡು' ನಾಟಕದವರೆಗೆ ಇಪ್ಪತ್ತೆರಡು ನಾಟಕಗಳನ್ನು ಬರೆದಿದ್ದಾರೆ. ಋಷ್ಯಶೃಂಗ, ನಾರ್ಸಿಸಸ್, ಜೋಕುಮಾರಸ್ವಾಮಿ, ಚಾಳೇಶ, ಜೈಸಿದ ನಾಯಕ, ಕಾಡುಕುದುರೆ, ನಾಯೀಕತೆ, ಹರಕೆಯ ಕುರಿ, ಹುಲಿಯ ನೆರಳು, ಸಾಂಬಶಿವ ಪ್ರಹಸನ, ತುಕ್ರನ ಕನಸು, ಬೆಪ್ತಕ್ಕಡಿ ಬೋಳೇಶಂಕರ, ಮಹಾಮಾಯಿ, ಶಿವರಾತ್ರಿ, ಮಾರೀಕಾಡು ಮೊದಲಾದ ಪ್ರಸಿದ್ಧ ನಾಟಕಗಳನ್ನು ಕನ್ನಡ ಸಾಹಿತ್ಯಕ್ಕೆ ಮಾತ್ರವಲ್ಲ ಭಾರತೀಯ ಸಾಹಿತ್ಯಕ್ಕೆ ಅಪೂರ್ವವಾದ ಕೊಡುಗೆಯನ್ನಾಗಿ ನೀಡಿದ್ದಾರೆ. ಈವರೆಗಿನ ಎಲ್ಲಾ ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡ ಸಾಹಿತಿಗಳಲ್ಲೇ ಅತ್ಯಂತ ಭಿನ್ನವಾದ ವ್ಯಕ್ತಿತ್ವ, ಸೃಜನಶೀಲತೆ, ಪ್ರತಿಭೆಯನ್ನು ಹೊಂದಿದ ನಿಜವಾದ 'ನೆಲ'ಮೂಲದ ಕನ್ನಡದ ಶ್ರೇಷ್ಠ ಬರಹಗಾರರು ಚಂದ್ರಶೇಖರ ಕಂಬಾರರು. ಏಳುಕೊಳ್ಳದ ಎಲ್ಲವ್ವ ಏಳುಬೆಟ್ಟದ ಮಹಾದೇವನಾಗಿ ಬೆಳೆದ ಪ್ರತಿಭೆ ಅದು!

'ಮಹಾಮಾಯಿ' ನಾಟಕವನ್ನು ಕುರಿತು ಬರೆಯುವಾಗ ಜಿ.ಎಸ್. ಆಮೂರ ಅವರು ''ಬೇರೆ ಬೇರೆ ಮೂಲಗಳಿಂದ ಆಯ್ದ ವಿಸ್ಮಯಕಾರಿಯಾದ ಸಂಕೇತಗಳ ಸರಮಾಲೆಯೇ ನಾಟಕದಲ್ಲಿ ಕಂಡುಬಂದಿದ್ದು ಅದರ ದೃಶ್ಶೀಯ ಹಾಗೂ ಕಾಲ್ಪನಿಕ ಶಕ್ತಿಯನ್ನು ಗಮನಿಸಿದರೆ ಕನ್ನಡ ನಾಟಕಗಳಲ್ಲಿ ಏಕೆ ಸಮಕಾಲೀನ ಭಾರತೀಯ ನಾಟಕಗಳಲ್ಲಿಯೇ ಇದಕ್ಕೆ ಸರಿಸಮಾನವಾದ ಇನ್ನೊಂದು ಕೃತಿ ಇದೆ ಎಂದು ಅನ್ನಿಸುವುದಿಲ್ಲ'' ಎಂಬ ಮಾತು ಗಮನಾರ್ಹವಾದದ್ದು.

ಕಂಬಾರರ ನಾಟಕಗಳಲ್ಲಿ ಋಷ್ಯಶೃಂಗ, ಜೋಕುಮಾರಸ್ವಾಮಿ, ಕಾಡುಕುದುರೆ, ಮಹಾಮಾಯಿ ಮೊದಲಾದ ನಾಟಕಗಳು ವ್ಯಕ್ತಿಯ ಒಳಗು ಹೊರಗನ್ನು ಅನುಸಂಧಾನ ಮಾಡುವಾಗ ನಡೆಸುವ ಅತೀವವಾದ ಉತ್ಕಟತೆ, ಸಂಘರ್ಷ, ಸಮರಸದ ರಸಯಾತ್ರೆಯಾಗಿ ಸಾಗುವ ನಾಟಕಗಳಾದರೆ ಜೋಕುಮಾರಸ್ವಾಮಿ, ಜೈಸಿದ ನಾಯಕ, ತುಕ್ರನ ಕನಸು, ಹುಲಿಯ ನೆರಳು, ಹರಕೆಯ

ಕುರಿ ಮೊದಲಾದ ನಾಟಕಗಳು ವ್ಯವಸ್ಥೆಯನ್ನ ಅದರ ಒಳಹೊರಗಿನ ಸಂಘರ್ಷಗಳನ್ನು ಚಿತ್ರಿಸುವ ಮೂಲಕ ಅದರ ಒಳಗಿನ ಕನಸುಗಳ ಲೋಕವನ್ನು ಕಟ್ಟಿಕೊಡುವ ನಾಟಕಗಳಾಗಿವೆ. ಶಿವರಾತ್ರಿ, ಬಸವಣ್ಣ, ಬಿಜ್ಜಳರ ಮಹಾಮನೆ ಅರಮನೆಯ ನಡುವಿನ ಸಂಘರ್ಷದ ನಡುವೆ 'ಸಂಗಯ್ಯನ ಲಿಂಗಪೂಜೆ'ಯ ಮಹತ್ತನ್ನು ಬಿಂಬಿಸುವ ಕಲ್ಯಾಣಕ್ಕಾಗಿ ಕೂಡಲ ಸಂಗಮ ಅದೂ 'ಶಿವಪುರ' ಎಂಬ ಕೂಡಲಸಂಗಮಕ್ಕೆ ಯಾತ್ರೆ ಹೊರಟ ನಾಟಕವಾಗಿದೆ. ಅಂಥ ಯಾತ್ರೆ ಕೈಗೊಳ್ಳಬೇಕಾದರೆ 'ಸೀಳಿಕೊಳ್ಳದೆ' ಒಂದಾಗಿರಬೇಕೆಂಬ ಧ್ವನಿಯ ಅತ್ಯುತ್ತಮ ನಾಟಕ 'ಸಿರಿಸಂಪಿಗೆ'ಯಾಗಿದೆ. 'ಮಾರೀಕಾಡು' ಇತ್ತೀಚೆಗೆ ಅಂದರೆ 2012ರಲ್ಲಿ ಪ್ರಕಟವಾಗಿರುವ ಶೇಕ್ಸ್‌ಪಿಯರನ ಮ್ಯಾಕ್‌ಬೆತ್ ನಾಟಕದಿಂದ ಸ್ಫೂರ್ತಿ ಪಡೆದು ರಚನೆಯಾದ ಭಾವಾನುವಾದದಂಥ ನಾಟಕ.

ಕಂಬಾರರ ಮೊದಲ ನಾಟಕ 'ಋಷ್ಯಶೃಂಗ'ದಲ್ಲಿಯೇ ಕಂಬಾರರ ಸಮಗ್ರ ಕಲೆಯ ಅಂಕುರ ವನ್ನು ಕಾಣಬಹುದು. 1970ರಲ್ಲಿ ರಚನೆಯಾದ ಈ ನಾಟಕದಲ್ಲಿ 'ಕಮಲಿ' ಹಾಗೂ 'ಯಮಿನಿ' ಎಂಬ ಇಬ್ಬರು ಹುಡುಗಿಯರ ಮೂಲಕ ಅಮರತ್ವ ಹಾಗೂ ಮರಣತ್ವದ ಸಂಗದ, ಸಂಘರ್ಷದ, ಸಂಕೀರ್ಣತೆಯನ್ನು ನಮ್ಮ ಮುಂದಿಡುತ್ತಾರೆ. ಕಂಬಾರರ 'ದೇವದಾಸಿ' ಮಾದರಿಯ ಸೃಜನಶೀಲತೆ ಕೇವಲ ಮುಗ್ಧ ಹಾಗೂ ಬುಡಮೇಲುಗಾರರ ಮಾದರಿಗಳನ್ನು ಒಳಗೊಂಡದ್ದಲ್ಲ. ಶಾಕ್ತ ಪರಂಪರೆಯ 'ದೇವದಾಸಿ' ಮಾದರಿಯದ್ದೂ ಹೌದು.

ಇಂದು ಶಾಕ್ತ ಪರಂಪರೆಯ ತಂತ್ರಕ್ಕೆ, 'ದೇವದಾಸಿ'ಗೆ ಹೀನಾರ್ಥ ಪ್ರಾಪ್ತವಾಗಿದೆ. 'ದೇವದಾಸಿ' ಎಂದರೆ 'ಸೂಳೆ' ಎಂಬ ಮಟ್ಟವನ್ನು ಮುಟ್ಟಿದೆ. ಹಾಗೆ ಹೀನಾರ್ಥಕ್ಕೆ ಪಕ್ಕಾದ ಸಂಸ್ಕೃತಿ, ಪರಂಪರೆ ಹಾಗೂ ದರ್ಶನವನ್ನು ಕಂಬಾರರು ತಮ್ಮ ಸೃಜನಶೀಲತೆಯ ಮೂಲಕ ಉತ್ತಮಾರ್ಥಕ್ಕೆ ತಂದು ನಿಲ್ಲಿಸುತ್ತಾರೆ. ಆ ಮೂಲಕ ಇಂದಿನ ಶೂದ್ರರ, ದಲಿತರ, ಎಲ್ಲಾ ತಳಸಮುದಾಯದವರ ಶಾಕ್ತ ಪರಂಪರೆಗೆ ಅಂಟಿದ್ದ ವಿಸ್ಮೃತಿಯನ್ನು ಕಿತ್ತೊಗೆದು ಅಸ್ಮಿತೆಯನ್ನು ತಂದುಕೊಟ್ಟಿದ್ದಾರೆ. 'ಋಷ್ಯಶೃಂಗ' ನಾಟಕದಲ್ಲಿ ಸೂತ್ರಧಾರ, ಬಳಿಕ ಮೊಟ್ಟಮೊದಲು ಕಾಣಿಸಿಕೊಳ್ಳುವ ಪಾತ್ರವೆಂದರೆ 'ಹೊಲೇರ ಕಮಲಿ.' 'ಶಿವರಾತ್ರಿ' ನಾಟಕದಲ್ಲಿ ಮುಗ್ಧ ಸಂಗಯ್ಯ 'ಲಿಂಗಪೂಜೆ' ಮಾಡಿಕೊಳ್ಳುವುದು, ಹಿಂದೆಂದೂ ಕಾಣದ ತೃಪ್ತಿಯನ್ನು ಕಾಣುವುದು ಸೂಳೆ ಸಾವಂತ್ರಿ ಮನೆಯಲ್ಲಿ ಕಾಮಾಕ್ಷಿಯ ಹಾಸಿಗೆಯ ಮೇಲೆ! ಹೀಗೆ ಕಂಬಾರರು 'ದೇವದಾಸಿ'ಯ ನಿಜವಾದ ಉತ್ತಮಾರ್ಥದ ಸೃಜನಶೀಲ ಪ್ರತಿಭೆಯಾಗಿ ಕಾಮವನ್ನು ಪ್ರೇಮವನ್ನಾಗಿಸುವ ಸಾವನ್ನು ಗೆಲ್ಲುವ ಮಾರ್ಗವನ್ನಾಗಿಸುವ, ಬದುಕನ್ನು ಬದುಕಾಗಿಸುವ, ಮನುಷ್ಯನನ್ನು ಮನುಷ್ಯನನ್ನಾಗಿಸುವ, ಮೋಕ್ಷವನ್ನು ಅರ್ಥಾತ್ ಸ್ವಾತಂತ್ರ್ಯವನ್ನು ಶೋಧಿಸಿದ್ದಾರೆ. ಇವರ 'ಬಯಲಾಟ' ಎಂಬುದು 'ಬಯಲ' ಆಟ ಎಂಬ ಅರ್ಥದಲ್ಲಿಯೂ ಧ್ವನಿಪೂರ್ಣವಾಗಿದೆ. ಮೇಲ್ನೋಟದಲ್ಲಿ ಹೆಣ್ಣು ಗಂಡಿನ ಕಾಮವಾಗಿ ಕಾಣುವುದು ಸೃಜನಶೀಲತೆ ಯಿಂದ ಕಪಟವಿಲ್ಲದ ಪ್ರೇಮವಾದಾಗ ಅದು ಹೇಗೆ ಲೋಕದ ಫಲವಂತಿಕೆಗೂ ಶಕ್ತಿಯಾಗಿ ಹೊಸ ಹೊಸ ಬದುಕಿನ ಬೆಳಕಿಗೆ ಕಾರಣವಾಗುತ್ತದೆ ಎಂಬುದು ಕಂಬಾರರ ನಾಟಕಗಳಲ್ಲಿ ಕಂಡುಬರುತ್ತದೆ. ಅದನ್ನು ಡಿ.ಆರ್. ನಾಗರಾಜ್ ಅವರು ''ಕಂಬಾರರು ಕಾಮದ ಸಾಮರ್ಥ್ಯದ ಪರವಾಗಿದ್ದಾರೆ. ಕಂಬಾರರು ಚರಿತ್ರೆಯನ್ನು ಓದುವ ಕ್ರಮ – ಸಮಕಾಲೀನ ಚರಿತ್ರೆಯೂ ಸೇರಿದಂತೆ – ಯಾವಾಗಲೂ ಅದು ಫಲಶಕ್ತಿಯ ಪುರಾಣವಾಗಿದೆ ಎಂಬ ಹಿನ್ನೆಲೆಯಿಂದ ರೂಪಿತವಾದದ್ದಾಗಿರುತ್ತದೆ'' ಎಂದು ಗುರುತಿಸಿದ್ದಾರೆ. ಅದನ್ನು ಮತ್ತಷ್ಟು ಸ್ಪಷ್ಟವಾಗಿ ಹೇಳುವುದಾದರೆ ಕಂಬಾರರು ಕಾಮದಿಂದ ಹುಟ್ಟಬಹುದಾದ ಅನೇಕ ಸಾಧ್ಯತೆಗಳ ಶೋಧ ನಡೆಸಿದ್ದಾರೆ. ಕಾಮದ ಸಾಮರ್ಥ್ಯ – ಫಲಶಕ್ತಿ – ಅರ್ಥಾತ್ ಕುಂಡಲಿನಿ ಶಕ್ತಿ ಅರ್ಥಾತ್ 'ಕಮಲಿ' ಎಂಬ ಶಾಕ್ತ ಪರಂಪರೆಯ 'ಲಜ್ಜಾಗೌರಿ'ಯ

ಪುರಾಣವಾಗಿಯೇ ಗ್ರಹಿಸುತ್ತಾರೆ.

ಈ ಪುರಾಣವನ್ನು, ಚರಿತ್ರೆಯನ್ನು, ವರ್ತಮಾನದ ಮುಖಗಳ ರಂಗಭೂಮಿಯ ಮೇಲೆ ಭವಿಷ್ಯದ ನಾಟಕವನ್ನು ಹುಡುಕುವ ಕಂಬಾರರ ಕಾಣ್ಕೆ ಋಷ್ಯಶೃಂಗದ ಪ್ರಾರಂಭದ ಸೂತ್ರಧಾರಿಯ ಮಾತುಗಳಲ್ಲಿಯೇ ಗೋಚರಿಸುತ್ತದೆ.

''ಗೀತರೂಪದಿಂದ ಗೀತೀ ಮಾಡದs ಪ್ರೀತೀಲೆ
ನೀತಿ ಹೇಳತೇವು –
ಇದೆಲ್ಲಾ ನಮ್ಮ ನಿಮ್ಮೊಳಗs ಹುಟ್ಟಿ, ಒಳಗೊಳಗs
ಬೆಳದದ್ದಂತ ತಿಳಕೊಂಡು, ಶರಣದಿಂದವರನ್ನ
ಕರುಣದಿಂದ ಕೇಳಬೇಕಂತ ಹೇಳಿ
ಹಿರೇರೆಲ್ಲಾರ್ರಿಗೂ ನಮೋ ನಿಮ್ಮ ಪಾದಕ''

ಎಂದು ''ನಮ್ಮ ನಿಮ್ಮೊಳಗ ಹುಟ್ಟಿ ಒಳಗೊಳಗs ಬೆಳದದ್ದನ್ನ'' ಹೇಳುವ ಪ್ರಯತ್ನಕ್ಕೆ ಮುಂದಾಗುವ ಕಂಬಾರರು

''ಒಡಕ ಗಡಗಿಹಾಂಗ ಬರೀ ಸಪ್ಪಳಾಗತೈತಿ
ಒಳದನಿ ಸಿಗೋದs ಇಲ್ಲ''

ಎಂದು ತಳಮಳಗೊಳ್ಳುತ್ತಲೇ 'ಒಳದನಿ'ಯನ್ನು ಹಿಡಿಯುವಂಥ ಪ್ರಯತ್ನವನ್ನು ಒಡಕಗಡಗಿ ಸಪ್ಪಳದ ನಡುವೆಯೇ ನಡೆಸಿದ್ದಾರೆ. ಅವರ ಒಟ್ಟಾರೆ ಸೃಜನಶೀಲತೆಯ ಗುರಿ 'ಒಳದನಿ'ಯನ್ನು ಹಿಡಿಯುವುದೇ ಆಗಿದೆ.

''ಮೂಲ ಮೀಸಲ, ಶಿವಾ ಮುರೀದs ಉಳೀತೈತಿ
ಎಲ್ಲಿಂದ ಹೊರಟು ಎಲ್ಲಿಗ್ಗಿ ಬಂದಿವಿ?''

ಎಂಬ ಕಾಣ್ಕೆ ಹಾಗೂ ಕಾಣಬೇಕಾದವರ ಮುಂದಿಡುವ ಪ್ರಶ್ನೆ ಮೊದಲ ನಾಟಕದಲ್ಲೇ ಹುಟ್ಟಿ ಮುಂದಿನ ನಾಟಕಗಳಲ್ಲೂ ಬೆಳೆಯುತ್ತಾ ಬಂದಿದೆ. ಈ 'ಮೂಲ ಮೀಸಲ, ಶಿವಾಮುರೀದs ಉಳೀತೈತಿ' ಎಂಬ ಮಾತು ಹೊಲೇರ ಕಮಲಿ, ಆಕೀ ಕನಸು, ಮುದೀಗೌಡನ ಕಪಟ, ಬಾಳಗೊಂಡನ ಹತಾಶೆ ಸಿಟ್ಟು ಕೊಲೆಗಳಾಗಿ ಬೆಳೆಯುವ ರಾಮಗೊಂಡನ ಆಗಮನದಿಂದ ಮಳೆ ಸುರಿಯುವ ತಾಯಿಯಾದ ಗೌಡ್ತಿ ಮೈ ಬೆವರುವ ದೃಶ್ಯದೊಂದಿಗೆ ಮುಕ್ತಾಯವಾಗುವ 'ಋಷ್ಯಶೃಂಗ'ದುದ್ದಕ್ಕೂ ಅತ್ಯಂತ ಸಂಕೀರ್ಣವಾಗಿ ಚಿತ್ರಿಸಲ್ಪಟ್ಟಿದೆ. ಈ ಬದುಕಿನ ನಾಟಕವನ್ನು ನಾಟಕಕಾರ ಹುಡುಕುವುದು ಹೀಗೆ :

''ನಮ್ಮ ನಿಮ್ಮ ಮುಖಗೋಳೆಲ್ಲ ಆಟದ ಅಬ್ಬನ!
ಹೌದೂ ಅಲ್ಲೋ ನೋಡ್ರೆಲಾ–
ಹರೀವತ್ತೆದ್ದ ಮಲಗೋತನಕ ಎಷ್ಟ ಬಯಲಾಟ
ಮಾಡತೇವ, ಎಷ್ಟು ಸೋಗ, ಎಷ್ಟ ಮುಖವಾಡ!
ಹೊರಗಾ ಒಳಗಾ ಒಂದ ಮಾಡೋ ನಿಜಲಿಂಗ
ಎಲ್ಲಿಯಾ ಕಡೆ, ಯಾ ಗವ್ವಾಗಿದಾನೋ!

ಆಡತೇವ, ಕುಡೀತೇವ, ತಿಂತೇವ, ನಡೀತೇವ–
ಏನಂದರೂ ನಮ್ಮ ಗುರುತ ನಮಗಿಲ್ಲ.
ಜಳಕಾ ಮಾಡಾಕ ಹೋದಾಗ ಬಾಂವ್ಯಾಗ ಒಮ್ಮೊಮ್ಮಿ
ಗುರುತ ಹತ್ತಿಧಾಂಗಾಗಿ ಕೈಚಾಚತೇವು, ಆದರ
ಮುಟ್ಟಿದರೆ ತೆಕ್ಯಾಗಿಲ್ಲ, ಹಿಡಿದರ ಹಿಡ್ಯಾಗಿಲ್ಲ
ಮೂಗ ಹಿಡದ ಅಳಬೇಕಂದರ, ಹೆಣಾಕಂಡ ಅಳೋದ
ಭಾಳ ಹಳೀ ಪದ್ಧತಿ, ಏನ ಮಾಡೋಣು?''

ಎಂಬ ಸೂತ್ರಧಾರನ ಮಾತುಗಳಲ್ಲಿ ಕಂಬಾರರ ಎಲ್ಲ ನಾಟಕಗಳ ಮೂಲ ಕಾರಣ ಪ್ರೇರಣೆಯ ಮೀಸಲಿದೆ. ಅದು ಶಿವಾ ಮುರುದೂ ಉಳಿದಿದೆ ಮುಕ್ಕಾಗದ್ಹಾಂಗೆ! ಹೊಲೇರ ಕಮಲಿ ಮನಿ, ಹೊಲೇರ ಯಮನೀ ಮನಿ, ಹೊಲೇರ ಪಾರಿಯ ಮಗಳು ಕಮಲಿ ನಾಟಕದ ಪಾತ್ರ. ಆದರೆ 'ಯಮನೀ' ಪಾತ್ರವಲ್ಲದ ಪಾತ್ರ. ಬೇರೆ ಪಾತ್ರಗಳ ಸಂದರ್ಭದಲ್ಲಿ ವ್ಯಕ್ತವಾಗುವ ಪಾತ್ರ. ಯಮನೀ ಮನೀಗೆ ಹೋಗಿ ಆಕಿ ಮುಟ್ಟಿದ ಭರಮ್ಯಾ ಸಾಯುತ್ತಾನೆ. ಯಮನೀಯೂ ಸಾಯುತ್ತಾಳೆ. ಭರಮ್ಯಾನ ಗೋರಿ ಮಾಡುವಾಗ ಸತ್ತಿದ್ದ ಗುರಿವ್ಯಾನ ಸಮಾಧಿ, ಕುರುಬ ಪುಂಡ್ಯ ಸಾಯುವ ಚಿತ್ರಣ ಋಷ್ಯಶೃಂಗದ ಪ್ರಾರಂಭದಲ್ಲೇ ಬರುತ್ತದೆ. ಉಳಿದವರೆಲ್ಲಾ ''ಜೀಂವಾ ಕೈಯಾಗ ಹಿಡಕೊಂಡ'' ಓಡಿದರು. ಮುಂದೆ ಬಾಳಗೊಂಡ ಮಗನೇ ಅಪ್ಪ ಮುದಿಗೌಡನನ್ನು ಕೊಂದು ಮೂಟೆಕಟ್ಟಿ ಬೆನ್ನಮೇಲೆ ಹೊತ್ತುಕೊಂಡು ಬರುವಾಗ ಸೂತ್ರಧಾರನನ್ನು ಕುರಿತು ''ನನ್ನ ಬೆನ್ನಮ್ಯಾಲಿಂದೇನು?'' ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಸೂತ್ರಧಾರ ''ಕರ್ಮದ ಗಂಟು'' ಎಂದು ನೀಡುವ ಉತ್ತರ ಧ್ವನಿಪೂರ್ಣವಾಗಿದೆ. ''ಬಲಕ್ಕ ಬೇವಿನ ಮರ, ಎಡಕ್ಕ ತೆಂಗಿನಮರ, ನಡಕಿನ ಹೊಲಗೇರ್ಯಾಗಿರು ವಂಥಾ ಹೊಲೇರ ಪಾರೀಮಗಳು ಕಮಲಿ'' ಎಂಬ ಕಮಲಿಯ ತಾಯಿ ಪಾರಿ ಗುಡದವ್ವ ಏನ ನಿನ್ನ ಆಟ? ಎಂದು ಆಶ್ಚರ್ಯಪಡುತ್ತ ಕಮಲಿ ಕಂಡ ಕನಸನ್ನು ವರ್ಣಿಸುತ್ತಾಳೆ. ಕಮಲಿ ಕಂಡ ಕನಸು ''ಅಂದಽ ರಾತ್ರಿ ಕನಸಿನ್ಯಾಗ ಬಂದ ಬಳಕ ಹುಡುಗ – ಕೆಂಪ ಈಟೀಟ ಜಡಿ, ಜಡ್ಯಾಗೊಂದ ಎಳಿ ಸೂರ್ಯಾನಿಟಗೊಂಡ ಮಲ್ಲಿಗಿ ಹೂವಿನ್ಹಾಂಗ ನಕ್ಕೋತ ಬಂದ ನೋಡಾಽ!'' ಎಂಬ ಮಾತುಗಳು, 'ರತ್ನ' ಕಳಕೊಂಡ ಬಾಳಗೊಂಡ, 'ರತ್ನ' ಕದ್ದ ಮುದಿಗೌಡ ಪಡುವ ಪಾಡು, 'ಗೌಡ್ತಿ' ಕೂಡಿದ ಚಿತ್ರ ಎಲ್ಲವೂ ಧ್ವನಿಪೂರ್ಣವಾದ ಚಿತ್ರಣಗಳಾಗಿ ನಾಟಕಕ್ಕೆ ಒಂದು ಸಂಕೀರ್ಣತೆಯನ್ನು ತಂದುಕೊಟ್ಟಿವೆ.

ಕಂಬಾರರ ನಾಟಕದಲ್ಲಿ 'ಕಾಮ' ಎಂಥ ಸ್ಥಾನವನ್ನು ಪಡೆದಿದೆಯೋ, 'ಸಾವು' ಕೂಡ ಅಂಥದೇ ಸ್ಥಾನವನ್ನು ಪಡೆದಿದೆ. ಆದರೆ 'ಕಾಮ' ಹುಟ್ಟಿಗೂ ಸಾವಿಗೂ ಎರಡಕ್ಕೂ ಕಾರಣವಾಗಬಹುದಾದ ಸಾಧ್ಯತೆಗಳನ್ನು ಚಿತ್ರಿಸುತ್ತಲೇ ಕಾಮ ಹುಟ್ಟಿಗೆ ಮಾತ್ರ ಕಾರಣವಾಗಿ, ಸಾವನ್ನು ಸಾಯಿಸುವ ಶಕ್ತಿಯಾಗಬೇಕು. ಅದೂ 'ಕರ್ರವ್ವ'ನಿಂದಲೇ ಸಾಧ್ಯ ಎಂಬ ಧ್ವನಿ ಕಂಬಾರರ ನಾಟಕಗಳಲ್ಲಿ ಪ್ರಧಾನವಾಗಿ ಕಂಡುಬರುತ್ತದೆ. ಋಷ್ಯಶೃಂಗದಲ್ಲಿ 'ಯಮನೀ' ಸತ್ತು 'ಕಮಲಿ' ಉಳಿದರೆ 'ಮಹಾಮಾಯಿ' ನಾಟಕದಲ್ಲಿ ಸಂಜೀವ ಶಿವನ ತಾಯಿ ಶೆಟವಿತಾಯಿ ಅಳಿವು – ಉಳಿವುಗಳನ್ನು ನಿರ್ಧಾರ ಮಾಡುವ ಮೃತ್ಯುದೇವತೆ ಸಂಜೀವ ಶಿವರಾಜಕುಮಾರಿಯರ ಪ್ರೀತಿಯ ಮುಂದೆ ಸೋಲುತ್ತಾಳೆ. ಸತ್ತ ರಾಜಕುಮಾರಿ ಬದುಕುತ್ತಾಳೆ. ಸಾಯಿಸಬಂದ ಮೃತ್ಯುದೇವತೆ ಹಕ್ಕಿಯು ಆರ್ತನಾದಗೈಯುತ್ತದೆ. ಗಿರಿಮಲ್ಲಿಗೆ ನಿರ್ಜೀವ ದನಿಯಲ್ಲಿ ಸಾರುವ ಈ ಕೆಳಗಿನ ಮಾತುಗಳೊಂದಿಗೆ ನಾಟಕ ಮುಕ್ತಾಯವಾಗುತ್ತದೆ. ಆ ಮಾತುಗಳೆಂದರೆ :

''ಇವರಿಬ್ಬರೂ ಈ ಕ್ಷಣವೆ ಈ ಲೋಕದಿಂದ ತೊಲಗಲಿ
ತಮ್ಮ ಲೋಕದಲ್ಲಿ ಯಾರ ಎದುರಿಗೂ
ಇಲ್ಲಿ ನಡೆದುದನ್ನು ಹೇಳದಿರಲಿ. ಹೇಳಿದರೆ – ಮೊದಲ
ವಾಕ್ಯ ಮುಗಿವ ಮುನ್ನವೇ ನಾಲಗೆ ಹಿರಿದು
ಸಾಯುವರೆಂದು ತಿಳಿದಿರಲಿ.
ಇವನ ವೈದ್ಯವೃತ್ತಿಗಿದ್ದ ತಾಯಿಯ ವರ ಇಂದಿನಿಂದ
ಪರಿಣಾಮಹೀನವೆಂದು ಅರಿತಿರಲಿ''

ಎಂಬ ಶಾಪದಂತಹ ಮಾತುಗಳು ನಾಟಕದ ಭರತವಾಕ್ಯವಾಗಿ ಮುಕ್ತಾಯವಾಗುತ್ತವೆ. ಮಾರ್ಕಾಂಡೇಯನ ಹಾಗೆ ಮೃತ್ಯು ಗೆದ್ದು ಬಂದ ಸಂಜೀವ ಶಿವಕುಮಾರಿಯರಿಗೆ ಗೆದ್ದುಬಂದ ಸುದ್ದಿ ತಿಳಿಸಿದರೆ ಸಾವೆಂಬ ಶಾಪ ಭೂಮಿಯ ಬದುಕಿನ ಮೃತ್ಯುಸಂಕಟವಾಗಿಯೂ ಅದರಿಂದ ಪಾರಾಗಿ ಬಿಳೀ ಕುದುರೆಯನೇರಿ ಸವಾರಿ ಮಾಡುವ, ಸಾಹಸದ ಕನಸು ಕಾಡಕುದುರೆಗೆ ಸದಾ ಇರುವ ಕನಸು ಉಳಿಯುವಂತಾಯ್ತು. ಅದೇ ಸಾಹಸಕ್ಕೂ ಸೃಜನಶೀಲತೆಗೂ ಮಾನವ ಪ್ರಯತ್ನದ ಘನತೆಯೂ ಕಾರಣವಾಗುವ ವಿಧಾನವನ್ನೂ ಕಂಬಾರರು ತಮ್ಮ ನಾಟಕದಲ್ಲಿ 'ಕನಸು' ಎಂಬ ಅದ್ಭುತ ಪ್ರಪಂಚದಲ್ಲಿ ಚಿತ್ರಿಸುತ್ತಾರೆ.

ಋಷ್ಯಶೃಂಗದ 'ಕಮಲಿ'ಯ ಕನಸು, ಕಾಡುಕುದುರೆಯ 'ಹುಲಿಗೊಂಡ ಚಂಪಿ'ಯರ ಕನಸು, ಸಿರಿಸಂಪಿಗೆಯ ಶಿವನಾಗ ರಾಜಕುಮಾರನಾಗಿ ಕಾಣುವ ಹಾಗೂ ಕಾಳಿಂಗನಾಗಿ ಸಿರಿಸಂಪಿಗೆಗೆ ಕಾಣಿಸುವ ಕನಸು, ಜೈಸಿದ ನಾಯಕ ನಾಟಕದ 'ಓಂಕಾರಿ'ಯ ಕನಸು, ಮಾರೀಕಾಡು ನಾಟಕದ 'ಮದಕರಿಯ ಕನಸು', 'ಶಿವರಾತ್ರಿ' ನಾಟಕದ 'ಶರಣರ ಕನಸು' ಹೀಗೆ ಕಂಬಾರರ ಕನಸುಗಳು ಜಡ್ಡುಗಟ್ಟಿದ ವ್ಯವಸ್ಥೆಯಿಂದ ಚಲನಶೀಲಗೊಳ್ಳುವ ವ್ಯವಸ್ಥೆಯ ಕಡೆಗೆ ಸ್ಥಾವರದಿಂದ ಜಂಗಮದೆಡೆಗೆ, ಕಾಮದಿಂದ ಪ್ರೇಮದೆಡೆಗೆ ದೇಹ ಆತ್ಮಗಳೆರಡೂ ಒಳಹೊರಗುಗಳೆರಡೂ ಆಳರಸಗಳೆರಡೂ ಒಂದಾಗಿ ಇಡಿಯಾಗಿ ಸಾಗಬೇಕೆಂಬ ಆಶಯ ವ್ಯಕ್ತಪಡಿಸುತ್ತವೆ. ಆದರೆ ಆ ಕನಸುಗಳಲ್ಲಿ ಯಶಸ್ಸೂ ಇದೆ, ವಿಫಲತೆಯೂ ಇದೆ ಎಂಬುದನ್ನು ಚಿತ್ರಿಸುವುದನ್ನು ಕಂಬಾರರು ಮರೆಯುವುದಿಲ್ಲ. ಕಂಬಾರರು ಎಲ್ಲಿಯೂ ವಾಸ್ತವವನ್ನು ಮರೆತು ಆದರ್ಶದ ಬೆನ್ನು ಹತ್ತುವುದಿಲ್ಲ. ವಾಸ್ತವವನ್ನೇ ಆದರ್ಶವನ್ನಾಗಿಸುವ ಪ್ರಯತ್ನ ಮಾಡುತ್ತಾರೆ. ದೇಹವನ್ನು ಮರೆತು ಆತ್ಮದ ಬಗ್ಗೆ ಮಾತನಾಡುವುದಿಲ್ಲ. ದೇಹವನ್ನೇ ಆತ್ಮವನ್ನಾಗಿಸುವ ಸಾಹಸಕ್ಕೆ ಕೈಹಾಕುತ್ತಾರೆ. ಕಾಮವನ್ನು ಮರೆತು ಪ್ರೇಮದ ಬಗ್ಗೆ ಬರೆಯುವುದಿಲ್ಲ. ಕಾಮವನ್ನೇ ಪ್ರೇಮವನ್ನಾಗಿ ರೂಪಾಂತರಿಸುವ ಮಾರ್ಗವನ್ನು ಶೋಧಿಸುತ್ತಾರೆ. ಈ ಶೋಧಕ್ಕೆ ಕಂಬಾರರು 'ಕುದುರೆ'ಯನ್ನು ವಾಹನವನ್ನಾಗಿಸಿಕೊಂಡು ರಾಜಕುಮಾರನಾಗಿ ಹಳೆಬಟ್ಟೆ ಉಟ್ಟು ಅರಮನೆಯಿಂದ, ಗೌಡ್ತಿಯರ ಬಂಗಲೆಯಿಂದ ಕಾಡಿನ ಕಡೆಗೆ, ಮಹಾಮನೆಯ ಕಡೆಗೆ, ಕೂಡಲ ಸಂಗಮದ ಕಡೆಗೆ, ಶಿವಪುರದ ಕಡೆಗೆ ಯಾತ್ರೆ ಹೊರಡುತ್ತಾರೆ.

'ಕಾಡುಕುದುರೆ'ಯನ್ನು ಕೆಲವರು 'ಕಾಮ'ದ ಸಂಕೇತವೆಂದು ಭಾವಿಸುತ್ತಾರೆ. ಆದರೆ ಅದು ಬೈರಮಂಗಲ ರಾಮೇಗೌಡರು ಗುರುತಿಸುವ ಹಾಗೆ ''ಶಕ್ತಿ ಮತ್ತು ಸ್ತ್ರೀಯ ಸಂಕೇತವಾಗಿ ಕಂಬಾರರು ಕಾಡುಕುದುರೆಯನ್ನು ಬಹಳಷ್ಟು ಕಡೆ ಬಳಸಿಕೊಂಡಿದ್ದಾರೆ.'' ''ಅಖಂಡ ಸೃಷ್ಟಿಯ ಶಕ್ತಿಯುತ ಕಾಮಕ್ಕೆ ಸಂಕೇತ'' ಎಂಬ ಮಾತು ನಿಜವಾದದ್ದಾಗಿದೆ. ಕಾಡುಕುದುರೆ ಮುಂದೆ ಬಿಳಿಯ ಕುದುರೆಯಾಗಿ ಕಂಬಾರರ ನಾಟಕಗಳಲ್ಲಿ ಬೆಳೆಯುತ್ತಾ ಹೋಗುತ್ತದೆ ಎನ್ನುವುದಕ್ಕಿಂತ ಋಷ್ಯಶೃಂಗದಲ್ಲೇ ಸಮಗ್ರವಾಗಿ ಬೆಳೆದುನಿಂತಿದೆ ಎನ್ನಬಹುದು. ಅದನ್ನು ನಾವು ಕಮಲಿಯ ಕನಸಿನಲ್ಲಿ ಬಾಳಗೊಂಡನ

ನನಸಿನಲ್ಲಿ ಕಾಣಬಹುದು. ಕಮಲಿಯ ಕನಸಿನಲ್ಲಿ ''ಬೆಳ್ಳಿ ತೊಡಿಯ ಬಿಳಿಯ ಕುದರಿ ಬೆರಗ'' ಕಂಡರೆ ಬಾಳಗೊಂಡ ''ಬಿಳಿಯ ಕುದುರೆ'' ತರಲು ಆಜ್ಞಾಪಿಸುತ್ತಾನೆ.

ಕಂಬಾರರ ನಾಟಕದಲ್ಲಿ ಕಾಡು, ಕೊಳ್ಳ, ಗುಡ್ಡ, ಅರಣ್ಯ, ನದಿ, ಸರ್ಪ, ಚೇಳು, ಹುಲಿ, ಬೆಕ್ಕು, ಹೂವು, ಗಾಳಿ, ಮಳೆ ಮೊದಲಾದ ಅನೇಕ ನೈಸರ್ಗಿಕ, ಪ್ರಾಕೃತಿಕ ಸಂಗತಿಗಳು ಪ್ರತಿಮೆಗಳಾಗಿ ಬಳಕೆಯಾಗುತ್ತವೆ. ಅಂತೆಯೇ ಮುದುಕಿ, ಹುಚ್ಚಿ, ಮಾರಿ, ಸೇಡುಮಾರಿ, ಜೋಗಿಕೊಳ್ಳ, ಗೋರಿ, ಗುಹೆ ಮೊದಲಾದ ಶಾಕ್ತಧರ್ಮದ ಪರಂಪರೆಯ ಪರಿಕಲ್ಪನೆಗಳು ಕಂಡುಬರುತ್ತವೆ. ಅದೇ ರೀತಿ ಬಂದೂಕು, ಕುಡಗೋಲು, ಕಲ್ಲು ಮೊದಲಾದ ಕೊಲೆಯ ಕಲೆಯ ಸಲಕರಣೆಗಳು ವರ್ತಮಾನದ ಕ್ರೌರ್ಯದ, ವ್ಯವಸ್ಥೆಯ ಟೊಳ್ಳುತನದ ಷಂಡತನವಾಗಿ, ಬಂಜೆತನವಾಗಿ, ಸಾವಿನ ಸಾಧನವಾಗಿ ಕಂಡುಬರುತ್ತವೆ. ರಾಜಕೀಯ ವ್ಯವಸ್ಥೆಯ, ಆಡಳಿತ ವ್ಯವಸ್ಥೆಯ ವಿಡಂಬನೆಯ ಚಿತ್ರ ಜೋಕುಮಾರಸ್ವಾಮಿ, ಜೈಸಿದ ನಾಯಕ, ತುಕ್ರನ ಕನಸು ನಾಟಕಗಳಲ್ಲಿ ದಟ್ಟವಾಗಿ ಕಂಡುಬರುತ್ತದೆ. ಕಂಬಾರರು ಆ ಕೊಲ್ಲುವ ಬಂದೂಕುಗಳಿಗೆ ಬದಲಾಗಿ ಕೊಲ್ಲದ ಬಂದೂಕುಗಳನ್ನು ಅಸ್ತ್ರವಾಗಿ ಬಳಸುವ ವ್ಯಂಗ್ಯದ ಮೂಲಕ ಜಡ್ಡುಗಟ್ಟಿದ ಷಂಡ ಆಡಳಿತಕ್ಕೆ, ಬಂಜೆ ಬದುಕಿಗೆ ಪರ್ಯಾಯವಾದ ವೀರ್ಯವತ್ತಾದ ಆಡಳಿತ, ಫಲವತ್ತಾದ ಬದುಕನ್ನು ಪ್ರತಿಪಾದಿಸುತ್ತಾರೆ. ಅದನ್ನು ನಾವು ಅವರ ಜೋಕುಮಾರಸ್ವಾಮಿ ನಾಟಕದಲ್ಲಿ ಊರಗೌಡ ಹಾಗೂ ಬಸವಣ್ಣನ ನಡುವೆ ನಡೆಯುವ ಸಂಭಾಷಣೆಯಲ್ಲಿ ಬಸವಣ್ಣನು ''ನನ್ನ ಹಂತ್ಯಾಕೊಂದ ಬಂದೂಕೈತಿ ಆದರ ನಾ ಗುಂಡು ಹಾಕಿದವರೆಲ್ಲಾ ಸಾಯೋದರ ಬದಲ ಮರಿ ಹಾಕತಾರ!'' ಎಂದು ಹೇಳುವ ಮಾತಿನಲ್ಲಿ ಗಮನಿಸಬಹುದು. ಭೂಮಿ ಊಳಲಾಗದ ಗೌಡ, ಗೌಡ್ತಿ ಬಿಟ್ಟು ನಿಂಗಿಯಿಂದಲೂ ಉದಾಸೀನಕ್ಕೊಳಗಾದ ಗೌಡ ಬಸವಣ್ಣನಿಂದ ಎರಡನ್ನೂ ಕಳಕೊಳ್ಳಬೇಕಾಗುತ್ತದೆ. ಬಸವಣ್ಣ ಭೂಮಿಯನ್ನು ಉತ್ತು ಬಿತ್ತು ಬೆಳೇ ತೆಗಿಯುವ ಶಕ್ತಿವಂತ. ಗೌಡ್ತಿಯಲ್ಲಿ ಕನಸುಗಳನ್ನು ಬಿತ್ತಿ ಬೆಳೆಯಲೂ ಬಲ್ಲಾತ. ಗೌಡ್ತಿ ಬಸವಣ್ಣನಿಂದಾಗಿಯೇ ''ಕನಸಿನಾಗೊಂದು ಅಡಿವ್ಯಾಗಿತ್ತು. ಅಡಿವ್ಯಾಗೊಂದು ಗವೀ ಇತ್ತು. ನಿನ್ನ ಬಿರಸ ಎದಿ ನನ್ನ ಮೆತ್ತಾನ ಎದ್ಯಾಗ ಮೂಡಿಧಾಂಗ, ಮಿರಗ ಮೋಡದೊಳಗ ಮಿಂಚ ಹರಿದಾಡಿಧಾಂಗ, ಬಿದರಿನೊಳಗ ಬಿರಗಾಳಿ ತುಂಬಿಧಾಂಗ ಅನ್ನಿಸಿ, ಗವ್ಯಾಗಿಂದ ನೀ 'ಏ ಹುಡುಗಿ' ಅಂತ ಕರಧಾಂಗಾಯ್ತು. ಅಷ್ಟರಾಗ ಬಂದ ಒಣ ಒಡಕ ಬಿದರಗೂಗೀ ಹಾಂಗ ಸಿಳ್ಳ ಹಾಕಿದ್ದ ಕೇಳಿಸ್ತು. ಎಚ್ಚರಾದಾಗ ಗೌಡ ಸಿಳ್ಳ ಹಾಕ್ಕೊಂಡ ಹೊರಗ ಅಡ್ಡಾಡತಿದ್ದಾ. ಬಸಣ್ಣಾ, ಇದಾಽ ನಮ್ಮ ಕಡೀ ಭೇಟಿ ಆಯ್ತಲ್ಲೊ!'' ಅಂತಾಳೆ.

ಮುಂದೆ ಬಸಣ್ಣ ಗೌಡನಿಂದ ಕೊಲೆಯಾಗುತ್ತಾನೆ. ಮೇಳಗಳು ಕೊನೆಯಲ್ಲಿ

''ಹಿಡದ ಕಡದಾರೊ ಎಳೀದೇವರನ್ನಾ'' ಎನ್ನುತ್ತ

''ಕೊಂದಾರೆ ಬಗೆದಾರೊ ಸ್ವಾಮಿನ ಕಡದಾರೆ ಬಗೆದಾರೊ
ನೆತ್ತರ ಹರದಾವೊ ಹೊಳಿ ಹಳ್ಳ ತುಂಬಿ ॥
ನೆತ್ತರ ಬಿದ್ದಲ್ಲಿ ಆಹಾಬೆಳಿಗಳು ಎದ್ದಾವೊ
ಮಣ್ಣು ಮಣ್ಣೆಲ್ಲಾ ಹಸಿಹಸರ ತುಂಬಿ ॥
ಒಳ್ಳೆಯ ಸರಕಾರ ನಮ್ಮ ದೇಶವನ್ನಾಳಲಿ
ಮನಿ ಮನಿ ತುಂಬಲಿ ಆಡೋ ಮಕ್ಕಳಿಂದ ॥
ಹೊಲ ಊಳೋ ರೈತ ಅವನೆ ಹೊಲದೊಡೆಯನಾಗಲಿ
ದೇಶ ತುಂಬಲಿ ಧನಧಾನ್ಯದಿಂದ॥''

ಎಂಬ ಹಾಡನ್ನು ಭರತವಾಕ್ಯವನ್ನಾಗಿಸುತ್ತಾರೆ. ಇಂಥ ಭಾರತದ ಬದುಕಿನ ಕನಸು ಕಂಬಾರರದ್ದು!

ಕೀರ್ತನಾಥ ಕುರ್ತುಕೋಟಿಯವರು 'ಹರಕೆಯ ಕುರಿ' ನಾಟಕದ ಮುನ್ನುಡಿಯಲ್ಲಿ ''ಬಲಿ ಕಾರ್ಯದ ಪ್ರತೀಕ ಈ ನಾಟಕದ ಅರ್ಥಕೇಂದ್ರವಾಗಿದೆ. ಅಥವಾ ಕಂಬಾರರ ಎಲ್ಲ ನಾಟಕಗಳ ಕೇಂದ್ರ ಪ್ರತೀಕವಾಗಿದೆಯೆಂದರೂ ತಪ್ಪಿಲ್ಲ. 'ಋಷ್ಯಶೃಂಗ' ನಾಟಕದ ಬಾಳಗೊಂಡ, 'ಜೋಕುಮಾರಸ್ವಾಮಿ'ಯ ಬಸನ್ಯಾ ಮತ್ತು ಈ ನಾಟಕದ ಸಿದ್ಧಲಿಂಗು ಇವರೆಲ್ಲ ಬಲಿಪಶುಗಳು. ಬಲಿಯಾಗುವ ವ್ಯಕ್ತಿ ದೇವತೆಗಳ ಪಂಕ್ತಿಗೆ ಸೇರಬೇಕಾಗಿರುವುದರಿಂದ ಅವನು ಬಾಹ್ಯಾಭ್ಯಂತರಗಳಲ್ಲಿ ಪರಿಪೂರ್ಣನಾಗಿರಬೇಕು. ಆದರೆ ಕಂಬಾರರ ಈ ಮೂವರೂ ಪರಿಪೂರ್ಣರಲ್ಲ ಮತ್ತು ಅವರು ಸೇರಬೇಕಾಗಿರುವ ದೇವತೆಗಳು ಸುಳ್ಳು ದೇವತೆಗಳು'' ಎಂದಿದ್ದಾರೆ. ಒಟ್ಟಾರೆ ಬಲಿಯಾಗುವ, ಬಲಿ ತೆಗೆದುಕೊಳ್ಳುವ ಸುಳ್ಳು ದೇವತೆಗಳ ನಡುವೆ ನಿಜದ ದೇವತೆಯನ್ನು ಹುಡುಕುವ ಉತ್ಕಟವಾದ ತುಡಿತ ಕಂಬಾರರ ನಾಟಕಗಳಲ್ಲಿ ಕಂಡುಬರುತ್ತವೆ. ಆದರೆ ಬಲಿಯಾದವರೆಲ್ಲ ನಿಜದ ದೇವರ ಹುಡುಕಾಟ ನಡೆಸಿದವರು. ಅವರು ಸೇರಬೇಕಾದದ್ದೂ ನಿಜದ ದೇವರನ್ನೇ ಎಂದೆನ್ನಿಸುತ್ತದೆ.

ಕಂಬಾರರ ನಾಟಕಗಳು ಖರೆ ಹೆಂಗಸಿನ ಕೂಡ ಖರೆರತ್ನದೊಂದಿಗೆ ಖರೆ ಸಂಗವ ಮಾಡಿ ಖರೆ ಮನುಷ್ಯರಾಗಲು ಪ್ರಯತ್ನಿಸಿದ ಪಾತ್ರಗಳನ್ನು ಸೃಷ್ಟಿಸಿವೆ. ಖರೆ ಮನುಷ್ಯರೇ ಖರೆ ದೇವತೆಗಳು ಎನ್ನುವುದಾದರೆ ಸ್ವಾತಂತ್ರ್ಯ ಎಂಬುದು ಬೇಕಾದುದು ಮನುಷ್ಯರಾಗುವುದಕ್ಕೆ ಎಂಬ ಕಂಬಾರರ ಮಾತು ಗಮನಾರ್ಹ. ಸಾವಂತ್ರಿಯ ಮನೆಯನ್ನು ಮಹಾಮನೆಯನ್ನಾಗಿಸಿದ ಶಿವರಾತ್ರಿಯ ಪ್ರಯತ್ನ ಖರೇ ದೇವತೆಗಳನ್ನೇ ಸೃಷ್ಟಿಸಿದೆ.

ಗರಿಗಳ ನಡುವೆ ತೂರಿದ ಕಿರಣ
ಬಿಸಿಲಿನ ಕೋಲಾಯ್ತು
ಹನಿಗಳ ಎಡೆಯಲಿ ಜಾರಿದ ಕಾರಣ
ಕಾಮನ ಬಿಲ್ಲಾಯ್ತು



# ಪ್ರಾಚೀನ ಕನ್ನಡ ಸಾಹಿತ್ಯವು ಅನುವಾದವೇ?

**ಡಾ. ಮಾಧವ ಪೆರಾಜೆ**
ದ್ರಾವಿಡ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಪೀಠಿಕೆ

ಕನ್ನಡ ವಿಶ್ವವಿದ್ಯಾಲಯದಲ್ಲಿ ನನ್ನ ಸಹೋದ್ಯೋಗಿ ಆಗಿರುವ ಡಾ. ಎಂ. ಉಷಾ ಅವರು ಭಾಷಾಂತರ ಪರಿಕಲ್ಪನೆ ಕನ್ನಡದಲ್ಲಿ ಇರಲಿಲ್ಲವೇ ಎನ್ನುವ ಲೇಖನ ವನ್ನು ಕಳೆದ ಸಂಚಿಕೆಯಲ್ಲಿ ಬರೆದಿದ್ದಾರೆ (ಚಿಂತನ ಬಯಲು, ಜುಲೈ – ಸೆಪ್ಟೆಂಬರ್ 2012). ಅದರಲ್ಲಿ ನಾನು ನನ್ನ ಹಿಂದಿನ ಲೇಖನವನ್ನು ಅವರಿಗೆ ನೀಡಿ ಪ್ರತಿಕ್ರಿಯೆ ಕೇಳಿದೆನೆಂದು ಹೇಳಿದ್ದಾರೆ. ಮುಂದುವರಿದು ನನ್ನ ಲೇಖನದಲ್ಲಿ ಅಕಾಡೆಮಿಕ್ ಡೀಸೆನ್ಸಿಯ ಕೊರತೆ ಇದೆ ಎನ್ನುತ್ತಾ ನನ್ನ ಲೇಖನದ ಬಗೆಗೆ ಇದು ಮೊದಲ ಹಾಗು ಕಡೆಯ ಪ್ರತಿಕ್ರಿಯೆಯೂ ಆಗಿದೆ ಎಂದು ತಮ್ಮ ಲೇಖನವನ್ನು ಆರಂಭಿಸಿದ್ದಾರೆ. ಆದರೆ ನಾನು ಮಾತ್ರ ಇದು ಎರಡನೆಯ ಸಲವಷ್ಟೇ ಅಲ್ಲದೇ ಎಷ್ಟು ಸಲ ಬೇಕಾದರೂ ಅವರಿಗೆ ಪ್ರತಿಕ್ರಿಯೆಯನ್ನು ನೀಡುತ್ತೇನೆ ಎಂದು ಹೇಳಬೇಕಾಗಿದೆ.

ಲೇಖನವನ್ನು ಬರೆದಾಗ ಅದನ್ನು ಒಂದಷ್ಟು ಜನಕ್ಕೆ ತೋರಿಸಿ, ಅಭಿಪ್ರಾಯ ಕೇಳಿ ಪ್ರಕಟಣೆಗೆ ಕಳುಹಿಸುವುದು ಎಂದಿನಿಂದಲೂ ನನ್ನ ಅಭ್ಯಾಸವಾಗಿದೆ. ಅದರಲ್ಲಿಯೂ ಅಂತಹ ಲೇಖನಗಳನ್ನು ಮೊದಲಿಗೆ ನಮ್ಮ ವಿದ್ಯಾರ್ಥಿಗಳಿಂದ ಓದಿಸಿ ಅಭಿಪ್ರಾಯ ಪಡೆದು ಬೇರೆಯವರಿಗೆ ಕೊಡುತ್ತೇನೆ. ಈ ಲೇಖನವನ್ನು ಕೂಡಾ ಹಾಗೆ ಬೇರೆ ಬೇರೆಯವರು ಓದಿದ ಮೇಲೆ ಡಾ.ಎಂ. ಉಷಾ ಅವರಿಗೆ ಕೊಟ್ಟಿದ್ದೆ. ಅದಕ್ಕಿಂತ ಮೊದಲು ಅದೇ ಲೇಖನ ಮೂಡಬಿದಿರೆಯಲ್ಲಿ ಅವರ ವಿಭಾಗವೇ ನಡೆಸಿದ ವಿಚಾರಸಂಕಿರಣದಲ್ಲಿ ಮಂಡಿಸಿದ ಪ್ರಬಂಧವಾಗಿತ್ತು. ಆ ವಿಚಾರಸಂಕಿರಣದಲ್ಲಿ ಡಾ.ಎಂ.ಉಷಾ ಅವರೂ ಇದ್ದರು. ಹೀಗಿರುವಾಗ ಡಾ. ಎಂ. ಉಷಾ ಅವರಿಗೆ ಆ ಪ್ರಬಂಧದ ವಿಚಾರಗಳು ಹೊಸದೂ ಆಗಿರಲಿಲ್ಲ,

ನಾನು ಅವರಿಗೆ ನಿಮ್ಮ ಅಮೂಲ್ಯವಾದ ಸಲಹೆಯನ್ನು ನೀಡಿ ಎಂದೂ ಕೊಟ್ಟಿರಲಿಲ್ಲ. ಅದು ಕೇವಲ ಔಪಚಾರಿಕವಾದ ಒಂದು ಪ್ರಕ್ರಿಯೆಯಷ್ಟೇ ಆಗಿತ್ತು. ಆಮೇಲೆ ಕೂಡ ಹಾಗೆಯೇ ಅನೇಕರಿಗೆ ನಾನು ಆ ಲೇಖನವನ್ನು ಕೊಟ್ಟು ಓದಿಸಿದ್ದೇನೆ. ಇದು ನಾನು ಬೇರೆಯವರ ವಿದ್ವತ್ತಿನ ಬಗೆಗೆ ಇಟ್ಟುಕೊಂಡ ಗೌರವವಾಗಿದೆ. ಆದರೆ ಡಾ.ಎಂ. ಉಷಾ ಅವರು ಇದನ್ನೇ ಸಲುಗೆ ಎಂದು ಭಾವಿಸಿ ಕೊನೆಯವರೆಗೂ ನನ್ನ ಲೇಖನದ ಬಗೆಗೆ ತಮ್ಮ ನಿಲುವು ಬದಲಾಗುವುದಿಲ್ಲ ಎಂದು ಹೇಳಿದ್ದಾರೆ. ಹಾಗಾದುದರಿಂದ ಮುಂದೆ ನಾನು ಎಷ್ಟು ಸ್ಪಷ್ಟೀಕರಣಗಳನ್ನು ನೀಡಿದರೂ ಅವರ ನಿಲುವಿನಲ್ಲಿ ಬದಲಾವಣೆ ಆಗುವುದಿಲ್ಲ ಎನ್ನುವುದು ಖಚಿತವಾಯಿತು. ಅಕಾಡೆಮಿಕ್ ಡೀಸೆನ್ಸಿಯ ಬಗೆಗೆ ಮಾತನಾಡುವವರು ಈ ರೀತಿಯ ಮೂಲಭೂತವಾದಿ ನಿಲುವಿಗೆ ಬರುವುದಕ್ಕೆ ಹೇಗೆ ಸಾಧ್ಯ? ಹಾಗಿರುವಾಗ ಇನ್ನು ಮುಂದೆ ನಾನು ಮಂಡಿಸಲಿರುವ ವಿಚಾರಗಳು ಡಾ.ಎಂ. ಉಷಾ ಅವರ ಲೇಖನಕ್ಕೆ ಸಂಬಂಧಿಸಿದ ಪ್ರತಿಕ್ರಿಯೆಯಲ್ಲ. ಬದಲಾಗಿ ಕನ್ನಡದ ಬಗೆಗೆ ಆಳವಾಗಿ ಅಭಿಮಾನ ಇರುವ ಹಾಗೂ ತಿಳಿವಳಿಕೆ ಇರುವ ಸಾರ್ವಜನಿಕರಿಗೆ ಸಂಬಂಧಿಸಿರುವುದೆಂದು ಭಾವಿಸಬೇಕಾಗಿ ಕೋರುತ್ತೇನೆ. ಏಕೆಂದರೆ ನನ್ನ ಹಿಂದಿನ ಲೇಖನದಲ್ಲಿ ಕನ್ನಡದ ಯಾವ ಮನೋಭಾವಕ್ಕೆ ವಿರುದ್ಧವಾಗಿ ನಾನು ನನ್ನ ವಿಚಾರವನ್ನು ಮಂಡಿಸಿದ್ದೇನೋ ಸರಿಯಾಗಿ ಅದೇ ನಿಲುವುಗಳು ಡಾ.ಎಂ. ಉಷಾ ಅವರ ಬರವಣಿಗೆಯಲ್ಲೂ ಕಂಡುಬರುತ್ತದೆ. ಅಂದರೆ ಕನ್ನಡ ಸಾಹಿತ್ಯದಲ್ಲಿ ಕೆಲವೇ ಕೆಲವು ಮಂದಿ ಅಭಿಪ್ರಾಯ ರೂಪಿಸುವವರಾಗಿದ್ದಾರೆ. ಅವರ ನಿಲುವುಗಳು ಸರಿಯಿಲ್ಲ ಎಂದಾದರೆ ಉಳಿದವರೂ ಅದನ್ನು ಅನುಮೋದಿಸಬೇಕಾಗುತ್ತದೆ. ಈ ನಿಲುವನ್ನು ಪ್ರಶ್ನಿಸಿಯೇ ನನ್ನ ಲೇಖನ ಆರಂಭವಾಗಿತ್ತು. ಅದರ ಮುಂದುವರಿಕೆಯಾಗಿ ಮುಂದಿನ ಭಾಗದಲ್ಲಿ ನನ್ನ ನಿಲುವುಗಳನ್ನು ಮಂಡಿಸುತ್ತೇನೆ. ಇದು ಹಿಂದಿನ ಲೇಖನಕ್ಕೆ ಪುರವಣಿಯೇ ಹೊರತು ತಮ್ಮ ನಿಲುವಿಗೆ ಶಾಶ್ವತವಾಗಿ ಅಂಟಿಕೊಂಡವರಿಗೆ ಪ್ರತಿಕ್ರಿಯೆಯಲ್ಲ ಎನ್ನುವುದನ್ನು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ. ಈ ಲೇಖನದ ಮೊದಲ ಭಾಗದಲ್ಲಿ ಕ್ರಿಶ್ಚಿಯನ್ ರಿಲಿಜಿಯನ್‌ಗೆ ಸಂಬಂಧಿಸಿದಂತೆ ಪೂರ್ವಭಾವಿಯಾಗಿ ಹೆಚ್ಚಿನ ವಿವರಗಳು ಬೇಕಾಗಿರುವುದರಿಂದ ಡಾ. ಎಸ್.ಎನ್ ಬಾಲಾಗಂಗಾಧರ ಅವರ ಜಗತ್ ಪ್ರಸಿದ್ಧ ಗ್ರಂಥವಾದ 'ದಿ ಹೀದನ್ ಇನ್ ಹಿಸ್ ಬ್ಲೈಂಡ್‌ನೆಸ್, ರಿಲಿಜಿಯಸ್ ಡೈನಾಮಿಕ್ಸ್ ಇನ್ ಏಷ್ಯಾ ಅಂಡ್ ಯುರೋಪ್' ಕೃತಿಯ ಸಂಕ್ಷಿಪ್ತ ರೂಪದ (ಅಪ್ರಕಟಿತ) ಆಯ್ದಭಾಗದ ಅನುವಾದವನ್ನು ಮೊದಲಿಗೆ ನೀಡುತ್ತೇನೆ. ಎರಡನೆಯ ಭಾಗದಲ್ಲಿ ಅರೆಬಿಕ್ ಭಾಷೆ ಮತ್ತು ಕಾವ್ಯದ ಕುರಿತು ಪವಿತ್ರ ಕುರ್‌ಆನ್‌ನಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳನ್ನು ಕಲೆಹಾಕಿ ಸೃಜನಶೀಲತೆಯ ಕುರಿತು ರಿಲಿಜಿಯನ್‌ನಲ್ಲಿ ಯಾವ ಬಗೆಯ ನಿಲುವುಗಳಿವೆ ಎನ್ನುವ ಚರ್ಚೆಯನ್ನು ಬೆಳೆಸುತ್ತೇನೆ. ಮೂರನೆಯ ಭಾಗದಲ್ಲಿ ಕನ್ನಡದಲ್ಲಿ ಅನುವಾದಕ್ಕೆ ಸಂಬಂಧಿಸಿದ ನಿಲುವುಗಳು ಹೇಗೆ ಭಿನ್ನವಾಗುತ್ತವೆ ಎನ್ನುವುದಕ್ಕೆ ಇನ್ನೊಂದಷ್ಟು ನಿದರ್ಶನಗಳನ್ನು ನೀಡುತ್ತೇನೆ. ಹಾಗೂ ಭಾಗ 4ರಲ್ಲಿ ಸಹೃದಯರಾದ ಓದುಗರ ಸಲುವಾಗಿ ಡಾ.ಎಂ.ಉಷಾ ಅವರು ಎತ್ತಿರುವ ಕೆಲವೊಂದು ಪ್ರಶ್ನೆಗಳಿಗೆ ಉತ್ತರಿಸುತ್ತೇನೆ.

## ಭಾಗ 1

ಇಂದು ನಾವು ಯಾವುದನ್ನು ಟ್ರಾನ್ಸ್‌ಲೇಷನ್ ಸ್ಟಡೀಸ್ (ಭಾಷಾಂತರ ಅಧ್ಯಯನ) ಎಂದು ಕರೆಯುತ್ತೇವೆಯೋ ಮೂಲತಃ ಅದೊಂದು ಅಧ್ಯಯನ ಶಿಸ್ತೇ ಅಲ್ಲ. ಇಂದು ಬೇರೆ ಬೇರೆ

ವಿಶ್ವವಿದ್ಯಾಲಯಗಳಲ್ಲಿ ಸಂಸ್ಥೆಗಳಲ್ಲಿ ಅಂತಹ ವಿಭಾಗಗಳು, ಅಕಾಡೆಮಿಗಳು ಇವೆ. ಆದರೆ ಇಂತಹ ವಿಭಾಗಗಳು ಅಕಾಡೆಮಿಗಳು ಇರುವಾಗಲೂ, ಅವುಗಳ ಇತಿಹಾಸ ತುಂಬ ಹಿಂದಕ್ಕೆ ಹೋಗಲಾರದು. ಏಕೆಂದರೆ ಅನುವಾದಕ್ಕೆ ಬೇಕಾಗಿರುವುದು ಒಂದಕ್ಕಿಂತ ಹೆಚ್ಚು ಭಾಷೆಗಳ ಜ್ಞಾನವಷ್ಟೇ. ಇದಕ್ಕಾಗಿ ಸಿದ್ಧಾಂತಗಳು ಪರಿಕಲ್ಪನೆಗಳು, ಅದರ ಇತಿಹಾಸ ಮೊದಲಾದ ಪರಿಶ್ರಮಗಳ ಅಗತ್ಯವೇ ಇಲ್ಲ. ಅದು ನಡೆದುಕೊಂಡು ಬಂದಿರುವುದೇ ಹಾಗೆ. ಆದರೆ ಈಗ ಇರುವ ಸ್ಥಿತಿಯಲ್ಲಿ ಅನುವಾದವೊಂದು ಸಿದ್ಧಾಂತವಾಗಿ ರೂಪುಗೊಂಡಿರುವುದೇ ರಿಲಿಜಿಯನ್ನಿನ ಉದಯವಾದಲ್ಲಿಂದಲೇ. ಅದರಲ್ಲಿಯೂ ಕ್ರಿಶ್ಚೇನಿಟಿಯು ರಿಲಿಜಿಯನ್ ಆಗಿ ಮಾರ್ಪಾಡಾಗುವ ಹಂತದಲ್ಲಿ ಅವರಿಗೆ ಅವರದೇ ಆದ ಇತಿಹಾಸ, ಭಾಷೆ ಮತ್ತು ಪವಿತ್ರ ಗ್ರಂಥಗಳಿಲ್ಲದಿರುವಾಗ ತನಗೆ ಅಂತಹದೊಂದು ಪರಂಪರೆ ಇದೆ ಎಂಬುದನ್ನು ಸಾರಿ ಸಾರಿ ಹೇಳಲೇಬೇಕಾಗಿತ್ತು. ಅದಕ್ಕಾಗಿ ಅವರು ನೀರಿನ ಹಾಗೆ ಮಸಿಯನ್ನು (ಶಾಯಿ) ಬಳಸಬೇಕಾಯಿತು. ಅದರಲ್ಲಿ ಏನೆಲ್ಲ ಸಾಧ್ಯವೋ ಅದೆಲ್ಲವನ್ನು (ಅಂದರೆ ಗ್ರೀಕರ, ರೊಮನ್ನರ ಜ್ಞಾನ ಮೊದಲಾಗಿ) ತಮ್ಮದೆನ್ನುವ ಹಾಗೆ ಅವರು ವ್ಯಾಖ್ಯಾನ ಮಾಡುವುದಕ್ಕೆ ಆರಂಭಿಸಿದರು. ಆ ಹಂತದಲ್ಲಿ ಮೂಡಿದ್ದೇ ಅನುವಾದ ಅಧ್ಯಯನ (Translation Studies) ಎನ್ನುವ ಪರಿಕಲ್ಪನೆಯಾಗಿದೆ. ಏಕೆಂದರೆ ಬೈಬಲ್ಲನ್ನು ಅನುವಾದ ಮಾಡಬೇಕೆ ಬೇಡವೇ ಎನ್ನುವ ಪ್ರಶ್ನೆ ಆಗ ಕ್ರಿಶ್ಚಿಯನ್ನರಿಗೆ ಎದುರಾಗಿತ್ತು.

ಇದೇ ಪರಿಸ್ಥಿತಿ ಈಗಲೂ ಮುಂದುವರಿಯುತ್ತಿದೆ. ಅನುವಾದ ವಿಭಾಗಗಳು, ಅಕಾಡೆಮಿಗಳು ಹುಟ್ಟಿಕೊಂಡಾಗ ಅವರಿಗೆ ಅದನ್ನು ಬೆಳೆಸುವ ಸ್ಥಾಪಿಸುವ ಅಗತ್ಯ ಬರುತ್ತದೆ. ಯೋಜನೆಗಳು, ಪಿಹೆಚ್‌ಡಿ ಅಧ್ಯಯನಗಳು, ಕೋಶಗಳು ಆಗ ಅಗತ್ಯವಾಗುತ್ತವೆ. ಇಂಥಹ ಪ್ರಕ್ರಿಯೆಗಳು ನಡೆಯುವಾಗ ಕೈಗೆ ಸಿಕ್ಕಿದ್ದು ಕಣ್ಣಿಗೆ ಕಂಡದ್ದು ಎಲ್ಲವೂ ತಮ್ಮ ಅಧ್ಯಯನ ಶಿಸ್ತಿಗೆ ಸಂಬಂಧಿಸಿದುದು ಎನ್ನುವ ಹಾಗೆ ಭಾಸವಾಗುತ್ತದೆ. ಹಾಗೆ ಆಗದಿದ್ದರೆ ಕೆಲವರು ಅತಿ ಬುದ್ಧಿವಂತಿಕೆಯಿಂದ ತಮಗೆ ಸಂಬಂಧಿಸಿದ ಹಾಗೆ ವ್ಯಾಖ್ಯಾನ ಮಾಡತೊಡಗುತ್ತಾರೆ. ಅದಕ್ಕಾಗಿ ವಿಚಾರ ಸಂಕಿರಣಗಳ ಮೂಲಕ ವಿಚಾರಗಳನ್ನು ಬಿತ್ತುತ್ತಾರೆ. ಅಲ್ಲಿ ಬಿತ್ತಿದ ವಿಚಾರಗಳು ಪಿಎಚ್.ಡಿ ಗೆ ಅಧ್ಯಯನದ ವಸ್ತುವಾಗಿ ಅಧಿಕೃತ ಮನ್ನಣೆಯನ್ನು ಪಡೆಯುತ್ತವೆ. ಮುಂದೆ ಅದು ಸ್ಥಾಪಿತ ಅಧ್ಯಯನವಾಗಿ ಒಂದು ಸಂಸ್ಕೃತಿಯ ಸ್ಮರಣೆಯ ಭಾಗವಾಗುತ್ತದೆ.

ಪ್ರಾಚೀನ ಕನ್ನಡ ಸಾಹಿತ್ಯವು ಅನುವಾದ ಎನ್ನುವಾಗಲೂ ಯಥಾವತ್ತಾಗಿ ಅದುವೇ ಪ್ರಕ್ರಿಯೆಗಳು ನಡೆದಿವೆ. ಕೆಲವರಿಗೆ ತಮ್ಮದು ಒಂದು ಪ್ರಾಚೀನವಾದ ಅಧ್ಯಯನ ಶಿಸ್ತು ಎನ್ನುವುದನ್ನು ಸ್ಥಾಪಿಸುವ ತುರ್ತು ಬೇರೆ ಬೇರೆ ಕಾರಣಗಳಿಗಾಗಿ ಅಗತ್ಯವಾಗಿರುತ್ತದೆ. ಆಗ ಸುಮಾರು 900 ವರ್ಷಗಳ ದೀರ್ಘ ಇತಿಹಾಸವಿರುವ ಕನ್ನಡ ಸಾಹಿತ್ಯವನ್ನೇ ಅನುವಾದ ಸಿದ್ಧಾಂತ ಎನ್ನುವ ಬಲೆ ಹಾಕಿ ಎಳೆದರೆ ದೊಡ್ಡ ಮೀನೊಂದು ಬುಟ್ಟಿಗೆ ಬಿದ್ದ ಹಾಗೆ ಆಗುತ್ತದೆ. ಅದಕ್ಕೆ ಅನುಕೂಲವಾಗುವ ಹಾಗೆ ಅಲ್ಲಿ ಇಲ್ಲಿ ಕೆಲವು ಹೇಳಿಕೆಗಳೂ ಇವೆ. ಇಂತಹ ಯೋಜನೆ ಮುಗಿದ ಮೇಲೆ ಇದೇ ವಿಷಯವಾಗಿ ಪಿಎಚ್.ಡಿ ಅಧ್ಯಯನಕ್ಕೆ ಒಂದು ವಿದ್ಯಾರ್ಥಿಗಳ ತಂಡವನ್ನು ಸಿದ್ಧಮಾಡಿದರಾಯಿತು. ಆ ವಿದ್ಯಾರ್ಥಿಗಳು ಈಗಾಗಲೇ ಯೋಜನೆಯ ಮೂಲಕ ಸಿದ್ಧಾಂತವಾಗಿರುವುದನ್ನೇ ಮರುನಿರ್ಮಾಣ ಮಾಡುತ್ತಾರೆ. ಅಲ್ಲಿಗೆ ಎಲ್ಲವೂ ಮುಗಿದ ಹಾಗೆ. ಯೂರೋಪಿನಲ್ಲಿ ಈ ಪ್ರಕ್ರಿಯೆಯು ಕ್ರಿಶ್ಚೇನಿಟಿಯು ರೂಪುಗೊಳ್ಳುವುದರೊಂದಿಗೆ ಆರಂಭವಾಯಿತು. ಡಾ. ಬಾಲಗಂಗಾಧರ ಅವರ 'ಹೀದನ್ ಇನ್ ಹಿಸ್ ಬ್ಲೈಂಡ್‌ನೆಸ್ ಏಷ್ಯಾ ದಿ ವೆಸ್ಟ್ ಅಂಡ್ ದಿ ಡೈನಾಮಿಕ್ ಆಫ್ ರಿಲಿಜಿಯನ್' ಎನ್ನುವ ಪುಸ್ತಕದ ಸಂಕ್ಷಿಪ್ತ ಆವೃತ್ತಿಯ (ಅಪ್ರಕಟಿತ) ಆಯ್ದ

ಭಾಗವನ್ನು ಹೆಚ್ಚಿನ ವಿವರಣೆಗಳಿಗಾಗಿ ಈಗ ಈ ಕೆಳಗೆ ನೀಡಲಾಗಿದೆ:

ಕ್ರಿಶ್ಚಿಯನ್ನರು ಜ್ಯೂ ಜನರು ಅನುಸರಿಸಿದ ಮಾದರಿಯನ್ನು ಅನುಸರಿಸಲಿಲ್ಲ. ಜ್ಯೂಡಾಯಿಕ್ ಸಂಪ್ರದಾಯಕ್ಕೆ ತಾವು ಕಾರಣಕರ್ತರೆಂದು ಹೇಳಿಕೊಂಡಾಗಲೂ ಅವರು ಹಾಗೆ ಮಾಡಲಿಲ್ಲ. ರೋಮನ್ನರು ಅವರನ್ನು ಸಂಪ್ರದಾಯವೇ ಇಲ್ಲದ ಮಂದಿ ಎಂದೂ, ನಾಸ್ತಿಕರೆಂದೂ ಜರೆಯತೊಡಗಿದರು. ಆರಂಭದಲ್ಲಿ ಪೇಗನ್ನರು ಎಂದು ಯಾರು ಕರೆಸಿಕೊಂಡರೋ ಕ್ರಿಶ್ಚಿನ್ನರನ್ನು ನಾಸ್ತಿಕರೆಂದು, ರಿಲಿಜಿನ್ ಇಲ್ಲದವರೆಂದೂ – ಆ ಪೇಗನ್ನರೇ ಇವರನ್ನು ದೂರುತ್ತಿದ್ದರು. ಪೊರ್‌ಫಿರಿಯಿಂದ (Porphyry) ತೆಗೆದುಕೊಂಡಿರುವುದೆಂದು ನಂಬಲಾದ ಈ ಕೆಳಗಿನ ಸಾಲುಗಳು ಈಸ್‌ಬ್ಯಿಸ್‌ನು (Eusebuis) ನಮಗೆ ಸಾರಾಂಶ ರೂಪದಲ್ಲಿ ನೀಡಿರುವುದಾಗಿದೆ.

''ಹೀಗೊಂದು ರೀತಿಯಲ್ಲಿ ಅಗೌರವದಿಂದಲೂ, ನಾಸ್ತಿಕರಾಗಿಯೂ ಇರಲು ಈ ಜನಗಳಿಗೆ ಹೇಗೆ ತಾನೆ ಸಾಧ್ಯ? ಯಾರಿಂದಾಗಿ ಪ್ರತಿಯೊಂದು ರಾಷ್ಟ್ರವೂ, ಪ್ರತಿಯೊಂದು ರಾಜ್ಯವೂ ಉಳಿದು ಬಂದಿರುವುದೋ ಅಂತಹ ಪ್ರಾಚೀನ ದೇವರನ್ನೇ ಇವರು ದೂರೀಕರಿಸುತ್ತಾರಲ್ಲ? ಅವರು ಜ್ಯೂ ಜನಗಳ ಸಂಪ್ರದಾಯಕ್ಕನುಗುಣವಾಗಿ (ಆರಾಧಿಸುವ ದೇವರನ್ನೇ ನಿರಾಕರಿಸುತ್ತಾರೆ.) ಹಾಗೆ ಮಾಡುವುದರ ಮೂಲಕ ಅವರು ಪ್ರತ್ಯೇಕವಾದ ಕವಲು ದಾರಿಯಲ್ಲಿ ತುಂಡಾಗಿ ಹೋಗುತ್ತಾರಲ್ಲದೇ ಬೇರೇನನ್ನೂ ಸಾಧಿಸಲಾರರು. ಅದು ಆ ಕಡೆ ಗ್ರೀಕರ ಸಂಪ್ರದಾಯವೂ ಅಲ್ಲ, ಈ ಕಡೆ ಜ್ಯೂ ಜನರ ಸಂಪ್ರದಾಯವೂ ಅಲ್ಲ'' (ಗಿಫರ್ಡ್ ಅನು; 5–6).

ಅಂದು ಕ್ರಿಶ್ಚಿಯನ್ನರು ಎದುರಿಸಿದ ಸವಾಲು ಇದಾಗಿತ್ತು. ಅವರು ರೋಮನ್ನರೂ ಆಗಿರಲಿಲ್ಲ, ಜ್ಯೂ ಜನಗಳೂ ಆಗಿರಲಿಲ್ಲ. ಕ್ರಿಶ್ಚಿಯನ್ನರನ್ನು ಇತಿಹಾಸ, ಸಂಪ್ರದಾಯ ಮತ್ತು ಭಾಷೆ, ಇರುವ ಜನಗಳೆಂದೇ ನೋಡುತ್ತಿರಲಿಲ್ಲ. ಅಷ್ಟೇಕೆ ಅವರು ಯಾವುದೇ ಜನಸಮುದಾಯದವರಿಗಿಂತ ಪ್ರಾಚೀನರು ಎಂದು ತಮ್ಮನ್ನು ಗುರುತಿಸುವ ಸ್ಥಿತಿಯಲ್ಲೇ ಇರಲಿಲ್ಲ. ಜ್ಯೂಗಳಿಗೆ ಸಾಧ್ಯವಿತ್ತು, ರೋಮನ್ನರಿಗೆ ಸಾಧ್ಯವಿತ್ತು, ಈಜಿಪ್ಟ್‌ನ ಜನಗಳೂ ಕೂಡ ಬೆಕ್ಕು, ಮೊಸಳೆ, ಸರ್ಪ ಮತ್ತು ನಾಯಿಗಳನ್ನು ಪೂಜಿಸುತ್ತಿದ್ದರಿಂದ ಅವರಿಗೂ ಸಾಧ್ಯವಿತ್ತು. ಆದರೆ ಕ್ರಿಶ್ಚಿಯನ್ನರಿಗೆ ಮಾತ್ರ ಪ್ರಾಚೀನರೆಂದು ಹೇಳಿಕೊಳ್ಳುವುದಕ್ಕೆ ಸಾಧ್ಯವೇ ಇರಲಿಲ್ಲ. ಅವರೀಗ ಕ್ರಿಶ್ಚೇನಿಟಿಯು ಒಂದು ರಿಲಿಜಿಯೋ ಎನ್ನುವುದನ್ನು ಸಾಧಾರಪಡಿಸುವ ತುರ್ತು ಇತ್ತು. ಅವರ ವೈರಿಗಳು ಇವರನ್ನು ನಿಮಗೆ ಸಂಪ್ರದಾಯವಿಲ್ಲವೆಂದು ಮಾಡುತ್ತಿದ್ದ ಟೀಕೆಗಳೇನೇ ಇರಲಿ, ಅವರಿದನ್ನು ಮಾಡಲೇಬೇಕಿತ್ತು. ನಿಜವಾಗಿಯೂ ಅವರು ಅದನ್ನು ಮಾಡುವುದಕ್ಕೇ ಭಾಷೆಯನ್ನು ಸಿದ್ಧಪಡಿಸತೊಡಗಿದರು.

ಮೊದಲ ಐದು ಶತಮಾನಗಳವರೆಗೆ ಬರಹಗಾರರು ಬರೆ–ಬರೆದು, ಅದರ ಪ್ರಾಚೀನತೆಯನ್ನು ಸಾರುವುದಕ್ಕೆ ಬಳಲಿದರು. ಅವರು ತಮ್ಮ ತತ್ವದ ಶಾಸ್ತ್ರವು ಗ್ರೀಕರಿಗಿಂತಲೂ, ಹೋಮರನಿಗಿಂತಲೂ – ಅಷ್ಟೇಕೆ, ಪದಗಳು ಹುಟ್ಟುವುದಕ್ಕಿಂತಲೂ – ಪ್ರಾಚೀನವೆಂದು ಸಾರಿದ್ದೇ ಸಾರಿದ್ದ. ಕ್ರಿ.ಶ. 2ನೇ ಶತಮಾನದ ಬಳಿಕ ಆನಿಟಿಶನ್ (Anitaoch) ಥಿಯೋಫಿಲಸ್ (Theophilus) ಬೈಬಲಿನ ಕಾಲಾನುಕ್ರಮಣಿಕೆಯನ್ನು ಚೆನ್ನಾಗಿ ಪರಿಶೀಲಿಸಿ ಹೀಗೆ ಬರೆಯುತ್ತಾನೆ:

''ನಮ್ಮ ಡಾಕ್ಟ್ರಿನ್ನಿನ ಅಪೌರುಷೇಯತೆಯನ್ನು ಮತ್ತು ಪ್ರವಾದಿಯ ಪ್ರಾಚೀನತೆಯನ್ನು ಯಾರು ಬೇಕಾದರೂ ಗಮನಿಸಬಹುದು. ಕೆಲವರು ಹೇಳುವ ಹಾಗೆ ನಮ್ಮ ಡಾಕ್ಟ್ರಿನ್ ಇತ್ತೀಚಿನದಲ್ಲ. ಹಾಗೆಯೇ ನಮ್ಮ ತತ್ವವು ಪೌರಾಣಿಕವಾಗಲೀ ಮಿಥ್ಯಾರೋಪವಾದುದಾಗಲೀ ಆದುದಲ್ಲ. ಅದು ತುಂಬ ಪ್ರಾಚೀನವೂ ಸತ್ಯವೂ ಆದುದು'' (ಥೀಯೋಫಿಲಸ್ ಟು ಆಟೋಲಿಕಸ್ ಮತ್ತು ಡೊನಾಲ್ಡ್‌ಸನ್ ಸಂಪಾದಿತ ಎನ್.ಡಿ. vol 11I21).

ಇಂತಹ ವಾದವನ್ನು ಮಾಡಿದವರು ಒಬ್ಬರಲ್ಲ, ಇಬ್ಬರಲ್ಲ – ಚರ್ಚಿನ ಫಾದರ್‌ಗಳಲ್ಲಿ ಯಾರು ಮೊದಲಿಗರು – ಎನ್ನುವವರೆಗೆ ಈ ಪಟ್ಟಿ ಬೆಳೆಯುತ್ತದೆ. ಪ್ರತಿಯೊಬ್ಬರೂ ಕ್ರಿಶ್ಚೇನಿಟಿಯು ಮೊತ್ತಮೊದಲ ಪ್ರಾಚೀನ ಮತ್ತು ಅತೀ ಪ್ರಾಚೀನ ರಿಲಿಜಿಯನ್‌ಗಿಂತಲೂ ಮೊತ್ತಮೊದಲನೆಯದು ಎಂದು ಸಾರಿದರು. ಇದರ ಮೂಲಕ ಆಧುನಿಕವಾಗಿ ವಿಸ್ಮಯಕಾರಕವಾಗುವುದಕ್ಕಿಂತಲೂ ಬದಲಾಗಿ ಸರ್ವ ಪ್ರಜ್ಞೆಯ, ಪ್ರಾಚೀನ, ಅನನ್ಯ ಮತ್ತು ಸತ್ಯವಾಗಿ ಪ್ರಕಟವಾಗಬೇಕಿತ್ತು.

ಕ್ರಿಶ್ಚಿನ್ ರಿಲಿಜನ್ನಿಗೆ ತನ್ನ ಪ್ರಾಚೀನತೆಯನ್ನು ಸಾರುವುದಕ್ಕೆ ಎರಡು ಸಂಗತಿಗಳು ಅಗತ್ಯವಾಗಿ ಬೇಕಾಗಿದ್ದವು. ಮೊದಲನೆಯದು ಪ್ರಾಚೀನತೆಗೆ ಸಂಬಂಧಿಸಿದ್ದೇ ಆಗಿತ್ತು. ಪೇಗನ್ನರು ಕ್ರಿಶ್ಚಿನ್ನರಿಗೆ ಅವರು ಪ್ರಾಚೀನತೆಯನ್ನು ಅನುಸರಿಸಿರುವುದೇ ಆದರೆ ಆ ಮೂಲಕ ಅವು ಪೂಜನೀಯವೂ, ಆಚರಣೆಗಳೂ, ಪೂರ್ವಿಕವಾದರೆ ಅದನ್ನು ತೋರಿಸಿ ಎಂದು ಪಂಥಾಹ್ವಾನ ನೀಡಿದರು. ಜ್ಯೂಗಳು ಇಂಥ ಪಂಥಾಹ್ವಾನವನ್ನು ಹೋಮರನಿಗಿಂತಲೂ ಮೋಸೆಸನು ಹಳಬನೆಂದು ವಾದಿಸುವುದರ ಜೊತೆಗೆ ಅಲ್ಲದೇ ತಮ್ಮ ಪ್ರಾಚೀನ ಆಚಾರಗಳಿಗೆ ತಾವು ನಿಷ್ಠರು ಎಂದು ವಾದಿಸತೊಡಗಿದರು. ಇದರ ಬದಲಾಗಿ ಕ್ರಿಶ್ಚಿಯನ್ನರು ಆ ಪ್ರಶ್ನೆಯನ್ನು ತಿರುಗಿಸತೊಡಗಿದರು. ಪ್ರಾಚೀನರ ಆಚಾರಗಳಿಗನುಗುಣವಾಗಿ ಅವರು ನಡೆದುಕೊಳ್ಳುತ್ತಿದ್ದಾರೆ ಎಂದು ತೋರಿಸುವುದರ ಬದಲು ತಮ್ಮ ಡಾಕ್ಟ್ರಿನ್‌ಗಳು ಪ್ರಾಚೀನವಾದವು; ಆದ್ದರಿಂದ ಅದು ಸತ್ಯ ಎಂದು ಪ್ರಶ್ನೆಯನ್ನೇ ತಿರುಗಿಸತೊಡಗಿದರು. ಎರಡನೆಯ ಸಂಗತಿ ಪೇಗನ್ನರ ಪ್ರಶ್ನೆಯನ್ನು ತಿರುವು  ಮುರುವು ಮಾಡಿದಾಗ ಉಂಟಾದುದು. ಯಾವುದಾದರೊಂದು ಡಾಕ್ಟ್ರಿನ್ನಿನ ಸೇರ್ಪಡೆಯು ಆಚಾರವೊಂದರ ಅನುಸರಣೆಗೆ ಸರಿಯಾದುದು ಹೇಗೆ ಎನ್ನುವುದೇ ಪ್ರಶ್ನೆ. ಈ ಎರಡೂ ಅಂಶಗಳನ್ನು ತುಂಬ ಸೂಕ್ಷ್ಮವಾಗಿ ಪರಿಶೀಲಿಸಬೇಕಾಗುತ್ತದೆ.

ಕ್ರಿಶ್ಚೇನಿಟಿಯು ಪೇಗನ್ನ ಚಿಂತಕರೊಂದಿಗೆ ಮುಖಾಮುಖಿಯಾದಾಗ ಅದು ತನ್ನನ್ನು ಪರಿಪೂರ್ಣಗೊಳಿಸಿಕೊಳ್ಳಲು ಜ್ಯುಡಾಯಿಸಮ್‌ನ್ನು ಸ್ಥಾನಪಲ್ಲಟಗೊಳಿಸಿತು. ಓಲ್ಡ್ ಮತ್ತು ನ್ಯೂ ಟೆಸ್ಟಾಮೆಂಟ್‌ಗಳೆರಡೂ ಕ್ರಿಶ್ಚಿಯನ್ನರ ಪವಿತ್ರ ಗ್ರಂಥಗಳಾದವು. ಏಕೆಂದರೆ ಇವೆರಡೂ ಎಲ್ಲಾ ಡಾಕ್ಟ್ರಿನ್‌ಗಳಿಗಿಂತಲೂ ಪ್ರಾಚೀನವಾದವು. ಆದುದರಿಂದ ಕ್ರಿಶ್ಚೇನಿಟಿಯು ಪ್ರಾಚೀನವಾಯಿತು. ಜ್ಯೂ ಜನಗಳಿಗೆ ಏನು ಬೇಕಾಗಿತ್ತೋ ಅದೆಲ್ಲವೂ ಈಗ ಅವರ ರಿಲಿಜಿಯನ್ನಿನಲ್ಲಿತ್ತು. ಜ್ಯೂಗಳ ಜೊತೆಗಿನ ವಾದ  ವಿವಾದಗಳಲ್ಲಿ ಕ್ರಿಶ್ಚೇನಿಟಿಯು ಈಗ ಒಂದು ನಿರ್ಣಾಯಕ ಹಂತಕ್ಕೆ ಬಂದಿತ್ತು. ಅದೀಗ ಶತಮಾನಗಳ ಸಮಸ್ಯೆಯಾದ ಟ್ರಡಿಷೊ (ಸಂಪ್ರದಾಯವಾಗಿರುವುದು) ಎನ್ನುವ ಅನುಬಂಧವನ್ನು ಪರೋಕ್ಷವಾಗಿ ಸಾಧಿಸಿತ್ತು. ಅದಕ್ಕೆ ಪರ್ಯಾಯವಾಗಿ ಅವರು ನಾವು ನಿಜವಾದ ಡಾಕ್ಟ್ರಿನ್‌ನ ಅನುಪಾಲಕರೆಂದೂ, ಆದುದರಿಂದ ತಮ್ಮ ರಿಲಿಜಿಯನ್ನೆ ನಿಜವಾದ ರಿಲಿಜಿಯನ್ ಎಂದೂ ಸಾರತೊಡಗಿದರು.

ಈ ಮೇಲಿನ ಉಲ್ಲೇಖಗಳಿಂದ ಒಂದು ಸಂಗತಿ ಸ್ಪಷ್ಟಗೊಳ್ಳುತ್ತದೆ. ಅದೇನೆಂದರೆ ರಿಲಿಜಿಯನ್ ರೂಪುಗೊಳ್ಳಬೇಕಾದರೆ ಸಂಸ್ಕೃತಿಯುಳ್ಳ ಜನಾಂಗ, ಶ್ರೇಷ್ಠವಾದ ಭಾಷೆ, ಪವಿತ್ರ ಗ್ರಂಥ,  ಪ್ರವಾದಿ ಈ ಮೂಲ ಅಗತ್ಯಗಳು ಇರಲೇಬೇಕು. ಅದಿಲ್ಲದಿದ್ದರೆ ರಿಲಿಜಿಯನ್ ರೂಪುಗೊಳ್ಳುವುದೇ ಇಲ್ಲ. ಈ ಮೂಲ ಅಗತ್ಯಗಳಲ್ಲಿ ಒಂದಾದ ಶ್ರೇಷ್ಠ ಭಾಷೆಯ ಕುರಿತು ಇದೀಗ ನಾವು ಚರ್ಚಿಸುತ್ತಿದ್ದೇವೆ. ಅಂದರೆ ಶ್ರೇಷ್ಠ ಭಾಷೆಯಲ್ಲಿ ಗಾಡ್ ಪವಿತ್ರ ಗ್ರಂಥವನ್ನು ಅವನ ಅನುಯಾಯಿಗಳಿಗೆ ಅವತೀರ್ಣಗೊಳಿಸುತ್ತಾನೆ. ಉಳಿದ ಭಾಷೆಗಳು ಮತ್ತು ಜನಗಳು ಕನಿಷ್ಠರಾದುದರಿಂದಲೇ ಗಾಡ್ ಉದ್ದೇಶಪೂರ್ವಕವಾಗಿ ಈ ಆಯ್ಕೆಯನ್ನು ಮಾಡುತ್ತಾನೆ. ಕನಿಷ್ಠರಾದವರು ಕೀಳು ಭಾಷೆಯಲ್ಲಿ ಗಾಡ್‌ನ ಪವಿತ್ರವಾಣಿಯನ್ನು ಬೇಕಾದರೆ ಅನುವಾದ ಮಾಡಿಕೊಳ್ಳಬಹುದು ಎನ್ನುವುದೇ ಇದರ

ಅರ್ಥ. ಆದರೆ ಶ್ರೇಷ್ಠ ಭಾಷೆಯಲ್ಲಿ ಇರುವುದು ಯಾವಾಗಲೂ ಕನಿಷ್ಠ ಭಾಷೆಗೆ ಗಾಡ್‌ನ ಪವಿತ್ರವಾಣಿಯಂತೆ ಹರಿದು ಬರುವುದೇ ಇಲ್ಲ. ಭಾಷಾಂತರಕ್ಕೆ ಸಂಬಂಧಿಸಿದ ಚರ್ಚೆಗಳು ಆರಂಭವಾಗುವುದೇ ಈ ಮೂಲ ನೆಲೆಗಟ್ಟಿನಲ್ಲಿ. ಸೋರ್ಸ್ ಲಾಂಗ್ವೇಜ್ ಮತ್ತು ಟಾರ್ಗೆಟ್ ಲಾಂಗ್ವೇಜ್ ಎನ್ನುವ ಪರಿಕಲ್ಪನೆ ರೂಪುಗೊಳ್ಳುವುದೇ ಈ ಹಿನ್ನೆಲೆಯಲ್ಲಿ.

ಆದರೆ ಅನುವಾದಕ್ಕೆ ಸಂಬಂಧಿಸಿದ ಹಾಗೆ ನಾನು ಈ ಹಿಂದೆ ಹೇಳಿರುವುದು ಅಥವಾ ಮುಂದೆ ಪ್ರತಿಪಾದಿಸುವ ವಿವರಗಳು ಬಾಲಗಂಗಾಧರ ಅವರ ಪುಸ್ತಕದಲ್ಲಿ ಬಂದಿಲ್ಲ. ಬಾಲಗಂಗಾಧರ ಅವರು ಅನುವಾದಕ್ಕೆ ಸಂಬಂಧಿಸಿದ ಹಾಗೆ ನಾನು ಮಂಡಿಸುತ್ತಿರುವ ವಿವರಗಳನ್ನು ಎಲ್ಲಿಯೂ ಹೇಳಿಲ್ಲ. ನಾನು ರಿಲಿಜಿಯನ್ನಿಗೆ ಸಂಬಂಧಿಸಿದ ಅವರ ಹೈಪೋಥೀಸಿಸನ್ನು ಅನುವಾದ ಸಿದ್ಧಾಂತಗಳನ್ನು ಬೆಳೆಸುವುದಕ್ಕೆ ಕೇವಲ ಹಿನ್ನೆಲೆಯಾಗಿ ಮಾತ್ರ ಬಳಸುತ್ತಿದ್ದೇನೆ. ಹಾಗಾದುದರಿಂದ ಈ ವಿವರಗಳು ಅವರ ಕೃತಿಯ ಕೇವಲ ಆನ್ವಯಿಕ ಪ್ರಕ್ರಿಯೆಯಲ್ಲ. ಇದು ಅದನ್ನು ಕ್ರಿಯಾಶೀಲವಾಗಿ ಮುಂದುವರೆಸುವ ಪ್ರಯತ್ನವಾಗಿದೆ ಎಂಬುದನ್ನು ಓದುಗರು ಗಮನಿಸಬೇಕಾಗಿ ವಿನಂತಿಸುತ್ತೇನೆ

## ಭಾಗ -2

ಹಿಂದಿನ ಲೇಖನದಲ್ಲಿ ಅನುವಾದ ಎನ್ನುವುದು ರಿಲೀಜಿಯಸ್ ಆದ ಪರಿಕಲ್ಪನೆ ಎಂದು ನಾನು ಆಧಾರ ಸಹಿತವಾಗಿ ವಿವರಿಸಿದ್ದೆ. ಆ ಲೇಖನದಲ್ಲಿ ಇಸ್ಲಾಂ ರಿಲೀಜಿಯನ್ನನ್ನು ಪ್ರಾಸಂಗಿಕವಾಗಿ ಉಲ್ಲೇಖಿಸುತ್ತಾ ಕ್ರಿಶ್ಚಿಯನ್ ರಿಲಿಜಿನ್ ಬಗೆಗೆ ಹೆಚ್ಚಿನ ಚರ್ಚೆಯನ್ನು ಮಂಡಿಸಿದ್ದೆ. ಆದುದರಿಂದ ಈ ಭಾಗದಲ್ಲಿ ಇಸ್ಲಾಂ ರಿಲಿಜಿಯನ್‌ನ ಹಿನ್ನೆಲೆಯಲ್ಲಿ ಈ ಚರ್ಚೆಯನ್ನು ಹೇಗೆ ಮುಂದುವರೆಸಬಹುದು ಎನ್ನುವ ಪ್ರಯತ್ನ ಮಾಡುತ್ತೇನೆ.

ಪವಿತ್ರ ಕುರ್‌ಆನ್‌ನ ಸೂರಃ 43, ಅಝ್ಝುಖ್‌ರುಫ್ ರಲ್ಲಿ ಹೀಗೆ ಇದೆ.

1. ಹಾ ಮೀಮ್.

2. ಈ ಸುಸ್ಪಷ್ಟ ಗ್ರಂಥದಾಣೆ

3. ನೀವು ಇದನ್ನು ಗ್ರಹಿಸಿಕೊಳ್ಳಲಿಕ್ಕಾಗಿ ನಾವು ಇದನ್ನು ಅರಬಿ ಭಾಷೆಯ ಕುರ್‌ಆನನ್ನಾಗಿ ಮಾಡಿರುತ್ತೇವೆ.

4. ವಾಸ್ತವದಲ್ಲಿ ಇದು ಉಮ್ಮುಲ್ ಕಿತಾಬ್ (ಮಾತೃ ಗ್ರಂಥ)ನಲ್ಲಿ ಲಿಖಿತವಿದೆ. ನಮ್ಮಲ್ಲಿ ಅತ್ಯುನ್ನತ ಸ್ಥಾನವುಳ್ಳ ಮತ್ತು ಯುಕ್ತಿ ಭರಿತ ಗ್ರಂಥ (ಉಮ್ಮುಲ್ ಕಿತಾಬ್ ಎಂದರೆ ಮೂಲ ಗ್ರಂಥ. ಅರ್ಥಾತ್ ಸಮಸ್ತ ಪ್ರವಾದಿಗಳ(ಅ) ಮೇಲೆ ಅವತೀರ್ಣಗೊಂಡ ಗ್ರಂಥಗಳಿಗೆ ಮೂಲಾಧಾರವಾದ ಗ್ರಂಥ. ಇದಕ್ಕೆ ಬುರೂಜ್ ಅಧ್ಯಾಯದಲ್ಲಿ ಲೌಹಿನ್ ಮಹ್‌ಫೂಝ್ ಎಂಬ ಪದ ಬಳಕೆಯಾಗಿದೆ. ಅರ್ಥಾತ್ ಬರೆದುದನ್ನು ಅಳಿಸಲಾಗದ ಮತ್ತು ಎಲ್ಲಾ ವಿಧದ ಹಸ್ತಕ್ಷೇಪಗಳಿಂದ ಸುರಕ್ಷಿತವಾದ ಗ್ರಂಥ. ಪವಿತ್ರ ಕುರ್‌ಆನ್ ಪು 802).

ಹಾಗೆಯೇ ಸೂರಃ 19 ಮರ್ಯಮ್ ನಲ್ಲಿ ಹೀಗೆ ಹೇಳಲಾಗಿದೆ.

97. ಆದುದರಿಂದ ಓ ಪೈಗಂಬರರೇ ನೀವು ಭಯ ಭಕ್ತಿಯನ್ನಿರಿಸಿಕೊಂಡಿರುವವರೆಗೆ ಸುವಾರ್ತೆಯನ್ನೀಯಲಿಕ್ಕಾಗಿ ಹಾಗೂ ಹಟ ಸಾಧಕರಿಗೆ ಎಚ್ಚರಿಕೆ ಕೊಡಲಿಕ್ಕಾಗಿಯೇ ನಾವು ಈ ವಾಣಿಯನ್ನು ಸರಳಗೊಳಿಸಿ ನಿಮ್ಮ ಭಾಷೆಯಲ್ಲಿ ಅವತ್ತೀರ್ಣಗೊಳಿಸಿರುತ್ತೇವೆ. (ಪವಿತ್ರ ಕುರ್‌ಆನ್ ಪು 506)

112. ಸತ್ಕರ್ಮಗಳನ್ನು ಮಾಡಿರುವುದರೊಂದಿಗೆ ಸತ್ಯ ವಿಶ್ವಾಸಿಯೂ ಆಗಿರುವಾತನಿಗೆ ಯಾವುದೇ ಅನ್ಯಾಯ ಮತ್ತು ಹಕ್ಕು ಚ್ಯುತಿಯ ಭಯವಿರಲಾರದು.

113. ಓ ಪೈಗಂಬರರೇ ಈ ರೀತಿ ನಾವು ಇದನ್ನು ಅರಬಿ ಭಾಷೆಯ ಕುರ್‌ಆನ್ ಆಗಿ ಅವತ್ತೀರ್ಣಗೊಳಿಸಿರುವೆವು. ಮತ್ತು ಇದರಲ್ಲಿ ಬಗೆ ಬಗೆಯಾಗಿ ಎಚ್ಚರಿಕೆಯನ್ನಿತ್ತಿರುವೆವು. ಇವರು ಪಥ ಭ್ರಷ್ಟತೆಯಿಂದ ದೂರವಿರಲಿಕ್ಕಾಗಿ ಅಥವಾ ಅದರ ಮೂಲಕ ಇವರಲ್ಲಿ ಚೈತನ್ಯದ ಚಿಹ್ನೆ ಮೂಡಿ ಬರಬಹುದೆಂದು ನಿರೀಕ್ಷಿಸಿ ಹೀಗೆ ಮಾಡಿದ್ದೇವೆ.(ಪವಿತ್ರ ಕುರ್‌ಆನ್ ಪು. 522)

ಇದೇ ರೀತಿ ಸೂರಃ 26 ಅಶ್ಶುಅರಾ ದಲ್ಲಿ ಹೀಗೆ ಹೇಳಲಾಗಿದೆ.

193–94. ನೀವು (ದೇವವತಿಯಿಂದ ದೇವಸೃಷ್ಟಿಗಳಿಗೆ) ಎಚ್ಚರಿಕೆ ನೀಡುವವರಲ್ಲಿ ಸೇರಲಿಕ್ಕಾಗಿ ಪ್ರಾಮಾಣಿಕ ಆತ್ಮವು ಇದರ ಜೊತೆ ನಿಮ್ಮ ಹೃದಯಕ್ಕೆ ಇಳಿದಿದೆ.

195. ಇದು ಸುಸ್ಪಷ್ಟ ಅರಬೀ ಭಾಷೆಯಲ್ಲಿದೆ.

196. ಮತ್ತು ಗತ ಜನಾಂಗಗಳ ಗ್ರಂಥಗಳಲ್ಲೂ ಇದು ಇದೆ.

197. ಇದನ್ನು ಬನೀ ಇಸ್‌ರಾಈಲರಾ ವಿದ್ವಾಂಸರು ತಿಳಿದಿರುವುದು ಇವರಿಗೆ (ಮಕ್ಕಾವಾಸಿಗಳಿಗೆ) ಒಂದು ನಿದರ್ಶನವಲ್ಲವೇ?

198. (ಆದರೆ ಇವರ ಹಟಮಾರಿತನವು ಯಾವ ಮಟ್ಟಕ್ಕೇರಿದೆ ಎಂದರೆ) ನಾವು ಇದನ್ನು ಓರ್ವ ಅರಬೇತರನ ಮೇಲೆ ಅವತ್ತೀರ್ಣಗೊಳಿಸಿ ಬಿಡುತ್ತಿದ್ದರೆ,

199 ಹಾಗೂ ಅವನು ಇದನ್ನು(ಶುದ್ಧ ಅರಬೀ ಭಾಷೆಯ ಈ ವಾಣಿಯನ್ನು) ಓದಿ ಹೇಳುತ್ತಿದ್ದರೆ ಆಗಲೂ ಇವರು ನಂಬುತ್ತಿರಲಿಲ್ಲ(ಪವಿತ್ರ ಕುರ್‌ಆನ್ ಪು. 617)

ಇದೇ ರೀತಿ ಸೂರಃ 39 ಅಝ್ಝುಮರ್ ನಲ್ಲಿ ಹೀಗೆ ಹೇಳಲಾಗಿದೆ.

27. ಜನರು ಪ್ರಜ್ಞಾವಂತರಾಗಲೆಂದು ನಾವು ಈ ಕುರ್‌ಆನ್‌ನಲ್ಲಿ ಅವರಿಗೆ ತರತರದ ಉದಾಹರಣೆಗಳನ್ನು ನೀಡಿದ್ದೇವೆ.

28. ಅರಬೀ ಭಾಷೆಯಲ್ಲಿರುವ ಕುರ್‌ಆನ್ ಇದರಲ್ಲಿ ಯಾವ ವಕ್ರತೆಯೂ ಇಲ್ಲ.(ಇದು ಇವರು ರಕ್ಷಣೆ ಹೊಂದಲಿಕ್ಕಾಗಿದೆ. ಪವಿತ್ರ ಕುರ್‌ಆನ್ ಪು. 759)

ಹೀಗೆ ಪವಿತ್ರ ಕುರ್‌ಆನ್‌ನಲ್ಲಿ ಅರಬೀ ಭಾಷೆಯನ್ನು ಪವಿತ್ರವೆಂದು ಅಲ್ಲಾಹ್ ತನ್ನ ಅನುಯಾಯಿಗಳಿಗಾಗಿ ಇದನ್ನು ಅವತ್ತೀರ್ಣಗೊಳಿಸಿದನೆಂದೂ ಸಾರಲಾಗಿದೆ. ಹಾಗೆ ನೋಡಿದರೆ ಕುರ್‌ಆನ್‌ನ ಅನುವಾದವನ್ನು ಇತರ ಭಾಷೆಗಳಿಗೆ ಮಾಡಬಹುದೇ ಎನ್ನುವ ವಿಷಯದಲ್ಲಿ ಬಹಳ ಚರ್ಚೆಗಳಾಗಿವೆ. ಏಕೆಂದರೆ ಅಲ್ಲಾಹ್ ಮೊದಲು ಅರಬೀ ಭಾಷೆಯಲ್ಲಿ ಸಂದೇಶ ನೀಡಿರುವಾಗ ಬೇರೆ ಭಾಷೆಗಳಲ್ಲಿ ಅದರ ತರ್ಜುಮೆ ಎಷ್ಟರ ಮಟ್ಟಿಗೆ ಸೂಕ್ತ ಎನ್ನುವುದು ಮುಖ್ಯವಾದದ್ದು. ಆದುದರಿಂದ ಕುರ್‌ಆನ್‌ನ ಅನುವಾದ ಪ್ರಕ್ರಿಯೆ ಬಹಳ ತಡವಾಗಿ ನಡೆಯುತ್ತದೆ. ಅದೇನೇ ಇರಲಿ ಜಗತ್ತಿನ ದೊಡ್ಡ ರಿಲಿಜಿಯನ್‌ಗಳಲ್ಲಿ ಒಂದಾದ ಇಸ್ಲಾಂನಲ್ಲಿಯೂ ಮೂಲಭಾಷೆಯ ಕಲ್ಪನೆ ಸ್ಪಷ್ಟವಾಗಿದೆ ಎಂದು ಇದರಿಂದ ತಿಳಿಯುತ್ತದೆ. ಮುಂದುವರೆದು ಸೃಜನಶೀಲತೆಯ ಕುರಿತು ಪವಿತ್ರ ಕುರ್‌ಆನ್‌ನಲ್ಲಿ ಏನು ಹೇಳಲಾಗಿದೆ ಎನ್ನುವುದನ್ನು ಮುಂದೆ ನೋಡಬಹುದು.

ಸೂರಃ 26 ಅಶ್ಶುಅರಾ ದಲ್ಲಿ ಹೀಗೆ ಹೇಳಲಾಗಿದೆ:

221. ಜನರೇ ಶೈತಾನರು ಯಾರ ಮೇಲೆ ಇಳಿಯುತ್ತಾರೆಂದು ನಾನು ನಿಮಗೆ ಹೇಳಲೆ?

222. ಅವರು ಪ್ರತಿಯೊಬ್ಬ ಸುಳ್ಳುಗಾರ ಪಾಪಿಯ ಮೇಲೆ ಇಳಿಯುತ್ತಾರೆ–

223. ವದಂತಿಗಳನ್ನು ಕಿವಿಗೆ ತುಂಬುತ್ತಾರೆ ಮತ್ತು ಅವರಲ್ಲಿ ಹೆಚ್ಚಿನವರು

ಸುಳ್ಳುಗಾರರಾಗಿರುತ್ತಾರೆ.

224. ಇನ್ನು ಕವಿಗಳು– ಅವರ ಹಿಂದೆ ದಾರಿಗೆಟ್ಟವರು ನಡೆಯುತ್ತಾರೆ.

225. ಅವರು ಪ್ರತಿಯೊಂದು ಕಣಿವೆಯಲ್ಲಿ ಅಲೆದಾಡುವುದನ್ನು ನೀವು ಕಾಣುತ್ತಿಲ್ಲವೇ

226. ಮತ್ತು ಅವರು ತಾವು ಮಾಡದಿದ್ದುದನ್ನು ಆಳುತ್ತಾರೆ–

227. ಸತ್ಯ ವಿಶ್ವಾಸವನ್ನು ಸ್ವೀಕರಿಸಿ , ಸತ್ಕರ್ಮಗಳನ್ನು ಮಾಡುತ್ತಾ ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸುತ್ತಾ, ತಮ್ಮ ಮೇಲೆ ಅಕ್ರಮವಾದಾಗ ಮಾತ್ರ ಅಷ್ಟೇ ಪ್ರತಿಕಾರ ತೀರಿಸುವವರು ಇದಕ್ಕೆ ಹೊರತಾಗಿದ್ದಾರೆ. (ಪವಿತ್ರ ಕುರ್‌ಆನ್‌ನನ್ನು ಅನುವಾದ ಮಾಡಿರುವ ಎಸ್ ಅಬ್ದುಲ್ ಗಫ್ಫಾರ್‌ರವರು 227 ರಲ್ಲಿ ಹೇಳಿರುವ ವಾಕ್ಯಕ್ಕೆ ಹೀಗೆ ಟಿಪ್ಪಣಿ ಬರೆದಿದ್ದಾರೆ– ಇಲ್ಲಿ ಕವಿಗಳ ಕುರಿತು ಮಾಡಲಾದ ಸಾರ್ವತ್ರಿಕ ಖಂಡನೆಯ ನಂತರ ನಾಲ್ಕು ವಿಶೇಷತೆಗಳನ್ನು ಹೊಂದಿರುವ ಕವಿಗಳನ್ನು ಅದರಿಂದ ಹೊರತುಪಡಿಸಲಾಗಿದೆ. ಮೊದಲನೆಯದಾಗಿ ಅವರು ಸತ್ಯ ವಿಶ್ವಾಸಿಯಾಗಿರಬೇಕು. ಎರಡನೆಯದಾಗಿ ತಮ್ಮ ವ್ಯವಹಾರಿಕ ಜೀವನದಲ್ಲಿ ಸಚ್ಚರಿತರಾಗಿರಬೇಕು. ಮೂರನೆಯದಾಗಿ ಅಲ್ಲಾಹುನನ್ನು ಯಥೇಚ್ಛ ಸ್ಮರಿಸುವವರಾಗಿರಬೇಕು. ನಾಲ್ಕನೆಯದಾಗಿ ವೈಯಕ್ತಿಕ ಲಾಭಕ್ಕಾಗಿ ಅವರು ಯಾರನ್ನೂ ನಿಂದಿಸುವವರಾಗಿರಬಾರದು ಮಾತ್ರವಲ್ಲ ಆಕ್ರಮಿಗಳ ವಿರುದ್ಧ ಸತ್ಯದ ಪರವಹಿಸುವ ಅವಶ್ಯಕತೆ ಇದ್ದರೆ ವೀರ ಕಲಿಗಳು ಬಿಲ್ಲು ಮತ್ತು ಖಡ್ಗವನ್ನು ಉಪಯೋಗಿಸುವಂತೆ ತಮ್ಮ ನಾಲಗೆಯನ್ನು ಉಪಯೋಗಿಸುವವರಾಗಿರಬೇಕು. ಅದೇ ಪು. 620)

ಹಾಗೆಯೇ ಸೂರಃ 36 ಯಾಸೀನ್‌ನಲ್ಲಿಯೂ ಕಾವ್ಯದ ಕುರಿತು ಹೀಗೆ ಹೇಳಲಾಗಿದೆ.

69. ನಾವು ಇವರಿಗೆ (ಈ ಪ್ರವಾದಿಗೆ) ಕಾವ್ಯವನ್ನು ಕಲಿಸಿಕೊಡಲಿಲ್ಲ, ಕಾವ್ಯವು ಇವರಿಗೆ ಭೂಷಣವೂ ಅಲ್ಲ, ಇದೊಂದು ಉಪದೇಶ ಮತ್ತು ಸ್ಪಷ್ಟವಾಗಿ ಓದಲ್ಪಡುವ ಗ್ರಂಥವಾಗಿದೆ.

70. ಇದು ಜೀವವುಳ್ಳ ಪ್ರತಿಯೊಬ್ಬನಿಗೆ ಎಚ್ಚರಿಕೆ ನೀಡಲಿಕ್ಕಾಗಿ ಮತ್ತು ನಿರಾಕರಿಸುವವರ ವಿರುದ್ಧ ಸತ್ಯದ ಸಮರ್ಥನೆಗಾಗಿರುತ್ತದೆ. (ಅದೇ 725)

ಸೂರಃ 52 ಅತ್ತೂರ್‌ನಲ್ಲಿ ಹೀಗೆ ಹೇಳಲಾಗಿದೆ.

28. ನಾವು ಗತ ಜೀವನದಲ್ಲಿ ಅವನನ್ನೇ ಪ್ರಾರ್ಥಿಸುತ್ತಿದ್ದೆವು. ಅವನು ನಿಜಕ್ಕೂ ಮಹಾ ಉಪಕಾರಿಯೂ, ಕರುಣಾ ನಿಧಿಯೂ ಆಗಿರುವನು.

29 ಆದುದರಿಂದ ಸಂದೇಶವಾಹಕರೇ ನೀವು ಉಪದೇಶಮಾಡುತ್ತಾ ಹೋಗಿರಿ. ನಿಮ್ಮ ಪ್ರಭುವಿನ ಅನುಗ್ರಹದಿಂದ ನೀವು ಮಾಟಗಾರರೂ ಅಲ್ಲ ಹುಚ್ಚರೂ ಅಲ್ಲ

30. ಇವನು ಕವಿ, ಇವನ ವಿಷಯದಲ್ಲಿ ನಾವು ಕಾಲಚಕ್ರ ಉರುಳುವುದನ್ನು ಕಾಯುತ್ತಿದ್ದೇವೆಂದು ಇವರು ಹೇಳುತ್ತಿರುವರೇ (ಅದೇ, 874)

ಇದಲ್ಲದೇ ಸೂರಃ 69 ಅಲ್‌ಹಾಕ್ಕಃದಲ್ಲಿಯೂ ಹೀಗೆ ಹೇಳಲಾಗಿದೆ.

40. ಇದು ಓರ್ವ ಗೌರವಾನ್ವಿತ ಸಂದೇಶವಾಹಕನ ಮಾತಾಗಿದೆ.

41 ಇದು ಯಾವುದೇ ಕವಿಯ ಮಾತಲ್ಲ, ನೀವು ಅತ್ಯಲ್ಪವೇ ವಿಶ್ವಾಸವಿರಿಸುತ್ತೀರಿ–

42. ಮತ್ತು ಇದು ಯಾವುದೇ ಜ್ಯೋತಿಷ್ಯನ ಮಾತೂ ಅಲ್ಲ, ನೀವು ಅತ್ಯಲ್ಪವೇ ಚಿಂತನೆ ಮಾಡುತ್ತೀರಿ (ಅದೇ ಪು, 970)

ಪವಿತ್ರ ಕುರ್‌ಆನ್‌ನಲ್ಲಿ ಕಾವ್ಯದ ಬಗೆಗೆ ಅಂದರೆ ಸೃಜನಶೀಲತೆಯ ಬಗೆಗೆ ಇರುವ ಪವಿತ್ರವಾಣಿಗಳನ್ನು ಮೇಲೆ ಸಂಗ್ರಹಿಸಲಾಗಿದೆ. ಇದರಿಂದ ಒಂದು ವಿಷಯ ಸೂರ್ಯಸ್ಪಷ್ಟವಾಗುತ್ತಿದೆ. ಪವಿತ್ರ ಕುರ್‌ಆನ್‌ನಲ್ಲಿ ಕಾವ್ಯವನ್ನು ಕನಿಷ್ಠವಾಗಿ ನೋಡಲಾಗಿದೆ. ಅದು ಪ್ರವಾದಿಯ ವಾಣಿಯಷ್ಟು

ಪವಿತ್ರವೂ, ನೇರವೂ, ಸತ್ಯವೂ ಆದುದಲ್ಲ. ಜ್ಯೋತಿಷಿ, ಕವಿ, ಮಾಟಗಾರ, ಶೈತಾನ, ಸುಳ್ಳುಗಾರರು ಇವರೆಲ್ಲ ಸಮಾನರಾದವರು. ಹೀಗಾದರೆ ಸೃಜನಶೀಲತೆಗೂ ಇದೇ ರೀತಿಯ ಮಣೆ ಹಾಕಬೇಕು. ಅಂದರೆ ಸೃಜನಶೀಲತೆ ಎನ್ನುವುದು ಅಲ್ಲಾಹ್‌ನ ವಾಣಿಯ ಹಾಗೆ ಪವಿತ್ರವಾದುದಲ್ಲ ಎಂದರ್ಥ.

ರಿಲಿಜಿಯನ್‌ಗಳು ಕಾವ್ಯದ ಕುರಿತು, ಸೃಜನಶೀಲತೆಯ ಕುರಿತು ಹೊಂದಿರುವ ಅಭಿಪ್ರಾಯಗಳೇ ಇವುಗಳಾಗಿವೆ. ಪವಿತ್ರವಾಣಿ, ಅಥವಾ ಸತ್ಯವಾಣಿಯು ಪ್ರವಾದಿಯ ಮೂಲಕ ಪವಿತ್ರ ಗ್ರಂಥಗಳಲ್ಲಿ ಶ್ರೇಷ್ಠ ಭಾಷೆಯಲ್ಲಿ ಅವತೀರ್ಣಗೊಳ್ಳುತ್ತದೆ. ಉಳಿದುದೆಲ್ಲವೂ ಸೈತಾನನ ಅಥವಾ ಡೆವಿಲ್‌ನ ವಾಣಿಯಾಗಿರುತ್ತದೆ. ಅಂದರೆ ಕಾವ್ಯ, ಸೃಜನಶೀಲತೆ ಇವೆಲ್ಲವೂ ಸುಳ್ಳು ಅಥವಾ ಕಟ್ಟುಕತೆಗಳು. ಅನುವಾದ ಮಾಡುವುದು ಅಥವಾ ಟಾರ್ಗೆಟ್ ಲಾಂಗ್ವೇಜ್‌ಗೆ ತರುವುದು ಎಂದರೆ ಗಾಡ್‌ನ ವಾಣಿಯನ್ನು ಸೈತಾನನ ಮಾತಿಗೆ ಪರಿವರ್ತನೆ ಮಾಡುವುದು ಎಂದೇ ಅರ್ಥ.

ಹೀಗಾದಾಗ ಸಹಜವಾಗಿಯೇ ಅನುವಾದವು ಸೃಜನಶೀಲತೆಯೋ ಅಲ್ಲವೋ ಎನ್ನುವ ಪ್ರಶ್ನೆ ಯುಂಟಾಗುತ್ತದೆ. ಅದನ್ನು ಯಾರು ಬೇಕಾದರೂ ಸಮರ್ಥಿಸಲಿ ಅಥವಾ ನಿರಾಕರಿಸಲಿ ಅದು ಮುಖ್ಯವಲ್ಲ. ಬದಲಾಗಿ ಆ ಪ್ರಶ್ನೆಯನ್ನು ಕೇಳಲು ನಾವು ಯಾವಾಗ ಆರಂಭಿಸಿದೆವು ಎನ್ನುವುದೇ ಇಲ್ಲಿ ಮುಖ್ಯವಾದುದು. ಯಾವಾಗ ನಮಗೆ ರಿಲಿಜಿಯನ್ ಪರಿಚಯವಾಗಿ ನಮ್ಮಲ್ಲಿರುವುದೂ ರಿಲಿಜಿಯನ್ನೇ ಎನ್ನುವ ಅರಿವು ಬಂದಾಗಲೇ ಈ ಪ್ರಶ್ನೆ ಉದ್ಭವವಾಗುವುದು. ಹಾಗಾದುದರಿಂದ ಈ ಮನೋಭಾವವನ್ನೇ ನಾನು ನನ್ನ ಹಿಂದಿನ ಲೇಖನದಲ್ಲಿ ಆಕ್ಷೇಪಿಸಿರುವುದು. ಹಾಗಾದುದರಿಂದ ಕುರ್ತಕೋಟಿ, ಡಾ ಕೆ. ವಿ ನಾರಾಯಣ ಮೊದಲಾದ ವಿದ್ವಾಂಸರು ಹೇಳಿರುವುದನ್ನೇ ನಾನು ಹೇಳಿರುವುದಲ್ಲ. ಇನ್ನೂ ಸ್ಪಷ್ಟಪಡಿಸುವುದಾದರೆ ಅವರು ಈ ಪ್ರಶ್ನೆಯನ್ನು ಒಪ್ಪಿಕೊಂಡು ಅದರ ಪರ ವಿರೋಧವಾಗಿ ಚರ್ಚಿಸುತಿದ್ದಾರೆ. ಒಂದು ಪ್ರಶ್ನೆಯನ್ನು ನಾವು ಒಪ್ಪಿಕೊಂಡೆವೆಂದಮೇಲೆ ಅದರ ಪರ ಅಥವಾ ವಿರೋಧ ನೆಲೆಗಟ್ಟನ್ನು ಒಪ್ಪಿಕೊಳ್ಳಲೇಬೇಕು. ಉದಾಹರಣೆಗೆ: ಚಿನ್ನ ಮೇಲೋ ಕಬ್ಬಿಣ ಮೇಲೋ ಎನ್ನುವ ಪ್ರಶ್ನೆಯನ್ನು ಒಪ್ಪಿಕೊಂಡರೆ ಯಾವುದಾದರೊಂದರ ಪರ ವಹಿಸಬೇಕಾಗುತ್ತದೆ. ಆದರೆ ಈ ಪ್ರಶ್ನೆಗೆ ಬದಲು ಚಿನ್ನ ಮೇಲೋ ಕಬ್ಬಿಣ ಮೇಲೋ ಎನ್ನುವ ವಿವರಣೆ ವೈಜ್ಞಾನಿಕ ವಾಗಿದೆಯೇ ಎನ್ನುವ ಚರ್ಚೆ ಮಾಡಿದರೆ, ಅದರ ಪರ ವಿರೋಧದ ಮಾತೇ ಬರುವುದಿಲ್ಲ. ಹಾಗೆಯೇ ಚಿನ್ನ ಅಥವಾ ಕಬ್ಬಿಣ ಮೇಲು ಇಲ್ಲವೇ ಕೀಳು ಎಂದಾಗ ನಾವು ನಮ್ಮ ಅನಿಸಿಕೆಯನ್ನು ಚರ್ಚೆ ಮಾಡುವ ವಸ್ತುವಿನ ಮೇಲೆ ಹೇರುತ್ತಿರುತ್ತೇವೆ. ಅಂಥ ವಿವರಣೆಗಳು ವೈಜ್ಞಾನಿಕವಾಗಿದೆಯೇ ಎಂದಾಗ ಆ ವಸ್ತುವಿನ ಗುಣ ಧರ್ಮವನ್ನು ಅಧ್ಯಯನ ಮಾಡುತ್ತಿರುತ್ತೇವೆ. ಇದನ್ನೇ ಇಂದು ಸಮಸ್ಯೀಕರಣ ಎನ್ನುವುದು. ಅಂದರೆ ಅಧ್ಯಯನದ ವಸ್ತುವಿನ ಗುಣಧರ್ಮದ ಬಗೆಗೆ ಮಾತಾಡುತ್ತಾ ಅದು ವೈಜ್ಞಾನಿಕವಾಗಿದೆಯೋ ಇಲ್ಲವೋ ಎಂದು ಕೇಳುವುದು ಬೇರೆ. ಅದರ ಬದಲು ಅಧ್ಯಯನದ ವಸ್ತುವಿಗೆ ಸಂಬಂಧಿಸಿದ ನಮ್ಮ ವಿವರಣೆ ವೈಜ್ಞಾನಿಕವಾಗಿದೆಯೋ ಎಂದು ಕೇಳುವುದು ಬೇರೆ. ಇದನ್ನು ಮುಂದುವರೆಸುವುದಾದರೆ ಪ್ರಾಚೀನ ಕನ್ನಡ ಸಾಹಿತ್ಯವು ಅನುವಾದವೇ ಎನ್ನುವ ವಿವರಣೆಗೆ ಸಂಬಂಧಿಸಿದ ಹಾಗೆ ಪ್ರಾಚೀನ ಕನ್ನಡ ಸಾಹಿತ್ಯ ಅನುವಾದ ಅಲ್ಲ ಅಥವಾ ಹೌದು ಎಂದು ವಿವರಿಸುವುದು ಬೇರೆ, ಪ್ರಾಚೀನ ಕನ್ನಡ ಸಾಹಿತ್ಯ ಅನುವಾದವೇ ಅಲ್ಲವೇ ಎನ್ನುವ ಚರ್ಚೆಯು ವೈಜ್ಞಾನಿಕವಾದುದೇ ಎನ್ನುವ ಚರ್ಚೆ ಬೇರೆ. ನಾನು ಎರಡನೆಯ ಅಂದರೆ ಪ್ರಾಚೀನ ಕನ್ನಡ ಸಾಹಿತ್ಯ ಅನುವಾದವೇ ಅಲ್ಲವೇ ಎನ್ನುವ ವಿವರಣೆ ವೈಜ್ಞಾನಿಕವಾದುದೇ ಎಂದು ಕೇಳುತ್ತಿರುವುದು. ಹಾಗಾದುದರಿಂದ ನಾನು ಅನುವಾದದ ಪರ – ವಿರೋಧದ ನೆಲೆಯಿಂದ ಚರ್ಚೆ ಮಾಡುತ್ತಿಲ್ಲ. ಡಾ. ಎಂ. ಉಷಾ ಅವರಿಗೆ ಆವೇಶದಲ್ಲಿ ಈ ಸೂಕ್ಷ್ಮತೆಯೇ ಅರ್ಥವಾಗದೆ ಏನೇನೋ ಬಡಬಡಿಸಿದ್ದಾರೆ.

## ಭಾಗ-3

ಈಗಾಗಲೇ ಹೇಳಿದ ಹಾಗೆ ನಮ್ಮಲ್ಲಿ ಎರಡು ಭಾಷೆಗಳ ನಡುವೆ ಭಿನ್ನತೆಯೇ ಇಲ್ಲ. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಯಾವಾಗ ಬೇಕಾದರು ಸಂಚಲನ ಮಾಡಬಹುದು. ಇದಕ್ಕೆ ತುಳು ಮತ್ತು ಕನ್ನಡ ಭಾಷೆಗಳ ನಿದರ್ಶನವೊಂದನ್ನು ಈಗ ನೀಡುತ್ತೇನೆ. ಅನುವಾದಕ್ಕೆ ಸಂಬಂಧಪಟ್ಟಹಾಗೆ ಅಧಿಕೃತವಾಗಿ ಮಾತನಾಡುವ ಕನ್ನಡದ ಬೃಹಸ್ಪತಿಗಳು ಈವರೆಗೆ ಗಮನಿಸದ ಉದಾಹರಣೆ ಇದು. ಇಂದಿಗೆ ಸುಮಾರು ನೂರು ವರ್ಷಗಳ ಹಿಂದೆ ವಿಟ್ಲದ ಅರಸರ ಆಸ್ಥಾನ ಕವಿಯಾಗಿದ್ದ ಸಂಕಯ್ಯಭಾಗವತರು ತುಳು ಪಂಚವಟಿ ಎನ್ನುವ ಯಕ್ಷಗಾನ ಪ್ರಸಂಗವನ್ನು ಬರೆದಿದ್ದರು. ಅದರಿಂದ ಕೆಲವು ಪದ್ಯಗಳನ್ನು ಈಗ ಇಲ್ಲಿ ಉಲ್ಲೇಖಿಸುತ್ತೇನೆ.

ಶ್ರೀರಾಮನು ವನವಾಸಕ್ಕೆಂದು ಪಂಚವಟಿಯ ಕಡೆಗೆ ಬಂದಿರುವ ಸಂದರ್ಭ. ಆಗ ಆಶ್ರಮದ ಬಳಿಯಲ್ಲಿ ಮಾಯಾಜಿಂಕೆ ಸುಳಿದಾಡುತ್ತದೆ. ಅದನ್ನು ಕಂಡ ಸೀತೆ ನನಗೆ ತಂದುಕೊಡಬೇಕೆಂದು ಹಟ ಹಿಡಿಯುತ್ತಾಳೆ. ರಾಮ ಅವಳಿಗೆ ಸಮಾಧಾನ ಹೇಳುತ್ತಾನೆ. ಈ ಸಂದರ್ಭವು ತುಳು ಮತ್ತು ಕನ್ನಡ ಯಕ್ಷಗಾನಗಳಲ್ಲಿ ಈ ಕೆಳಗಿನಂತೆ ವರ್ಣನೆಯಾಗಿದೆ. :

ರಾಗೊ– ಕೇತಾರ ಗೌಳೌ ಅಷ್ಟ ತಾಳೊ

ಪೊಕ್ಕಾಡೆ ಮರ್ಳಾತ್ ನಲಿಪ್ವಾಡ ಮೃಗೊಸುದ್ದಿ। ನಿಕ್ಕಿತ್ತೆ ಬೋಡ್ಚಿಕೇಣ್ ॥ ರಕ್ಕಸೆ ಮಾಯೋಟು ಬತ್ತ್ ನಲ್ಪಿಗೊಬ್ಬು। ತಿಕ್ಕುನಾವೊತ್ತ್ ತೂಲ॥ ತಿಕ್ಕುವೊ ಎಂದ್ ತೂವಾಂದೆ ಕುಳ್ಳೋಣ್‌ತೀರ್ । ತಿಕ್ಕಾಂದೊ ಪಣ್ಪೆರೆಂಕ್ ॥ ಲಕ್ಕ್‌ತ್ ಪೋತು ತೂಲೆಗೆ ಈರೆ ಕೈಕ್ಕವು । ತಿಕ್ಕಾಂದೋ ತೂಪೆಯಾನ್ ॥ ಬೋಡಬೋಡ್ಯೆನ್ ಈ ತೂವಾಡ ಮೃಗುಡುತ್ । ಕೇಡು ಬರಾಂತುಪ್ಪಂದ್ ॥ ಕಾದುತಾ ಮೃಗೊಯೆಂದ್ ನಂಬಾಡಯೆಂಕ್ ಪೇ । ಚಾಡಿಯಾರಾವು ಬುಕ್ಕೊ ॥ ಕಾಡ್‌ತ ಮೃಗೊಡುತು ಕೇಡು ಬತೋವೆಂದ್ । ಪೋಡಿ ಕಟ್ಟಪರೆನ್ನನ್ ॥ ಕೇಡು ಬತ್ತಂಟ್ಲ ಬರಡು ತೂವೊಣೊಳಿ ಪತ್ತ್ । ತೀಡೇಗ್‌ಕೊಂಡರೊಡು ॥ ಕೆಟ್ಟಾಂತೆ ಬುದ್ದಿ ಬರಾಂದ್ ಸೆರಂಗಟ್ ಮಲ್ಲ । ಅರ್ಕಟ್ ಪಾಡೋನುತಿಪ್ಪಲ್ ॥ ಲೊಟ್ಟೆ ಪಾಡಡೆ ಬಂಗಾರ್ತ ಮೃಗೊಟು ದಾಲ । ಕಷ್ಟ ಬರಾಂದ್ ತೂಲೆ ॥ ಇಷ್ಟೊ ಈರೆಗ್ ಎನ್ನಟುತ್ತುಂಡಯಿನ್ ಪತ್ತ್ ॥ ಕಟ್ಟು ಪಾಡೊಡು ದಮ್ಮಯ್ಯ.॥

ಕನ್ನಡ ಭಾಷೆಗೆ ಇದು ಎಷ್ಟು ಸಮೀಪವಾಗಿದೆ ಎನ್ನುವುದಕ್ಕೆ ಕನ್ನಡಿಗರಿಗಾಗಿ ಮೇಲಿನ ತುಳು ಪದ್ಯವನ್ನು ಮತ್ತೊಮ್ಮೆ ಕನ್ನಡಕ್ಕೆ ಹಾಗೆಯೇ ಅನುವಾದ ಮಾಡುತ್ತೇನೆ:

ಸುಮ್ಮನೆ ಮರುಳಾಗಿ ನಲಿಬೇಡ ಮೃಗಸುದ್ದಿ। ನಿನಗೀಗ ಬೇಡ ಕೇಳು ॥ ರಕ್ಕಸ ಮಾಯದಿ ಬಂದು ನಲಿವ ಆಟ । ಸಿಗುವುದಲ್ಲವು ನೋಡು ॥ ಸಿಗುವುದಿಲ್ಲವೊ ಎಂದು ನೋಡದೆ ಕುಳಿತು ನೀವ್ । ಸಿಕ್ಕದೆಂದು ಹೇಳ್ವಿರಿ ॥ ಎದ್ದುಹೋಗಿ ನೋಡಿರಿ ನೀವ್ ನಿಮ್ಮ ಕೈಗದು । ಸಿಗದೊ ನೋಡುವೆನು ನಾನು ॥ ಬೇಡ ಬೇಡದನು ನೀನ್ ನೋಡಾದಿರ್ ಮೃಗದಿಂದ। ಕೇಡು ಬರದಿರದು ॥ ಕಾಡಿನ ಮೃಗವೆಂದು ನಂಬದಿರ್ ನನಗೆ ಪೇ । ಚಾಟವಾದೀತು ಮುಂದೆ ॥ ಕಾಡಿನ ಮೃಗದಿಂದ ಕೇಡು ಬಂದೀತೆಂದು। ಭಯವ ಮಾಡುವಿರೆನಗೆ ॥ ಕೇಡು ಬಂದರೆ ಬರಲಿ ನೋಡಬಹುದು ಹಿಡಿ । ದಿಲ್ಲಿಗೆ ತನ್ನಿರಿ ॥ ಕೆಟ್ಟು ಹೋಗದೆ ಬುದ್ದಿ ಬರದು ಸೆರಗಿಲಿ । ದೊಡ್ಡ ಗಂಟನು ಕಟ್ಟಿಕೊಂಡಿರು

॥ ಸುಳ್ಳು ಹೇಳದಿರಿ ಚಿನ್ನದ ಮೃಗದಿಂದೇನು। ಕಷ್ಟಬರದು ನೋಡಿ॥ ಇಷ್ಟನಿಮಗೆ ನನ್ನಲಿದ್ದರದನು ಹಿಡಿದು । ಕಟ್ಟಿಹಾಕಿ ದಮ್ಮಯ್ಯ ॥

ಇದಕ್ಕಿಂತ ಸುಮಾರು ಇನ್ನೂರು ವರ್ಷಗಳ ಹಿಂದೆ ಪಾರ್ತಿಸುಬ್ಬ ಬರೆದ ಯಕ್ಷಗಾನದಲ್ಲಿ ಇದಕ್ಕೆ ಸಂವಾದಿ ಎಂದು ತೋರಬಹುದಾದ ಪದ್ಯಗಳಿವೆ–

ಕೇದಾರಗೌಳ ರಾಗ ಅಷ್ಟತಾಳ

ಅರಸಿ ನೀ ಸುಮ್ಮನೆ ಭ್ರಮೆಗೊಳ್ಳಬೇಡವೆ । ಸರಸದ ಮೃಗವಲ್ಲವು ॥ ಸರಸಿಜಾಂಬಕಿ ನಿನ್ನ ಮರಳುಮಾಡಲು ಬಂದ। ದುರುಳರ ಕಪಟ ಕಾಣೆ॥ ಕಪಟದಾಕೃತಿಯೆಂದು ಕಾಂತಾ ನೀನೆನ್ನ ಚಾ । ಳಿಪುದೆಲ್ಲ ಬಲ್ಲೆ ನಾನು ॥ ಅಪರೂಪವಿದ ಕಂಡು ಬಯಸಿದರೆನಗೊಂದು । ಉಪಕಾರ ಮಾಡು ನೀನು ॥ ನಾಡ ಮಾತಲ್ಲ ರಾಕ್ಷಸರು ಮಾಯಕದಿಂದ। ಲಾಡುವ ನಾಟ್ಯ ಕಾಣೆ ॥ ಬೇಡ ಸುಮ್ಮನೆ ಕಡ್ಡಿ ಮುರಿದು ಸಾರಿದನತ್ತ। ನೋಡಬೇಡದನು ನೀನು ॥ ಕಾಡಿನ ಮೃಗದಿಂದ ಕೇಡು ಬಂತಾದರೆ । ನೋಡಿಕೊಂಬೆನು ಬಂದುದ ॥ ನೋಡದಿದ್ದರೆ ಒಂದು ಕ್ಷಣ ಜೀವ ನಿಲ್ಲದು । ಬೇಡಿಕೊಂಬೆನು ನಿನ್ನನು ॥ ಕೆಟ್ಟಮೇಲೆ ಬುದ್ಧಿ ಬರುವುದು ನೀಗಂಟು । ಕಟ್ಟಿಕೋ ಸೆರಗಿನಲಿ ॥ ದಿಟ್ಟ ಹೆಂಗಸು ನಿನ್ನ ಛಲ ಬೇಡವಿದರಿಂದ । ಕಷ್ಟ ಬಪ್ಪದು ತಪ್ಪದು ॥ ಎಷ್ಟು ಚಾಳಿಸಿದರು ನಾನೀಮಾತನು ಕೇಳಿ । ಬಿಟ್ಟವಳಲ್ಲ ನಿನ್ನ॥ ಸಿಟ್ಟು ಬಂದರು ಬರಲಿದ ತಾರದಿದ್ದರೆ। ಬಿಟ್ಟಪೆ ಪ್ರಾಣವನು ॥

ಕರಾವಳಿಯಲ್ಲಿ ಇರುವ ಯಕ್ಷಗಾನದ ವಿದ್ವಾಂಸರಾರೂ ಈವರೆಗೆ ಇದನ್ನು ಅನುವಾದವೆಂದು ಹೇಳಿಲ್ಲ. ಆದರೆ ಅನುವಾದ ಎನ್ನುವ ಸಿದ್ಧಾಂತದ ಪರಿಚಯ ಇರುವವರು ಇದನ್ನು ಅನುವಾದವೆಂದು ಸಾರಬಹುದು. ಬೇಕಾದರೆ ಡಾ.ಎಮ್. ಉಷಾರವರು ತಮ್ಮ ಸಿದ್ಧಾಂತವನ್ನು ಮಂಡಿಸುವುದಕ್ಕೆ ಧಾರಾಳವಾಗಿ ಇಲ್ಲಿಂದ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಇಲ್ಲಿ ಅನುವಾದಕ್ಕೆ ಸಂಬಂಧಿಸಿದ ಅಡಾಪ್ಟೇಷನ್ ಅಪ್ರಾಪ್ರಿಯೇಷನ್ ಪದಶಃ ಅನುವಾದ ಎಲ್ಲವೂ ಇದೆ. ಆದರೆ ಪ್ರಶ್ನೆ ಇರುವುದು ಯಕ್ಷಗಾನದ ವಿದ್ವಾಂಸರು ಅಥವಾ ಯಕ್ಷಗಾನ ಲೋಕ ಇದನ್ನು ಅನುವಾದ ಎಂದು ಈಗಲೂ ಪರಿಗಣಿಸಿಲ್ಲ ಏಕೆ ಎನ್ನುವುದೇ ಆಗಿದೆ. ಬದಲಾಗಿ ಕರಾವಳಿಯ ಜನಕ್ಕೆ ರಾಮ ಸೀತೆಯರು ಹೀಗೆ ತುಳುವಿನಲ್ಲಿ ಜಗಳವಾಡುವುದೇ ಒಂದು ಸಂಭ್ರಮದ ವಿಷಯವಾಯಿತು. ಹಾಗಿರುವಾಗ ಇವರು ದಡ್ಡರೆಂದೂ ಅನುವಾದದ ಕುರಿತು ತಿಳಿದಿರುವವರು ಮಾತ್ರ ವಿದ್ವಾಂಸರೆಂದೂ ಇದಕ್ಕೆ ಅರ್ಥವೇ? ಅಥವಾ ಇದನ್ನು ಅನುವಾದವೆಂದು ಹೇಳುವುದರಿಂದ ಹೆಚ್ಚಿಗೆ ತುಳು ಭಾಷೆಯ ಬಗೆಗೆ, ಸಂಸ್ಕೃತಿಯ ಬಗೆಗೆ ಇಲ್ಲವೇ ಯಕ್ಷಗಾನದ ಬಗೆಗೆ ಏನು ಹೇಳಿದಂತಾಯಿತು? ಆದುದರಿಂದ ಇವು ಅನುವಾದ ಹೌದೋ ಅಲ್ಲವೋ ಎನ್ನುವ ಪ್ರಶ್ನೆಗಿಂತ ಆಚೆಗಿನ ತಿಳುವಳಿಕೆಗೆ ಸಂಬಂಧಿಸಿದವು. ತುಳುವರು ಕನ್ನಡವನ್ನು ಬೇರೆ ಭಾಷೆಯೆಂದೇ ಭಾವಿಸದ ಸಾಂಸ್ಕೃತಿಕ ಚಹರೆಗೆ ಸಂಬಂಧಿಸಿರುವುದಾಗಿದೆ.

## ಭಾಗ-4

ಭಾಗ ಒಂದರಲ್ಲಿ ಈಗಾಗಲೇ ಹೇಳಿರುವಂತೆ ಬಾಲಗಂಗಾಧರ ಅವರ ಹೀದನ್ ಇನ್ ಹಿಸ್ ಬ್ಲೈಂಡ್‌ನೆಸ್– ಏಷ್ಯಾ ದಿ ವೆಸ್ಟ್ ಅಂಡ್ ದಿ ಡೈನಾಮಿಕ್ ಆಫ್ ರಿಲಿಜಿಯನ್ ಪುಸ್ತಕದ ಸಂಕ್ಷಿಪ್ತ

ಆವೃತ್ತಿಯಲ್ಲಿನ (ಅಪ್ರಕಟಿತ) ಆಯ್ದ ಭಾಗವನ್ನು ಅನುವಾದ ಮಾಡಲಾಗಿದೆ. ಈ ಹಿಂದಿನ ಲೇಖನವನ್ನು ನಾನು ಬರೆದಾಗ ನಿಜವಾಗಲೂ ಆ ಪುಸ್ತಕವನ್ನು ಪ್ರಾಸಂಗಿಕವಾಗಿಯಷ್ಟೇ ಉಲ್ಲೇಖ ಮಾಡಿದ್ದೆ. ಡಾ. ಎಮ್. ಉಷಾ ಅವರು ಅಪ್ಪಣೆ ಕೊಡಿಸಿದ ಮೇಲೆ, ಹೀಗೆ ಅದರಿಂದ ನೇರವಾಗಿ ಅನುವಾದ ಮಾಡಿ ನನ್ನ ವಿಚಾರಗಳನ್ನು ಸಮರ್ಥಿಸುತ್ತಿದ್ದೇನೆ. ಡಾ. ಎಮ್. ಉಷಾ ಅವರು ನಿಮ್ಮ ಲೇಖನದ ಬಗೆಗೂ ಯಾರಾದರೂ ಬಾಲಗಂಗಾಧರ ಅವರು ಅಪ್ಪಣೆ ಕೊಡಿಸಿರುವುದರಿಂದ ಒಪ್ಪತಕ್ಕವುಗಳಾಗಿವೆ ಎಂದು ಹೇಳಬಹುದು ಎಂದು ಹೇಳಿದ್ದಾರೆ. ಇಂಥಹ ವಿದ್ವತ್ ಚರ್ಚೆಯಲ್ಲಿ ಹೀಗೆ ಹಗುರವಾಗಿ ಮಾತಾಡುವುದೇ ತಪ್ಪು. ನನ್ನ ಲೇಖನದ ಬಗೆಗೆ ಬಾಲಗಂಗಾಧರ ಅವರು ಅಪ್ಪಣೆ ಕೊಡಿಸಿರುವುದರಿಂದ...... ಹಾಗೆ ಹೇಳಿದವರು ಯಾರು ಎನ್ನುವುದನ್ನು ಖಚಿತಪಡಿಸಬೇಕು. ಊಹಿಸಿಕೊಂಡು ಏನುಬೇಕಾದರೂ ಹೇಳಬಹುದು. ಅದು ಬೇಜವಾಬ್ದಾರಿಯಾಗುತ್ತದೆ. ಸದ್ಯಕ್ಕೆ ಯಾರು ಹಾಗೆ ಹೇಳದಿರುವುದರಿಂದ ಅದು ಡಾ. ಎಮ್. ಉಷಾ ಅವರೇ ಎಂದು ಸ್ಪಷ್ಟವಾಗುವುದರಿಂದ ಆ ಕುರಿತು ನಾನು ಕೆಲವು ವಿವರಗಳನ್ನು ನೀಡಬೇಕಾಗಿದೆ.

ಡಾ. ಬಾಲಗಂಗಾಧರ ಅವರು ಪಾಶ್ಚಿಮಾತ್ಯ ಸಂಸ್ಕೃತಿಯ (ರಿಲಿಜಿಯನ್) ಕುರಿತು ಆಳವಾಗಿ ಅಧ್ಯಯನ ಮಾಡಿದವರು. ಡಾ. ರಾಜರಾಮ ಹೆಗಡೆಯಾಗಲೀ ನಾನಾಗಲೀ ಅವರ ವಿಚಾರಗಳನ್ನು ಅಂಧಶ್ರದ್ಧೆಯಿಂದ ಅನುಸರಿಸುತ್ತಿಲ್ಲ. ಅವರು ಮಂಡಿಸಿದ ಹೈಪೋಥೀಸೀಸನ್ನು ಚರ್ಚೆಗೆ ಒಡ್ಡಿದ್ದೇವೆಯಷ್ಟೆ. ಅದರಲ್ಲಿಯೂ ನಾನು ಈಗ ನಡೆಯುತ್ತಿರುವ ಅನುವಾದಕ್ಕೆ ಸಂಬಂಧಿಸಿದ ಚರ್ಚೆಗಳ ಮೂಲಕ ಅದನ್ನು ಅನುಸಂಧಾನ ಮಾಡುತ್ತಿದ್ದೇನೆ. ಬಾಲಗಂಗಾಧರ ಅವರು ಪ್ರಾಚೀನ ಕನ್ನಡ ಸಾಹಿತ್ಯವು ಅನುವಾದವಲ್ಲವೆಂದಾಗಲೀ, ಕನ್ನಡದಲ್ಲಿ ಅನುವಾದದ ಪರಿಕಲ್ಪನೆ ಇಲ್ಲವೆಂದಾಗಲೀ ಎಲ್ಲಿ ಹೇಳಿದ್ದಾರೆ ಎನ್ನುವುದನ್ನು ಡಾ ಎಮ್. ಉಷಾ ಅವರು ಮೊದಲು ಹೇಳಬೇಕು. ಆಗ ಬಾಲಗಂಗಾಧರ ಅವರ ಅಪ್ಪಣೆಯ ಮೇರೆಗೆ ನಾನು ಬರೆದಿದ್ದೇನೆ ಎನ್ನುವ ಅವರ ಆರೋಪ ಸತ್ಯವಾಗುತ್ತದೆ. ಹಾಗೆಯೇ ಮುಂದುವರಿದು ಅವರು ಬಾಲಗಂಗಾಧರ ಅವರು ಅಂಥ ಒಂದು ಪರಿಕರವಾಗಿ ಭಾಷಾಂತರವನ್ನು ಬಳಸಿ ತಮ್ಮ ವಿಚಾರವನ್ನು ಮಂಡಿಸುತ್ತಿದ್ದಾರೆ ಮತ್ತು ನಾನು ಅರ್ಥಮಾಡಿಕೊಂಡಿರುವಂತೆ.... ಬಾಲಗಂಗಾಧರ ರವರ ಮುಖ್ಯ ಪ್ರಮೇಯ ರಿಲಿಜಿಯನ್‌ಗೆ ಧರ್ಮ ಸಂವಾದಿ ಪದವಲ್ಲ. ಅದನ್ನು ಸಂವಾದಿ ಪದವಾಗಿ ಸ್ವೀಕರಿಸಿದ್ದರಿಂದ ಅಥವಾ ರಿಲಿಜಿಯನ್ ಪದವನ್ನು ಧರ್ಮವೆಂದು ಭಾಷಾಂತರಿಸಿಕೊಂಡದ್ದರಿಂದ ಭಾರತೀಯ ಸಮಾಜವನ್ನು ಗ್ರಹಿಸುವುದರಲ್ಲಿಯೇ ಮೂಲಭೂತವಾದ ತಪ್ಪಾಗಿದೆ... ಎಂದು ಹೇಳುತ್ತಾರೆ. ಇದು ಶುದ್ಧಾಂಗವಾಗಿ ತಪ್ಪು. ಬಾಲಗಂಗಾಧರ ಅವರ ಹೈಪೋಥೀಸೀಸ್ ಇದು ಅಲ್ಲವೇ ಅಲ್ಲ. ನಿಜವಾಗಿಯೂ ಬಾಲಗಂಗಾಧರ ಅವರು ಹಾಗೆ ಎಲ್ಲಿಯೂ ಹೇಳಿಲ್ಲ. ಹಾಗೆಯೇ ನಾನೂ ಕೂಡ ಹಾಗೆ ಹೇಳಿಲ್ಲ.

ಹಾಗಾದರೆ ಇದರ ಅರ್ಥವೇನು? ನಿಜ ಹೇಳಬೇಕೆಂದರೆ ಡಾ. ಎಮ್. ಉಷಾ ಅವರು ಬಾಲಗಂಗಾಧರ ಅವರ ಪುಸ್ತಕವನ್ನೇ ಓದಿಲ್ಲ. ಇನ್ನು ಬಾಲಗಂಗಾಧರ ಅವರ ಚಿಂತನೆಗಳು ಅರ್ಥವಾಗುವುದಾದರೂ ಹೇಗೆ? ಹೀಗೆ ಓದದೇ ಮೂಲ ಚಿಂತನೆಯನ್ನು ಅರ್ಥ ಮಾಡಿಕೊಳ್ಳದೆ ವಿದ್ವತ್ ಚರ್ಚೆಯಲ್ಲಿ ಆವೇಶದಿಂದ ಭಾಗವಹಿಸುವುದೇ ಅಕಾಡೆಮಿಕ್ ಇನ್‌ಡೀಸೆನ್ಸಿಯಾಗಿದೆ. ಈ ಕನಿಷ್ಠ ಪ್ರಜ್ಞೆಯೂ ಇಲ್ಲದೆ ಇವರು ಇಂಥ ಅಧ್ಯಯನ ಲೇಖನವೊಂದರ ಮೇಲೆ ತಪ್ಪು-ತಪ್ಪಾಗಿ ಬರೆದಿರುವುದು ನನಗಂತೂ ಸಂತೋಷದ ವಿಷಯವೇನಲ್ಲ.

ಮೇಲೆ ಅನುವಾದಿಸಿದ ವಿವರಗಳಿಂದ ಕೆಲವು ವಿವರಗಳು ಈಗ ಸ್ಪಷ್ಟವಾಗುತ್ತವೆ. ಈಗ ಭಾಷಾಂತರಕ್ಕೆ ಸಂಬಂಧಿಸಿದ ಮುಖ್ಯ ಪರಿಕಲ್ಪನೆಗಳಾದ ಅಡಪ್ಟೇಶನ್ ಮತ್ತು ಅಪ್ರಾಪ್ರಿಯೇಶನ್

ಎಂಬವು ನೇರವಾಗಿ ಭಾಷಾಂತರಕ್ಕೆ ಸಂಬಂಧಿಸಿದ ಪರಿಕಲ್ಪನೆಗಳು ಅಲ್ಲವೇ ಅಲ್ಲ. ಅವು ಕ್ರಿಶ್ಚೇನಿಟಿ ರಿಲಿಜಿಯನ್ನಾಗಿ ರೂಪುಗೊಳ್ಳುವ ಪ್ರಕ್ರಿಯೆಗೆ ಸಂಬಂಧಿಸಿದವು. ಹಾಗೆಯೇ ಓಲ್ಡ್ ಟೆಸ್ಟಾಮೆಂಟಾ ಮತ್ತು ನ್ಯೂ ಟೆಸ್ಟಾಮೆಂಟಾಗಳೂ ಕ್ರಿಶ್ಚೇನಿಟಿಗಿಂತ ಪೂರ್ವದವು. ಕ್ರಿಶ್ಚೇನಿಟಿಯು ರಿಲಿಜಿಯನ್ ಆಗುವ ಹಂತದಲ್ಲಿ ಅವುಗಳನ್ನು ತನ್ನೊಳಗೆ ಸೇರಿಸಿಕೊಂಡಿತು. ಇಲ್ಲಿಂದಲೇ ನಮ್ಮ ಭಾಷಾಂತರ ಸಿದ್ಧಾಂತಿಗಳು ಹಗಲೆಲ್ಲ ಗುಣುಗುಣಿಸುವ ಮಂತ್ರಗಳಾದ ಅಡಪ್ಟೇಶನ್ ಮತ್ತು ಅಪ್ರಾಪ್ರಿಯೇಷನ್‌ಗಳು ರೂಪುಗೊಂಡಿರುವುದು. ಹಾಗಾದುದರಿಂದ ನಾನು ಬೈಬಲನ್ನು ಉಲ್ಲೇಖಿಸಿರುವುದಕ್ಕೂ ಬೇರೆಯವರು ಬೈಬಲ್ಲನ್ನು ಉಲ್ಲೇಖಿಸಿರುವುದಕ್ಕೂ ವ್ಯತ್ಯಾಸವಿದೆ. ನಾನು ಆ ಮೂಲಕ ಅನುವಾದ ಎನ್ನುವ ಪರಿಕಲ್ಪನೆಯೇ ನಮಗೆ ಬಿಬಿಲಿಕಲ್ ಮಾದರಿಯಲ್ಲಿ ಅಪರಿಚಿತ ಎಂದು ಹೇಳುತ್ತಿದ್ದೇನೆ ಅಷ್ಟೆ. ಥಿಯರೀ ಆಫ್ಟರ್ ಡೆರಿಡಾ ಎನ್ನುವ ಪುಸ್ತಕವು ತೀರ ಇತ್ತೀಚಿನದು (2009) ಅದರಲ್ಲಿ ಈಸ್ ಟ್ರಾನ್ಸ್‌ಲೇಷನ್ ಎ ಮೋಡ್ (ಎ. ರಾಧಾಕೃಷ್ಣನ್) ಎನ್ನುವ ಲೇಖನವಿದೆ. ಇದು ಬೆಂಜಮಿನ್‌ನ ಅನುವಾದಕ್ಕೆ ಸಂಬಂಧಿಸಿದ ಚಿಂತನೆಯನ್ನು ಡೆರಿಡಾ ಹೇಗೆ ಪರಿಭಾವಿಸಿದ ಎನ್ನುವುದಕ್ಕೆ ಸಂಬಂಧಿಸಿರುವುದು. ಪಾಶ್ಚಿಮಾತ್ಯ ಬೌದ್ಧಿಕ ಲೋಕದಲ್ಲಿ ಡೆರಿಡಾನಿಗಿರುವ ಸ್ಥಾನಮಾನ ಎಂಥದ್ದು ಎನ್ನುವುದು ವಿದ್ವಾಂಸರಿಗೆ ತಿಳಿಯದ ವಿಷಯವೇನಲ್ಲ. 20ನೇ ಶತಮಾನದ ಕೊನೆಯ ಭಾಗದ ಈ ವಿದ್ವಾಂಸ ತನಗಿಂತ ಪೂರ್ವದ ವಿದ್ವಾಂಸರೊಂದಿಗೆ ಮುಖಾ–ಮುಖಿಯಾಗುತ್ತಾನೆ ಎಂದರೆ ಆತನ ಚಿಂತನೆಗಳು ಇನ್ನೂ ಜೀವಂತವಾಗಿವೆ ಎಂದೇ ಅರ್ಥ. ಹಾಗಾದುದರಿಂದ ಭಾಷಾಂತರದ ಅಧ್ಯಯನಗಳಲ್ಲಿ ಇವೆಲ್ಲ ಮುಗಿದ ಚರ್ಚೆಗಳು ಎಂದು ಭಾವಿಸುವುದು ಕೇವಲ ದಡ್ಡತನವಲ್ಲದೇ ಬೇರೇನೂ ಅಲ್ಲ.

ಹೀಗೆ ಡಾ.ಎಮ್. ಉಷಾ ಅವರ ಪ್ರತಿ ವಿಚಾರಗಳನ್ನು ಇಟ್ಟುಕೊಂಡು ನನ್ನ ವಾದವನ್ನು ಸಮರ್ಥಿಸುತ್ತಾ ಹೋಗಬಹುದು. ಆದರೆ ಅದರಿಂದ ಉಪಯೋಗವೇನು? ಏಕೆಂದರೆ ಅವು ನನ್ನ ಲೇಖನಕ್ಕೆ ಸವಾಲಾಗುವ ಪ್ರಶ್ನೆಗಳೇ ಅಲ್ಲ. ಹಾಗೆಯೇ ಇದು ಈ ಲೇಖನದ ಬಗೆಗಿನ ನನ್ನ ಮೊದಲ ಪ್ರತಿಕ್ರಿಯೆ ಮಾತ್ರವಲ್ಲ ಕಡೆಯದೂ ಹೌದು ಎಂದು ರಚ್ಚೆ ಹಿಡಿಯುವವರಲ್ಲಿ ಎಷ್ಟು ವಾದಿಸಿದರೆ ಏನು ತಾನೆ ಪ್ರಯೋಜನವಾದೀತು? ಅದರ ಬದಲು ಇದು ಸಾರ್ವಜನಿಕವಾದ ಚರ್ಚೆ ಎನ್ನುವುದನ್ನು ನಾನು ಲಕ್ಷ್ಯದಲ್ಲಿರಿಸಿಕೊಂಡಿದ್ದೇನೆ ಎನ್ನುವ ಪ್ರಜ್ಞೆ ನನಗಿದೆ. ಡಾ ಎಮ್. ಉಷಾ ಅವರು ಒಪ್ಪಿಕೊಳ್ಳಲಿ ಎನ್ನುವ ಕಾರಣಕ್ಕೆ ಆ ಲೇಖನವನ್ನು ನಾನು ಬರೆದಿಲ್ಲ. ಸುಮಾರು ಒಂಭತ್ತು ಶತಮಾನಗಳ ವರೆಗಿನ ಸಾಹಿತ್ಯವನ್ನು ಯಾರೋ ಕೆಲವರು ಯಾವುದೋ ಕಾರಣಕ್ಕೆ ಅನುವಾದ ಎಂದು ಹೇಳಿದರೆ ಅದನ್ನು ಪ್ರಶ್ನೆ ಮಾಡದೇ ಒಪ್ಪಿಕೊಳ್ಳುವುದಾದರೂ ಹೇಗೆ? ಒಂದು ಪ್ರಾಚೀನ ಸಂಸ್ಕೃತಿ ಹಾಗಾದರೆ ಅಲ್ಲಿಯವರೆಗೆ ಅನುವಾದವನ್ನಷ್ಟೇ ಮಾಡಿಕೊಂಡಿತ್ತು ಅಂದರೆ ಅದಕ್ಕೆ ಏನು ಅರ್ಥ? ಸೃಜನಶೀಲತೆ ಎನ್ನುವುದನ್ನು ಯಾರು ಯಾವ ಅರ್ಥದಲ್ಲಿ ನಮ್ಮ ಮೇಲೆ ಹೇರುತ್ತಿದ್ದಾರೆ? ಪ್ರಾಚೀನ ಕನ್ನಡ ಸಾಹಿತ್ಯವು ಅನುವಾದವೇ ಎನ್ನುವ ಪ್ರಶ್ನೆಯನ್ನು ನಾವು ಯಾವಾಗ ಕೇಳಲು ಆರಂಭಿಸಿದ್ದೇವೆ? ಅದರ ಇತಿಹಾಸವೇನು? ಹಾಗೂ ನಾವು ಯಾರಿಗೆ ಉತ್ತರಿಸುತ್ತಿದ್ದೇವೆ? ಈ ಕುರಿತು ಇನ್ನಾದರೂ ಗಂಭೀರವಾದ ಅಧ್ಯಯನವಾಗಬೇಕಾಗಿದೆ. ಇಲ್ಲದೇ ಹೋದರೆ ಹೀಗೆ ಅನುವಾದವನ್ನೋ, ಸಾಹಿತ್ಯವನ್ನೋ ಗುತ್ತಿಗೆ ತೆಗೆದುಕೊಂಡವರ ಹಾಗೆ ಮಾತಾಡುವವರ ಬಳಿಯಲ್ಲಿ ಉಳಿದವರು ಜೀಯಾ , ಹಸಾದ ಎನ್ನಬೇಕಾಗುತ್ತದೆ. ಹಾಗಾದುದರಿಂದ ಸಾರ್ವಜನಿಕರು ಈ ಚರ್ಚೆಯಲ್ಲಿ ಹೆಚ್ಚು ಹೆಚ್ಚು ಪಾಲ್ಗೊಳ್ಳಬೇಕು ಎಂದು ಭಿನ್ನವಿಸುತ್ತೇನೆ. ಕೊನೆಯದಾಗಿ ಇನ್ನೂ ಒಂದು ಮಾತು

ಡಾ.ಎಮ್. ಉಷಾ ಅವರು ನನ್ನಲ್ಲಿ ಈ ಲೇಖನಕ್ಕೆ ಪ್ರತಿಕ್ರಿಯಿಸುತ್ತಾ ಈಗ ಅವರು ಕನ್ನಡ

ಶಾಸನಗಳ ಮೂಲಕ ಪ್ರಾಚೀನ ಕನ್ನಡ ಸಾಹಿತ್ಯ ಅನುವಾದ ಎನ್ನುವುದನ್ನು ಸಿದ್ಧಪಡಿಸುವ ಯೋಜನೆಯೊಂದನ್ನು ಹಮ್ಮಿಕೊಂಡಿರುವುದಾಗಿ ಹೇಳಿದ್ದರು. ಕ್ರಿ.ಶ. 1991 ರಲ್ಲಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಯಾಗುತ್ತದೆಂದೂ ಅಲ್ಲಿನ ಭಾಷಾಂತರ ವಿಭಾಗದಲ್ಲಿ ಡಾ.ಎಮ್. ಉಷಾ ಎಂಬುವವರು 2012-13 ರ ಸಾಲಿನಲ್ಲಿ ವೈಯಕ್ತಿಕ ಯೋಜನೆಯನ್ನು ತೆಗೆದುಕೊಳ್ಳುತ್ತಾರೆಂದೂ ತಿಳಿದು ಯಾವ ಮಹಾರಾಜ ಪ್ರಾಚೀನ ಕನ್ನಡ ಅನುವಾದ ಎಂದು ಮೊದಲೇ ಶಾಸನ ಮಾಡಿದ್ದಾನೆ ಎಂದು ತಿಳಿಯುವ ಕುತೂಹಲ ನನಗೂ ಇದೆ. ಡಾ.ಎಮ್.ಉಷಾ ಅವರಷ್ಟಲ್ಲದಿದ್ದರೂ ಅಲ್ಪ ಸ್ವಲ್ಪ ಶಾಸನ ಓದುವುದಕ್ಕೆ ನನಗೂ ಬರುತ್ತದೆ. ಪ್ರಳಯ ಆಗುವುದು ಇನ್ನೂ ನಾಲ್ಕು ವರ್ಷ ಮುಂದೂಡಿರುವುದರಿಂದ ನಾನೂ ಬದುಕಿರಬಹುದು! ಆಗ ನೋಡೋಣ ಸದ್ಯ ಆ ಮಾತನ್ನು ಅವರು ಮುಂದುವರೆಸಿ ಕನ್ನಡದಲ್ಲಿ ಭಾಷಾಂತರದ ಕಲ್ಪನೆ ಇದೆ ಎಂದು ಉದಾಹರಿಸಿ ಕೇಳಿರುವ ಪ್ರಶ್ನೆಗೆ ಉತ್ತರಿಸುತ್ತೇನೆ.

ಸ್ವದತ್ತಂ ತನ್ನಿತ್ತುದಕ್ಕೆ ಪರದತ್ತಂ ವಾ ಪೆ
ರರಿತ್ತುದಕ್ಕೆ ಓ ಹರೇತು ಅರಿವೋ ವಸುನ್ಧರಿ..........

ಇದನ್ನು ಪದಶಃ ಭಾಷಾಂತರದ ಮಾದರಿಯೆಂದು ಉಷಾ ಅವರು ಹೇಳುತ್ತಾರೆ. ಈಗಾಗಲೇ ನಾನು ಹೇಳಿರುವಂತೆ ಪ್ರಾಚೀನರು ಸಂಸ್ಕೃತವನ್ನು ಬೇರೆ ಭಾಷೆಯೆಂದು ಭಾವಿಸಿಯೇ ಇಲ್ಲ. ಆದರೆ ಸಂಸ್ಕೃತವಲ್ಲದ ಇತರ ಭಾಷೆಗಳನ್ನು (ಉದಾ: ಉರ್ದು ಅಥವಾ ಹಿಂದೂಸ್ಥಾನಿ) ಬೇರೆ ಭಾಷೆಗಳೆಂದು ಪರಿಗಣಿಸಿರುವುದಿದೆ.

ಕನ್ನಡ ಮತ್ತು ಸಂಸ್ಕೃತ ಭಾಷೆಗಳು ಹೇಗೆ ಪರಸ್ಪರ ಅವಿನಾಭಾವ ಸಂಬಂಧವನ್ನು ಹೊಂದಿದೆ ಎನ್ನುವುದಕ್ಕೆ ಸಂಬಂಧಿಸಿದಂತೆ ಪ್ರಾಚೀನ ಕಾವ್ಯಗಳಲ್ಲಿ ಬೇಕಾದಷ್ಟು ನಿದರ್ಶನಗಳು ಇವೆ. ಆ ಚರ್ಚೆಗೆ ನಾನು ಹೋಗುವುದಿಲ್ಲ. ಆದರೆ ಘಟ್ಟದ ಮೇಲಿನ ಜನಗಳು ತಿಳಿಯದಿರುವ ಅಥವಾ ಚರ್ಚೆ ಮಾಡದಿರುವ ಮತ್ತೊಂದು ವಿಷಯವನ್ನು ಈಗ ಗಮನಕ್ಕೆ ತರುತ್ತೇನೆ. ಅದು ಕರಾವಳಿಯ ಯಕ್ಷಗಾನಕ್ಕೆ ಸಂಬಂಧಿಸಿದುದು. ಈ ವಿಷಯವನ್ನು ಇಲ್ಲಿ ಏಕೆ ವಿಶೇಷವಾಗಿ ಉಲ್ಲೇಖಿಸಬೇಕು ಎಂದರೆ ಪ್ರಾಚೀನ ಕನ್ನಡ ಸಾಹಿತ್ಯದ ಎಲ್ಲಾ ಗುಣಲಕ್ಷಣಗಳು ಈಗ ಜೀವಂತವಾಗಿರುವುದು ಯಕ್ಷಗಾನದಲ್ಲಿ ಮಾತ್ರ. ಅದು ಪ್ರಾಚೀನ ಕನ್ನಡ ಸಾಹಿತ್ಯ ಈಗಲೂ ಜೀವಂತವಾಗಿದೆ ಎನ್ನುವದಕ್ಕೆ ಅತ್ಯುತ್ತಮವಾದ ನಿದರ್ಶನವಾಗಿದೆ. ಕನ್ನಡ ಮತ್ತು ಸಂಸ್ಕೃತದ ಸಂಬಂಧಗಳು ಈಗಲೂ ಹೇಗೆ ಬೆಸುಗೆಯಾಗಿದೆ ಎನ್ನುವುದಕ್ಕೆ ಇದೊಂದು ಅತ್ಯುತ್ತಮ ನಿದರ್ಶನ.

**ರಾಗ ಕೇದರಗೌಳ ಅಷ್ಟತಾಳ**

ಕಾಲ ಕಂಧರ ಕಾಲ ಕಾಲದಿಶಾ ಪಟ
ಫಾಲನಯನ ಶಂಕರ ॥
ನೀಲಲೋಹಿತ ರುಂಡಮಾಲ ಸದಾಶಿವ
ಶೂಲಿಗಿರೀಶ ಮೃಡ ॥
ಮಣಿಮಯ ಪೀಠದಿ ಮುನಿಯನೇರಿಸಿ ಪದ್ಮ ।
ಮಣಿದು ಸಂತೋಷದಿಂದ॥
ಧನಧಾನ್ಯ ಕನಕ ಭೂವಸನ ಸುರತ್ನ ವಾ ।
ಹನಗಳನರ್ಪಿಸುತ ॥
ಬೆಸಗೊಂಡ ನೆಲೆ ದೇವ ಋಷಿ ತವ ದರುಶನ ।

ಎಸಗಳು ಭವ ಬಂಧವು ॥
ಕುಸಿದು ಪೂರ್ಣಾನಂದ ಪಸರಿಸಿತೆನಲೆಂದ ।
ಬಿಸಜ ಸಂಭವ ಪುತ್ರನು॥

ಮೇಲಿನ ಪದ್ಯವನ್ನು ಅದರ ರಚನೆಗೆ ಅನುಸಾರವಾಗಿಯೇ ಬರೆಯಲಾಗಿದೆ. ಇವು ಹೊಸಗನ್ನಡದ ಮುಂಗೋಳಿಯೆಂದು ಕರೆಯಲಾಗುವ ಮುದ್ದಣನ ಶೂರಪದ್ಮಾಸುರ ಕಾಳಗ ಎನ್ನುವ ಯಕ್ಷಗಾನ ಪ್ರಸಂಗದಿಂದ ಆಯ್ದ ಪದ್ಯಗಳು. ಇದರಲ್ಲಿ ಮೇಲಿನ ಸಾಲಿನಲ್ಲಿರುವುದು ಅಂದರೆ ಕಾಲಕಂಧರ, ಕಾಲ, ಕಾಲದಿಶಾಪಟ, ಫಾಲನಯನ, ಶಂಕರ, ನೀಲಲೋಹಿತ, ರುಂಡಮಾಲ, ಸದಾಶಿವ, ಶೂಲಿ, ಗಿರೀಶ, ಮೃಡ ಇವೆಲ್ಲವೂ ಸಂಸ್ಕೃತ ಪದಗಳು. ಹೀಗೆ ಮೊದಲ ಸಾಲು ಸಂಪೂರ್ಣವಾಗಿ ಸಂಸ್ಕೃತ ರಚನೆಯೇ ಆಗಿದೆ. ಎರಡನೆಯ ಸಾಲಿನಲ್ಲಿ ಮಣಿಮಯ, ಪೀತ ಎನ್ನುವ ಸಂಸ್ಕೃತ ಪದಗಳಿದ್ದು, ದಿ ಎನ್ನುವ ಪ್ರತ್ಯಯ ಕನ್ನಡದ್ದಾದರೆ, ಮುಂದೆ ಮುನಿ ಎನ್ನುವ ಸಂಸ್ಕೃತ ಪದದ ಅನಂತರ ಯ ಎನ್ನುವ ಕನ್ನಡ ಪ್ರತ್ಯಯ ಆ ಬಳಿಕ ಏರಿಸಿ ಎನ್ನುವ ಕನ್ನಡ ಪದ ಹೀಗೆ ಕನ್ನಡದ ಪ್ರಯೋಗಗಳು ಹೆಚ್ಚುತ್ತಾ ಹೋಗುತ್ತವೆ. ಮೂರನೆಯ ಸಾಲಿನಲ್ಲಿ ಕನ್ನಡದ ಪದಗಳು ಹೆಚ್ಚುಹೆಚ್ಚಾಗಿ ಬಳಕೆಯಾಗಿ ಸಂಸ್ಕೃತ ಪದಗಳ ಬಳಕೆ ಕಡಿಮೆಯಾಗುತ್ತದೆ. ಹಾಗೆ ನೋಡಿದರೆ ಈ ಮಾದರಿ ನಮಗೆ ಸಿಗುವುದು ಕನ್ನಡದ ಮೊದಲ ಶಾಸನವಾದ ಹಲ್ಮಿಡಿ (ಕ್ರಿ.ಶ. 450) ಶಾಸನದಲ್ಲಿಯೇ:

ಜಯತಿ ಶ್ರೀ ಪರಿಷ್ವಙ್ಗ ಶ್ಯಾರ್ಙ್ಗ ಮ್ಯಾನತಿರಚ್ಯುತಃ ದಾನವಾ
ಕ್ಷ್ಣೋಃ ಯುಗಾನ್ತಾಗ್ನಿಃ ಶಿಷ್ಟಾನಾನ್ತು ಸುದರ್ಶನಃ
ನಮಃ ಶ್ರೀಮತ್ಕದಂಬಪನ್ತ್ಯಾಗಸಂಪನ್ನಕ್ಕಲಭೋರ ನಾ ಅರಿ ಕ
ಕುಸ್ಥಭಟ್ಟೋರನಾಳೆ ನರಿದಾವಿಳೆನಾಡುಳ್ ಮೃಗೇಶನಾ
ಗೇನ್ದ್ರಾಭೀಳರ್ಭ್ಬಟಹರಪ್ಪೋರ್ ಶ್ರೀಮೃಗೇಶನಾಗಾಹ್ವಯ
ರಿರ್ವ್ವರಾ ಬಟರಿಕುಲಾಮಲವ್ಯೋಮತಾರಾಧಿನಾಥನ್ನಳಪ
ಗಣಪಶುಪತಿ ಮಾದಕ್ಷಿಣಾಪಥಬಹುಶತಹವನಾ.......

ಹಲ್ಮಿಡಿ ಶಾಸನದ ಮೊದಲ ಸಾಲುಗಳು ಪೂರ್ಣ ಪ್ರಮಾಣದಲ್ಲಿ ಸಂಸ್ಕೃತ ಭಾಷೆಯಲ್ಲಿದ್ದು ಅನಂತರದ ಸಾಲುಗಳಲ್ಲಿ ವಿರಳವಾಗಿ ಕನ್ನಡ ಪದಗಳು ಮೂಡುತ್ತಾ ಹೋಗುತ್ತವೆ. ಈ ರಚನೆಗೂ ಮೇಲೆ ಉಲ್ಲೇಖಿಸಿದ ಯಕ್ಷಗಾನದ ಪದ್ಯಕ್ಕೂ ನೇರವಾದ ಸಂಬಂಧವಿದೆ. ಆ ಸಂಬಂಧವನ್ನು ಗುರುತಿಸುವ ಸೂಕ್ಷ್ಮತೆ ಕನ್ನಡ ಸಾಹಿತ್ಯ ಸಂಸ್ಕೃತಿಯ ಆಳವಾದ ಪರಿಜ್ಞಾನ ಇದ್ದಾಗಲಷ್ಟೇ ಸಾಧ್ಯವಾಗುತ್ತದೆ. ಇಲ್ಲದೆ ಹೋದರೆ ಮುದ್ದಣನ ಶೂರಪದ್ಮಾಸುರ ಕಾಳಗ ಅನುವಾದ ಇಲ್ಲದೆ ರೂಪಾಂತರ ಎಂದು ಬಾಯಿಗೆ ಬಂದ ಹಾಗೆ ಹೇಳುವ ಒಣಪಾಂಡಿತ್ಯವಷ್ಟೇ ಆಗುತ್ತದೆ.

ಹಾಗಾದುದರಿಂದ ಸಂಸ್ಕೃತದ ಪದವೊಂದು ಸಹಜವಾಗಿಯೇ ದೇಶ ಭಾಷೆಗಳಲ್ಲಿ ಸೇರಿ ಆ ಭಾಷೆಯ ಪದ ಸಂಪತ್ತಾಗುತ್ತದೆ. ಇದೇ ಅರ್ಥದಲ್ಲಿ ಈ ಶಾಸನವನ್ನು ಓದಬೇಕು. ಕೆಲವರಿಗೆ ಒಂದು ಲೇಖನ ಬರೆದರೆ ಸಾಕಾಗುವುದಿಲ್ಲ. ಅದನ್ನು ಸ್ಪಷ್ಟಪಡಿಸಲು ಈಗ ನಾನು ಮಾಡುವ ಹಾಗೆ ಇನ್ನೊಂದು ಲೇಖನವನ್ನು ಬರೆಯಬೇಕಾಗುತ್ತದೆ. ಆಗಲೂ ಅರ್ಥವಾಗುತ್ತದೆ ಎಂದೇನಲ್ಲ! ಹಾಗೆಯೆ ಇನ್ನು ಕೆಲವರಿಗೆ ಒಂದು ಸಲ ಹೇಳಿದರೆ ತಲೆಗೆ ನಾಟುವುದೇ ಇಲ್ಲ. ನಿನಗೆಷ್ಟು ಸಲ ಹೇಳಬೇಕು ಎನ್ನುವ ಕನ್ನಡದ ವಾಗ್ರೂಢಿಯನ್ನು ಇಲ್ಲಿ ನೆನಪಿಸಿಕೊಳ್ಳೋಣ. ಶಾಸನಕಾರ

ಶಾಪಾಶಯವನ್ನು ಹೇಳುವಾಗ ಬರೆದ ಸಾಲಿದು. ಒಂದು ಸಲ ಹೇಳಿದರೆ ಬುದ್ಧಿ ಬರಲಾರದೆಂದು ಎರಡೆರಡು ಸಾಲ ಸಾರಿ-ಸಾರಿ ಹೇಳುತ್ತಿದ್ದಾನೆ ಎಂದೇ ಇದನ್ನು ಅರ್ಥ ಮಾಡಬೇಕು. ಅದು ಬಿಟ್ಟು ಅನುವಾದ ಎಂದು ತಿಳಿದರೆ ನಮಗೂ ಶಾಪ ತಟ್ಟಬಹುದು!

ಇಲ್ಲದೇ ಹೋದರೆ ನಮಗೆ ಈಗ ದೊರೆತಿರುವ ಮೊದಲ ಶಾಸನವಾದ ಹಲ್ಮಿಡಿ ಶಾಸನ (ಸುಮಾರು ಕ್ರಿ.ಶ.450) ಹೀಗೆ ಆರಂಭವಾಗುವುದಾರೂ ಏಕೆ ಎನ್ನುವ ಪ್ರಶ್ನೆಗೂ ಉತ್ತರಿಸಬೇಕಾಗುತ್ತದೆ.

-ಜಯತಿ ಶ್ರೀ ಪರಿಷ್ವಙ್ಗ ಶ್ಯಾರ್ಙ್ಗ ವ್ಯಾನತಿರಚ್ಯುತಃ

ಅಂದರೆ ಕನ್ನಡ ಶಾಸನಗಳು ಸಂಸ್ಕೃತದಿಂದ ಆರಂಭವಾಗುತ್ತವೆ. ಮಧ್ಯೆ ಮಧ್ಯೆ ಸಂಸ್ಕೃತ ಪದಗಳೂ ಬರಬಹುದು. ಅದರರ್ಥ ಪ್ರಾಚೀನ ಕನ್ನಡ ಸಾಹಿತ್ಯ ಅನುವಾದವೆಂದು ಯೋಜನೆ ಮಾಡಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಎಂದು ಹೇಳುವುದಕ್ಕಲ್ಲ ಎಂದು ತಿಳಿಯಬೇಕು.

ಈ ಲೇಖನವು ಆಗಲೇ ಹೇಳಿದಂತೆ ವಿಚಾರ ಸಂಕಿರಣವೊಂದರಲ್ಲಿ ಮಂಡಿಸಿರುವುದಾಗಿದೆ. ಇದು ಈಗಾಗಲೆ ಹಿರಿಯರಾದ ಜಿ. ವೆಂಕಟಸುಬ್ಬಯ್ಯರವರ ಅಭಿನಂದನ ಗ್ರಂಥ ಶತನಮನದಲ್ಲಿಯೂ ಪ್ರಕಟವಾಗಿದೆ. ಹಾಗೆಯೇ ಬೇರೆ ಬೇರೆಯವರು ಈಗಾಗಲೇ ಈ ಲೇಖನವನ್ನು ಓದಿರುತ್ತಾರೆ. ನನ್ನ ಅಧ್ಯಾಪಕ ಮಿತ್ರರೊಬ್ಬರು ತರಗತಿಯಲ್ಲಿ ಇದನ್ನು ಓದಿಸಿ ವಿದ್ಯಾರ್ಥಿಗಳಿಂದ ಚರ್ಚೆಯನ್ನು ಮಾಡಿಸಿದ್ದಾರೆ. ಹಾಗಿರುವಾಗ ಇದು ನನ್ನ ಮೊದಲ ಪ್ರತಿಕ್ರಿಯೆ ಹಾಗೂ ಕೊನೆಯ ಪ್ರತಿಕ್ರಿಯೆಯೂ ಆಗಿದೆ ಎನ್ನುವುದಕ್ಕೆ ಏನು ಅರ್ಥ? ಯಾವುದೇ ವಿದ್ವತ್ ಚರ್ಚೆಯನ್ನು ಹೀಗೆ ನಿಯಂತ್ರಿಸಲು ಡಾ.ಎಮ್. ಉಷಾ ಅವರಿಗೆ ಏನು ಅಧಿಕಾರವಿದೆ? ಅಷ್ಟಾಗಿಯೂ ಈ ಹಿಂದೆ ಅವರು ಪ್ರಾಚೀನ ಕನ್ನಡ ಸಾಹಿತ್ಯ ಅನುವಾದವೆಂದು ಸಾರುವ ಉದ್ಗ್ರಂಥ ಯಾವುದನ್ನು ಬರೆದಿದ್ದಾರೆ? ಈ ಕ್ಷೇತ್ರದಲ್ಲಿ ಅವರಿಗಿರುವ ಪಾಂಡಿತ್ಯವಾದರೂ ಏನು?

ನಾನು ಆರ್ ನರಸಿಂಹಾಚಾರ್ ಅವರ ಕುರಿತು ಪ್ರಾತಃಸ್ಮರಣೀಯರು ಎಂದು ತಲೆಬಾಗಿ ಗೌರವ ಕೊಟ್ಟಿದ್ದೇನೆ. ಇದು ಅಕಾಡೆಮಿಕ್ ಇಂಡೀಸೆನ್ಸಿ ಹೇಗಾಗುತ್ತದೆ? ಡಾ. ರಂ.ಶ್ರೀ. ಮುಗಳಿ ಯವರ ವಿದ್ವತ್ತನ್ನು ಆ ಲೇಖನದಲ್ಲಿ ಗೌರವಿಸಿದ್ದೇನೆ. ಆದರೆ ಕುರ್ತಕೋಟಿಯವರ ಬಗೆಗೆ ನಾನು ಹೇಳಿರುವ ಆಕ್ಷೇಪಗಳಿಗೆ ಆಧಾರವಿಲ್ಲದಿಲ್ಲ. ಆರ್ ನರಸಿಂಹಾಚಾರ್ ಅವರು ಸಂಸ್ಕೃತ ಬಿಟ್ಟರೆ ಇಡೀ ಭಾರತದ ಭಾಷೆಗಳಿಗೆ ಮಾದರಿ ಹಾಗು ಮೊತ್ತಮೊದಲನೆಯದು ಎಂಬ ಹಾಗಿರುವ ಕನ್ನಡ ಕವಿಚರಿತೆ ಸಂಪುಟಗಳನ್ನು ಸಿದ್ಧ ಮಾಡಿದವರು. ಇಂದಿಗೂ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಆಚಾರ್ಯರ ಹೆಸರು ಮತ್ತೆ-ಮತ್ತೆ ಪ್ರಸ್ತಾಪವಾಗುತ್ತದೆ. ಡಾ.ಆರ್ ರಂ.ಶ್ರೀ ಮುಗುಳಿಯವರು, ಇ.ಪಿ. ರೈಸ್ ರವರು ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಹಾಗೆ ಪಾಶ್ಚಾತ್ಯ ದೃಷ್ಠಿಕೋನದಿಂದ ತೋರಿಕೆಯ ಆಕ್ಷೇಪಗಳನ್ನು ವ್ಯಕ್ತಪಡಿಸಿದಾಗ ಅದಕ್ಕೆ ಆಳವಾದ ಸಂಶೋಧನೆಯ ಮೂಲಕ ಉತ್ತರಿಸಿದವರು. ಅವರ ಕನ್ನಡ ಸಾಹಿತ್ಯ ಚರಿತ್ರೆ ಅತ್ಯುತ್ತಮವಾದ ಸಂಶೋಧನಾ ಗ್ರಂಥವಾಗಿ ಇವತ್ತಿಗೂ ಆಕರ ಗ್ರಂಥವಾಗಿದೆ. ಈ ಗ್ರಂಥಗಳ ಸಾಲಿನಲ್ಲಿ ಕೀರ್ತಿನಾಥ ಕುರ್ತಕೋಟಿಯವರ ಕನ್ನಡ ಸಾಹಿತ್ಯ ಸಂಗಾತಿ ಎಲ್ಲಿ ನಿಲ್ಲುತ್ತದೆ? ಕನ್ನಡ ಸಾಹಿತ್ಯ ಸಂಗಾತಿಯ ಮೊದಲ ಆವೃತ್ತಿಯನ್ನು ಗಮನಿಸಿದರೆ, ಅದರಲ್ಲಿ ನಿರ್ದಿಷ್ಠವಾಗಿ ಪುಟಸಂಖ್ಯೆಗಳೇ ಇಲ್ಲ, ಇದು ಕೇವಲ ತಾಂತ್ರಿಕ ದೋಷ ಮಾತ್ರವಲ್ಲ ಕುರ್ತಕೋಟಿಯವರು ಆ ಗ್ರಂಥವನ್ನು ಬರೆದಿರುವುದೇ ಹಾಗೆ. ಅವರಿಗೆ ಲಹರಿ ಬಂದಾಗ ಯಾವ-ಯಾವುದೋ ವಿಷಯಗಳನ್ನು ತೆಗೆದುಕೊಂಡು ಬರೆದು ಆನಂತರ ಪುಸ್ತಕ ರೂಪದಲ್ಲಿ ಪ್ರಕಟಿಸಿರುವುದು. ಮುಳಿಯ ತಿಮ್ಮಪ್ಪಯ್ಯನವರು ಜೀವಮಾನವೆಲ್ಲ ಸಾಧನೆ ಮಾಡಿ ನಾಡೋಜ ಪಂಪ ದಂತಹ ಮೇರು ಕೃತಿಯನ್ನು ಪಂಪ ಕವಿಯ ಕುರಿತು ಬರೆದರೆ ಕುರ್ತಕೋಟಿಯವರು ಆದಿ ಕವಿ ಪಂಪ ಎಂಬ ನಾಲ್ಕು ಪುಟದ

ಲೇಖನ ಬರೆಯುತ್ತಾರೆ. ಮುಂದೆ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಎಂಬ ನಾಲ್ಕು-ನಾಲ್ಕು ಪುಟದ ಲೇಖನಗಳಿವೆ. ವಿ. ಸೀತಾರಾಮಯ್ಯನವರು ತಮ್ಮ ಜೀವಮಾನವೆಲ್ಲ ಕವಿರಾಜಮಾರ್ಗಕ್ಕಾಗಿ ಮೀಸಲಿಟ್ಟರು. ಕುರ್ತಕೋಟಿಯವರು ಕವಿರಾಜಮಾರ್ಗ ಎನ್ನುವ ಎರಡು ಪುಟದ ಲೇಖನ ಬರೆಯುತ್ತಾರೆ. ಹೀಗೆ ಬರೆಯುತ್ತಾ ಬರೆಯುತ್ತಾ ಇದೇ ಲಹರಿಯಲ್ಲಿ ಕನ್ನಡ ಕಾವ್ಯದ ಇತಿಹಾಸ ಪ್ರಾರಂಭವಾಗುವುದು ಅನುವಾದ ಮತ್ತು ಪುನರ್ಲೇಖನಗಳಿಂದ ಎಂದು ನೇರವಾಗಿ ಹೇಳುತ್ತಾರೆ. ಈ ಲೇಖನ ಕೂಡ ನಾಲ್ಕು ಪುಟದ ವ್ಯಾಪ್ತಿವುಳ್ಳದ್ದು.

ಆರ್ ನರಸಿಂಹಾಚಾರ್, ಮುಳಿಯ ತಿಮ್ಮಪ್ಪಯ್ಯ, ರಂ.ಶ್ರೀ ಮುಗುಳಿ, ವಿ. ಸೀತಾರಾಮಯ್ಯ ಇವರದು ಸಂಶೋಧನೆಯ ಮಾರ್ಗ. ಆದರೆ ಕುರ್ತಕೋಟಿಯವರು ಕೇವಲ ಹೇಳಿಕೆಯನ್ನು ನೀಡುತ್ತಿದ್ದಾರೆ. ಡಾ.ಎಮ್. ಉಷಾ ಅವರಿಗೆ ಸಂಶೋಧನೆ ಯಾವುದು? ಶುದ್ಧ ಹರಿಕತೆಯ ರೀತಿಯಲ್ಲಿರುವ ಹೇಳಿಕೆ ಯಾವುದು? ಎನ್ನುವ ಸೂಕ್ಷ್ಮತೆ ಕೂಡ ತಿಳಿದೇ ಇಲ್ಲ. ಇದೇ ಕಾರಣಕ್ಕೆ ಡಾ ಕೆ.ವಿ. ನಾರಾಯಣ ಮತ್ತು ಪ್ರೊ, ಓ.ಎಲ್. ನಾಗಭೂಷಣ ಸ್ವಾಮಿ ಅವರ ಬಗೆಗೂ ಈ ವಿದ್ವಾಂಸರು ಪ್ರಾಚೀನ ಕನ್ನಡ ಸಾಹಿತ್ಯದ ಬಗೆಗೆ ಗಂಭೀರವಾಗಿ ಅಧ್ಯಯನ ಮಾಡಿದವರು ಅಲ್ಲ ಎಂದು ನಾನು ಹೇಳಿರುವುದು. ಅವರು ವಿದ್ವಾಂಸರು ಎಂಬುದನ್ನು ನಾನು ಅಲ್ಲಗಳೆದಿಲ್ಲ. ಆದರೆ ಆರ್ ನರಸಿಂಹಾಚಾರ್ ಅವರ ಕನ್ನಡ ಕವಿಚರಿತೆ , ಮುಳಿಯ ತಿಮ್ಮಪ್ಪಯ್ಯ ಅವರ ನಾಡೋಜ ಪಂಪ, ವಿ, ಸೀತಾರಾಮಯ್ಯ ಅವರ ಕವಿರಾಜ ಮಾರ್ಗವಿವಕ್ಷೆ, ಡಾ ರಂ.ಶ್ರೀ. ಮುಗುಳಿಯವರ ಕನ್ನಡ ಸಾಹಿತ್ಯ ಚರಿತ್ರೆ ಮೊದಲಾದ ಕೃತಿಗಳ ಹಾಗೆ ಯಾವ ವಿದ್ವತ್ ಕೃತಿಗಳನ್ನು ಬರೆದು ಇವರು ಪ್ರಾಚೀನ ಕನ್ನಡ ಸಾಹಿತ್ಯ ಅನುವಾದವಾಗಿದೆ ಎಂದು ಆಧಾರ ಪೂರ್ವಕವಾಗಿ ಹೇಳಿದ್ದಾರೆ? ಡಾ.ಎಮ್. ಉಷಾ ಅವರು ಉತ್ತರಿಸಬೇಕು: ಸುಮ್ಮನೆ ಇದು ನನ್ನ ಮೊದಲ ಮತ್ತು ಕೊನೆಯ ಅಭಿಪ್ರಾಯ ಎಂದು ಅಹಂಕಾರ ತೋರಿಸಿದರೆ ಏನು ಬಂತು?

( ಕೃತಜ್ಞತೆಗಳು : ಈ ಲೇಖನವನ್ನು ಬರೆಯಲು ನನಗೆ ಬೇರೆ ಬೇರೆ ರೀತಿಯಲ್ಲಿ ನೆರವಾದ ಶ್ರೀ ಎಮ್ ಎಸ್ ಚೈತ್ರ, ಬೆಂಗಳೂರು , ಡಾ ಬಿಎಸ್ ಸುದೀಪ, ಮೈಸೂರು, ಕು. ಜಲದರ್ಶಿನಿ, ಪಿಹೆಚ್.ಡಿ ವಿದ್ಯಾರ್ಥಿನಿ ಇವರೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ.)

## ಗ್ರಂಥ ಋಣ

ಅಣ್ಣಿಗೇರಿ. ಎಮ್. ಎಮ್. ಮತ್ತು ಆರ್ ಶೇಷಶಾಸ್ತ್ರಿ(ಸಂ.) ಶಾಸನ ಸಂಪುಟ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. 1982.

ಅಬ್ದುಲ್ ಗಫ್ಫಾರ್. ಎಸ್. (ಅನು.) ಪವಿತ್ರ ಕುರ್‌ಆನ್. ಶಾಂತಿಪ್ರಕಾಶನ. ಮಂಗಳೂರು. 2001

ದಿವ್ಯ (ಸಂಪಾದನೆ ಮತ್ತು ಸಂಕ್ಷಿಪ್ತ ಆವೃತ್ತಿ) ಹೀದನ್ ಇನ್ ಹಿಸ್ ಬ್ಲೈಂಡ್‌ನೆಸ್: ಏಷ್ಯಾ ಅಂಡ್ ದಿ ವೆಸ್ಟ್ ರಿಲಿಜಿಯಸ್ ಡೈನಾಮಿಕ್ಸ್. (ಮೂಲ ಡಾ. ಎಸ್. ಎನ್. ಬಾಲಗಂಗಾಧರ), ಅಪ್ರಕಟಿತ.

ರಾಜಾರಾಮ ಹೆಗಡೆ ಸ್ಮತಿ- ವಿಸ್ಮತಿ: ಭಾರತೀಯ ಸಂಸ್ಕೃತಿ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಶಿವಮೊಗ್ಗ. 2010

ವಾಮನ ನಂದಾವರ (ಸಂ) ತುಳು ಯಕ್ಷಗಾನ ಪ್ರಸಂಗೊಲು, ವ್ಯವಸ್ಥಾಪಕ ಸಮಿತಿ, ವಿಶ್ವ ತುಳು ಸಮ್ಮೇಳನೊ ಉಜಿರೆ 2009.

ವೆಂಕಟ ಕೃಷ್ಣಯ್ಯ (ಸಂ.) ಪಾರ್ತಿಸುಬ್ಬ ಕವಿಯ ಯಕ್ಷಗಾನ ಪ್ರಸಂಗಗಳು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು. 1985



# ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಕೃಷಿನಿಷ್ಠೆ


**ರೇಖಾ ವಿ. ಬನ್ನಾಡಿ**

ತಿಂಗಳ ಬೆಳಕು

ಜೆ.ಎಲ್.ಬಿ. ರಸ್ತೆ, ವಡೇರಹೋಬಳಿ, ಕುಂದಾಪುರ, ಉಡುಪಿ ಜಿಲ್ಲೆ


ಕಾರಂತರು ಹುಟ್ಟಿದ್ದು ಕೃಷಿ ಪ್ರಧಾನ ಕುಟುಂಬಗಳೇ ಅಧಿಕವಾಗಿರುವ ಕೋಟದಲ್ಲಿ. ಹೀಗಾಗಿ ಅವರ ಬಹುತೇಕ ಕಾದಂಬರಿಗಳು ಕರಾವಳಿಯ ಕೃಷಿ ಪ್ರಧಾನ ಸಮಾಜ ಜೀವನವನ್ನು ಅನುಸರಿಸಿಯೇ ರೂಪುಗೊಂಡಿವೆ. ಕೃಷಿ ಪ್ರಧಾನ ಸಾಮಾಜಿಕ ವ್ಯವಸ್ಥೆಯೇ ಕಾದಂಬರಿಗಳ ಜೀವಾಳವಾಗಿ ಕಾಣುವುದು ಮನುಷ್ಯ ಈ ನೆಲದೊಂದಿಗೆ ಹೊಂದಿರುವ ಭಾವನಾತ್ಮಕ ನಂಟನ್ನು ಸೂಚಿಸುತ್ತದೆ. ಅಂದಿನ ದಿನಮಾನಗಳಲ್ಲಿ ಮನುಷ್ಯನ ಬದುಕಿಗೆ ದಾರಿ ಕೃಷಿ ಮಾತ್ರವಾಗಿತ್ತು. ಸ್ವತಂತ್ರ ಜೀವನದ ಪ್ರಶ್ನೆ ಬಂದಾಗ ಎಲ್ಲದಕ್ಕಿಂತಲೂ ಸುಲಭ ಸಾಧ್ಯವಾದ ಜೀವನ ಮಾರ್ಗ ಕೃಷಿ. ರಟ್ಟೆಯೊಂದಿದ್ದರೆ ದುಡಿದು ಉಣ್ಣುವ ಸಾಧ್ಯತೆ ಇದ್ದುದು ಕೃಷಿಯಲ್ಲೆ. ಕೃಷಿ ಬದುಕಿನತ್ತ ಇರುವ ಒಲವು ಅದರಲ್ಲಿ ಖಾತರಿ ಇದೆ ಎಂಬ ನಂಬಿಕೆಯದ್ದಾಗಿದೆ. ಅದು ಈ ನೆಲದಲ್ಲಿ ಬೇರು ಬಿಟ್ಟಿರುವ ನಂಬಿಕೆಯೂ ಹೌದು, ಕಾರಂತರ ನಂಬಿಕೆಯೂ ಹೌದು. ಆದ್ದರಿಂದಲೇ ಅವರು ಕೃಷಿ ದುಡಿಮೆ ಮತ್ತು ಅಲ್ಲಿನ ಸಾಹಸಗಳಿಂದ ಸಾರ್ಥಕ್ಯವನ್ನು ಕಾಣುವ ಅಭೀಪ್ಸೆಯನ್ನು ಪ್ರಕಟಿಸುತ್ತಾರೆ. ಕಾರಂತರ ಸುಮಾರು ಹದಿನೆಂಟು ಕಾದಂಬರಿಗಳ ಕಥಾಹಂದರ ಕೃಷಿ ಪ್ರಧಾನ ವಸ್ತುವಿನ ಸುತ್ತಲೇ ಇರುವುದು ಇದನ್ನು ಇನ್ನಷ್ಟು ಪುಷ್ಟೀಕರಿಸುತ್ತದೆ.

ಕಾರಂತರಿಗೆ ಕೃಷಿಯೊಂದಿಗೆ ದುಡಿಮೆಯ ಸಂಸ್ಕೃತಿಯನ್ನು ಇಡೀ ಪರಿಸರದಲ್ಲಿ ಮೂಡಿಸುವ ಕಾಳಜಿ. ಕೃಷಿಯ ಕುರಿತು ಚಿಂತಿಸುವಾಗ ಅವರೊಳಗೊಬ್ಬ ಕೃಷಿತಜ್ಞ, ಪರಿಸರವಾದಿ, ಅರ್ಥಶಾಸ್ತ್ರಜ್ಞ ಏಕತ್ರಗೊಂಡಂತೆ ಭಾಸವಾಗುತ್ತದೆ. ನಮ್ಮ ಸುತ್ತಲೂ ಬರಿದೆ ಹಡುವಲಾಗಿ ಬಿದ್ದಿರುವ ಮೂಲೆಮುರುಕು ಭೂಮಿಗಳನ್ನು, ಪೋಲಾಗಿ ಹೋಗುತ್ತಿರುವ ಜಲಧಾರೆಗಳನ್ನು, ವನ್ಯಸಂಪತ್ತುಗಳನ್ನು ವೈಜ್ಞಾನಿಕವಾಗಿ ಬಳಸುವ ಬಗೆಗಳನ್ನು ಹತ್ತು ನೆಲೆಯಲ್ಲಿ ಶೋಧಿಸುತ್ತಾರೆ. ಬೀಜ

ಬಿತ್ತನೆಯಿಂದ ಹಿಡಿದು, ಅವುಗಳ ಪೋಷಣೆ, ರಕ್ಷಣೆ, ಇಳುವರಿಯ ವೃದ್ಧಿಯ ಕುರಿತಂತೆ ಎಲ್ಲ ಸ್ತರಗಳಲ್ಲೂ ಅಜ್ಞಾತವಲಯದಲ್ಲಿರುವ ಕೃಷಿಕರ ಕಣ್ಣು ಮನಸ್ಸುಗಳನ್ನು ಬೆಳಗುವ ಕೆಲಸವನ್ನು ಮಾಡುತ್ತಾರೆ. ಔದಾಸೀನ್ಯದಿಂದಲೋ ಅರಿವಿನ ಕೊರತೆಯಿಂದಲೊ ಹೊಸ ಸಾಧ್ಯತೆಗಳನ್ನು ತಿಳಿಯದೆ ಯಾಂತ್ರಿಕವಾಗಿ ಗೈಯ್ಯುತ್ತಿರುವ ಜನಮಾನಸವನ್ನು ಸಾಹಸಶೀಲರನ್ನಾಗಿಸುವ ತುರ್ತು ಕಾರಂತರಲ್ಲಿದೆ. ಉದ್ಯೋಗ, ವ್ಯವಹಾರ, ಆಸಕ್ತಿ, ಅಭಿರುಚಿಗಳೆಂದು ಜೀವನವನ್ನರಸಿ ದೂರ ಹೋದ ಜೀವಗಳು ಅಲ್ಲಿ ನೆಲೆ ಸಿಗದೆ, ಅತಂತ್ರವನ್ನನುಭವಿಸುವ ಸ್ಥಿತಿ ಪ್ರಾಪ್ತವಾದಾಗ ಮರಳಿ ತಮ್ಮ ಊರು, ಮನೆಯತ್ತ ಮರಳಿ ಕೃಷಿಯಲ್ಲಿ ತೊಡಗಿಕೊಳ್ಳುವ ಪಾತ್ರಗಳನ್ನು ಕಾರಂತರ ಕಾದಂಬರಿಗಳಲ್ಲಿ ಕಾಣುತ್ತೇವೆ.

**ಕೃಷಿ ಪ್ರಧಾನ ದುಡಿಮೆಯ ಜಗತ್ತು**

ಶ್ರಮ ಹಾಕಿ ಭೂಮಿಯಲ್ಲಿ ದುಡಿಯುವವ, ಕೃತ ನಡೆಸಿ ಉತ್ಪಾದನೆಗೆ ತೊಡುಗವವ, ಆ ಉತ್ಪಾದನೆಯ ನಿರ್ವಹಣೆಯನ್ನು ಮಾಡುವವ ರೈತ. ಕೃಷಿ ಕಾಯಕದಲ್ಲಿ ತೊಡಗಿಕೊಂಡವರೆಲ್ಲ ಏಕರೂಪಿ ದುಡಿಮೆಗಾರರಲ್ಲ. ಬೇಸಾಯಕ್ಕೆ ಅಳವಡಿಸಿಕೊಂಡ ಭೂಮಿಯ ವಿಸ್ತೀರ್ಣ, ಅದರಲ್ಲಿ ಬರುವ ಇಳುವರಿ, ಅವರ ಜೀವನ ಕ್ರಮದೊಂದಿಗೆ ರೈತಾಪಿ ವರ್ಗದಲ್ಲಿ ವಿವಿಧ ಸ್ತರಗಳಿರುತ್ತವೆ. ಅವರಲ್ಲಿ ಅಧಿಕ ಭೂಮಿಯನ್ನು ಹೊಂದಿ ಗೇಣಿದಾರರನ್ನು ಇಟ್ಟುಕೊಂಡಿರುವ ಭೂಮಾಲಿಕ ವರ್ಗ, ಜೀವನ ನಿರ್ವಹಣೆಯ ಮಟ್ಟಿಗೆ ಅಲ್ಪಸ್ವಲ್ಪ ಜಮೀನನ್ನು ಮಾತ್ರ ಹೊಂದಿರುವ ಸಣ್ಣ ಸಣ್ಣ ಹಿಡುವಳಿದಾರರು, ಪರರ ಭೂಮಿಯನ್ನು ಗೇಣಿಗೆ ಪಡೆದು ಉಳುಮೆ ಮಾಡಿ ಬದುಕು ಸಾಗಿಸುವ ಗೇಣಿದಾರರು, ಕೂಲಿಗಳಾಗಿ ದುಡಿದು ದಿನದ ಶ್ರಮದ ಮೇಲೆ ಜೀವನ ಸಾಗಿಸುವವರು ಹೀಗೆ ಭಿನ್ನ ಸ್ತರದಲ್ಲಿ ಕೃಷಿ ಜಗತ್ತು ಇರುವುದನ್ನು ಕಾಣಬಹುದು. ಊಳಿಗಮಾನ್ಯ ಪದ್ಧತಿಯಲ್ಲಿ ಒಬ್ಬನ ಶ್ರೀಮಂತಿಕೆ ಆತ ಎಷ್ಟು ಭೂಮಿ ಹೊಂದಿದ್ದ ಎನ್ನುವುದರ ಮೇಲೆ ನಿರ್ಧರಿಸಲಾಗುತ್ತಿತ್ತು. ಅಂದು ನೆಲದ ಒಡೆತನವೊಂದೇ ಸಂಪತ್ತಿನ ಮೂಲವಾಗಿತ್ತು. ಆದ್ದರಿಂದ ಭೂಮಿಗಾಗಿ ಕಾಳಗಗಳು ನಡೆಯುತ್ತಿತ್ತು. ಸಮಾಜದ ಒಂದು ತುದಿಯಲ್ಲಿ ಜಮೀನ್ದಾರರಿದ್ದರೆ ಇನ್ನೊಂದು ತುದಿಯಲ್ಲಿ ಜೀತಗಾರರು ಇರುತ್ತಿದ್ದರು. ಜೀತಗಾರರು ಸಮಾಜದ ಅಂಚಿನಲ್ಲಿದ್ದರೆ, ಸಣ್ಣ ಪುಟ್ಟ ಹಿಡುವಳಿದಾರರು ಸ್ವಲ್ಪ ಮೇಲು ಮಟ್ಟದ ಸ್ವತಂತ್ರ ಬದುಕನ್ನು ನಿರ್ವಹಿಸುತ್ತಿದ್ದರು. ಸಾಮಾನ್ಯ ಹಿಡುವಳಿದಾರರ ಕೃಷಿ ದುಡಿಮೆ ಅನ್ನದೊಂದಿಗೆ ತಳಕು ಹಾಕಿಕೊಂಡರೆ ಹೆಚ್ಚೆಚ್ಚು ಭೂಒಡೆತನವನ್ನು ಹೊಂದಿದ ಜಮೀನ್ದಾರರ ಕೃಷಿ ದುಡಿಮೆ ಅವರ ಪ್ರತಿಷ್ಠೆಯೊಂದಿಗೆ ತಳಕು ಹಾಕಿಕೊಂಡಿರುತ್ತದೆ. ಕಾರಂತರ ಕಾದಂಬರಿಗಳಲ್ಲಿ ಮುಗಿದ ಯುದ್ಧದ ನಾಗರಾಜ, ಕುಡಿಯರ ಕೂಸುವಿನ ತಿರುಮಲ ಭಟ್ಟರು, ಗೆದ್ದ ದೊಡ್ಡಸ್ತಿಕೆಯ ಬೇರೂರು ಮನೆತನದವರು ಇವರೆಲ್ಲ ಅಧಿಕಾರ, ಅಂತಸ್ತಿನ ನೆಲೆಯಲ್ಲಿ ಕೃಷಿ ನಿರ್ವಹಿಸುವವರು.

ಕಾರಂತರ ಕಾದಂಬರಿಗಳಲ್ಲಿ ಬರುವ ಕೃಷಿಕ ಸಮುದಾಯ ಆಯಾಯ ಭೌಗೋಳಿಕ ಹಿನ್ನೆಲೆಗನುಗುಣವಾಗಿ ನಾನಾ ರೀತಿಯ ಸಮಸ್ಯೆ ಸವಾಲುಗಳನ್ನು ಇದಿರಿಸುತ್ತಾ ಬಂದಿದೆ. ಲಾಗಾಯ್ತಿನಿಂದಲೂ ಕರಾವಳಿಯಲ್ಲಿ ಮಳೆಗಾಳಿ, ನೆರೆಯ ಅಬ್ಬರದೊಂದಿಗೆ ಉರುವಲಿಗೂ ಕಷ್ಟಪಡುವ ಸ್ಥಿತಿ. ಪೂರ್ವ ಭಾಗದ ಘಟ್ಟದ ಸಾನಿಧ್ಯದಲ್ಲಿ ಕಾಡುಪ್ರಾಣಿಗಳ ಹಾವಳಿ, ಜ್ವರದ ಬಾಧೆ, ಆಳುಗಳ ಕೊರತೆ. ಇಂತಹ ಸಂಘರ್ಷಗಳೊಂದಿಗೆ ಬದುಕುವ ಜನತೆ ದುಡಿಮೆ ಕಷ್ಟವಾದರೂ ಇಷ್ಟವಾಗಿಸಿಕೊಳ್ಳಲು ಪ್ರಯತ್ನಿಸುವುದನ್ನು ಕಾರಂತರು ವಿವಿಧ ಸ್ತರಗಳಲ್ಲಿ ದಾಖಲಿಸುತ್ತಾ ಹೋಗಿದ್ದಾರೆ. ದುಡಿಮೆಯ ಕಷ್ಟದ ತೀವ್ರತೆಯನ್ನು ಪ್ರಾದೇಶಿಕ ನೆಲೆಯಲ್ಲಿ ಕಟ್ಟಿಕೊಡುತ್ತಾ ಅದರ ವಾಸ್ತವತೆಯನ್ನು ಮನದಟ್ಟಾಗಿಸಿದ್ದಾರೆ.

ಕೃಷಿ ಕಾಯಕದಲ್ಲಿ ಪಾರಂಪರಿಕ ಜ್ಞಾನದೊಂದಿಗೆ ನಡೆಸುವ ಸಾಂಪ್ರದಾಯಿಕ ಕೃಷಿ ದುಡಿಮೆ ಮತ್ತು ಆಧುನಿಕ ಜ್ಞಾನದೊಂದಿಗೆ ಸಾಗುವ ವೈಜ್ಞಾನಿಕ ಕೃಷಿ ದುಡಿಮೆಗಳನ್ನು ಕಾಣಬಹುದು. ಸಾಂಪ್ರದಾಯಿಕ ಕೃಷಿಕರಲ್ಲೂ ತಮ್ಮ ಸಾಹಸ ಪರಿಶ್ರಮಗಳಿಂದ ಕಾಡುಮೇಡುಗಳನ್ನು, ಹಡುವಲಾಗಿ ಬಿದ್ದ ಭೂಮಿಗಳನ್ನು ಹಸನುಗೊಳಿಸಿ ಕೃಷಿಗೆ ಅಣಿಗೊಳಿಸುವ ಚಿತ್ರಣ ಕಾದಂಬರಿಗಳಲ್ಲಿ ವಿಶಿಷ್ಟವಾಗಿ ಮೂಡಿಬಂದಿದೆ. ಕಾರಂತರಿಗೆ ಮಾಮೂಲಿಯಾಗಿ ಬೇಸಾಯ ಮಾಡುವವರಿಗಿಂತ ಗುಡ್ಡಕಾಡುಗಳನ್ನು ಕಡಿದು ಸವರಿ ಕೃಷಿ ಮಾಡುವ ಹೋರಾಟದ ಬದುಕು ಹೆಚ್ಚು ಸತ್ತ್ವಯುತವಾಗಿ ಕಾಣಿಸುತ್ತದೆ. ಆದ್ದರಿಂದಲೇ ಕಾರಂತರ ಕಾದಂಬರಿಗಳ ಪುರುಷ ಪಾತ್ರಗಳಲ್ಲಿ ಉದ್ಯೋಗ, ಉದ್ಯಮಗಳಲ್ಲಿ ಸಾಹಸವನ್ನು ತೋರಿ ಸಾಧನೆಯನ್ನು ಮಾಡಿದವರಿಗಿಂತ ಕೃಷಿ ಕಾರ್ಯದಲ್ಲಿ ಸಾಹಸಿಗಳಾಗಿ ಮೆರೆದವರೇ ಅಧಿಕ. ಇದಕ್ಕೆ ಕಾರಣ ಕಾರಂತರಲ್ಲಿರುವ ಕೃಷಿ ನಿಷ್ಠೆ. ಇಂತಹ ಸಾಹಸಿಗರ ಬಗೆಗೆ ಕಾರಂತರಿಗೆ ಕುತೂಹಲ. ಅದು ಬೆಟ್ಟದ ಜೀವದ ಗೋಪಾಲಯ್ಯ ಚಿಗುರಿದ ಕನಸುವಿನ ಶಂಕರ, ಗೆದ್ದ ದೊಡ್ಡಸ್ತಿಕೆಯ ನಾಗೇಂದ್ರ, ಇನ್ನೊಂದೇ ದಾರಿಯ ಮಾದೇವ ಮತ್ತು ನಂಬಿದವರ ನಾಕ ನರಕದ ಮಕ್ಕಿಗದ್ದೆ ಸೋಮೇಶ್ವರಯ್ಯ ಮತ್ತು ರಾಧಾಕೃಷ್ಣ ಮುಂತಾದವರ ದುಡಿಮೆಯಲ್ಲಿ ಕಾಣಬಹುದಾಗಿದೆ.

ಬೆಟ್ಟದ ಜೀವದ ಗೋಪಾಲಯ್ಯನವರ ಶ್ರಮ ಮತ್ತು ಸಾಹಸಗಳು ಕಾದಂಬರಿಯುದ್ದಕ್ಕೂ ಅಪೂರ್ವವಾಗಿ ಪ್ರಕಟಗೊಂಡಿದೆ. ಕಾಡಿನ ಜ್ವರದ ಕೊಂಪೆಯ ಮಧ್ಯೆ ಗುಡ್ಡ ಕಡಿದು ತೋಟ ಮಾಡಿದ, ಉತ್ತು ಬಿತ್ತು ಕೃಷಿ ಮಾಡಿದ ಸಾಹಸಿಗರು ಗೋಪಾಲಯ್ಯ. ದುಡಿಮೆಯನ್ನು ಜೀವನ ದರ್ಶನವನ್ನಾಗಿ ಕಂಡ ಗೋಪಾಲಯ್ಯ ಗುಡ್ಡವನ್ನು ಕಡಿದು ಎಕರೆಗಟ್ಟಲೆ ತೋಟ ಮಾಡಿದ್ದನ್ನು ನೋಡಿದ ನಿರೂಪಕರಿಗೆ ವಿಸ್ಮಯವೆನಿಸುತ್ತದೆ. ಕಾಯಕ ಯೋಗಿ ಗೋಪಾಲಯ್ಯನದ್ದು ನಿರಂತರ ಸಾಹಸದ ಪ್ರವೃತ್ತಿ. ಬೆಟ್ಟು ಜಾಗಕ್ಕೆ ನೀರು ಹರಿಸಲು ಹೊಳೆಗೆ ಕಟ್ಟು ಹಾಕಿ, ಬೇಸಾಯ ಮಾಡಲು ಹೊರಟವರು. ನಿರ್ಕಟ್ಟೆಯಲ್ಲಿ ಗೋಪಾಲಯ್ಯ ಮಾಡಿದ ಸಾಹಸಗಳ ವಿರಾಟ್ ದರ್ಶನವನ್ನು ಕಾದಂಬರಿಯಲ್ಲಿ ಕಾಣಬಹುದು. ವಿಶೇಷ ಪರಿಶ್ರಮದಿಂದ ಗೋಪಾಲಯ್ಯ ಮಾಡಿದ ತೋಟ ಕಾಡಾನೆಗಳ ಹಾವಳಿಯಿಂದ ಪೂರ್ತಿ ನಾಶವಾಗಿ ಹೋದುದನ್ನು ಹೇಳುವಾಗ ನಾರಾಯಣನಿಗೆ ಸಂಕಟ ತಾಳಲಾಗುವುದಿಲ್ಲ. ಗೋಪಾಲಯ್ಯ ಮಾತ್ರ ಹೋದದ್ದಕ್ಕಾಗಿ ಚಿಂತಿಸಲೇಬಾರದು ಎಂದು ಮರೆತುಬಿಟ್ಟರು. ಮರೆತುಬಿಟ್ಟರು ಎನ್ನುವುದಕ್ಕಿಂತ ದುಡಿಮೆಯ ಲೋಕದಲ್ಲಾಗುವ ಕಷ್ಟ–ನಷ್ಟ, ಸೋಲು–ಸವಾಲುಗಳನ್ನು ಕ್ಷಣದಲ್ಲಿ ಮರೆಯುವ ಗಡಸುತನವನ್ನು ಅವರು ರೂಢಿಸಿಕೊಂಡಿದ್ದಾರೆ. ಬದುಕು ಮತ್ತು ದುಡಿಮೆ ಎರಡರಲ್ಲೂ ಮಾಗಿದ ಪರಿಪಕ್ವ ವ್ಯಕ್ತಿತ್ವ ಗೋಪಾಲಯ್ಯನದ್ದು. ಕಾಡುವ ಮಲೇರಿಯಾ, ಪೀಡಿಸುವ ಕಾಡುಮೃಗಗಳು ಇವುಗಳ ಮಧ್ಯೆ ಹುಲಿಯ ದವಡೆಯಲ್ಲಿ ಬಿಡಾರ ಮಾಡಿರುವ ಸಾಹಸಿ ಗೋಪಾಲಯ್ಯ ನಿರೂಪಕನಿಗಿಂತಲೂ ಇಮ್ಮಡಿ ಪ್ರಾಯದ ವ್ಯಕ್ತಿ; ಇನ್ನೂ ಅರಣ್ಯದೊಡನೆ ಕಾದಾಡುತ್ತಿರುವ ಯೋಧ. ಕತ್ತಿಯನ್ನು ಸೊಂಟದಲ್ಲಿ ಸಿಕ್ಕಿಸಿಕೊಂಡು ಕಾಡಿನಲ್ಲಿ ದಾರಿ ಮಾಡಿದ ಮಾರ್ಗದರ್ಶಕ; ಕಾಡನ್ನು ತೋಟ ಮಾಡಿದ ಒಕ್ಕಲು ವೀರ. ಈ ಕಗ್ಗಾಡಿನಲ್ಲಿ ತನ್ನ ಸ್ವಾಮ್ಯವನ್ನು ಸ್ಥಾಪಿಸಿ ತನ್ನ ರಾಜ್ಯಭಾರ ನಡೆಸುವ ರಾಜ.[1] ದುಡಿಮೆಯನ್ನೆ ಜೀವನ ದರ್ಶನವನ್ನಾಗಿಸಿಕೊಂಡ ಗೋಪಾಲಯ್ಯನ ಸಾಧನೆ ಸಾಹಸಗಳನ್ನು ಕಣ್ಣಾರೆ ಕಂಡು ತಲೆದೂಗಿದ ಅಂದಿನ ಕೋಚ್‌ಮನ್ ದೊರೆಗಳು ತಕ್ಷಣವೇ ಹತ್ತು ವರ್ಷಗಳ ಕಾಲ ಆ ಜಾಗಕ್ಕೆ ತೀರ್ವೆಯಿಂದ ಮಾಫಿ ಮಾಡುವಂತೆ ಆದೇಶ ಹೊರಡಿಸಿ ಗೋಪಾಲಯ್ಯನವರ ಶ್ರಮಕ್ಕೆ ತಮ್ಮ ಶಹಬ್ಬಾಸ್‌ಗಿರಿ ನೀಡುತ್ತಾರೆ. ಕೃಷಿ ಭೂಮಿ ವಿಸ್ತರಣೆ ಮಾಡುವ ಸಾಹಸಿಗರಿಗೆ ಸರಕಾರ ನೆರವನ್ನು ನೀಡಬೇಕು. ಹಡುವಲು ಭೂಮಿಗಳನ್ನು ಹಸನುಗೊಳಿಸಿ ಕೃಷಿಗೆ ಒಳಗು ಪಡಿಸುವವರಿಗೆ ಅದರ ಹಕ್ಕು ನೀಡಬೇಕು ಎಂದು ತನ್ನ ಭಾಷಣಗಳಲ್ಲಿ,

ಲೇಖನಗಳಲ್ಲಿ ಆಗಾಗ ಪುನರುಚ್ಚರಿಸುತ್ತಿದ್ದ ಕಾರಂತರ ಚಿಂತನೆಗಳ ಮೂರ್ತರೂಪ ಈ ಕಾದಂಬರಿಯಲ್ಲಿ ಮೈದಾಳಿದೆ.

ನಂಬಿದವರ ನಾಕ ನರಕ ಕಾದಂಬರಿಯಲ್ಲಿ ಮಕ್ಕಿಗದ್ದೆ ಸೋಮೇಶ್ವರಯ್ಯ ತನ್ನ ಒಡಹುಟ್ಟಿದವರೊಂದಿಗೆ ಹಿಸೆ ಆಗಿ ತನ್ನ ಪಾಲಿಗೆ ದೊರೆತ ನಗರೆಯ ಭೂಮಿಗೆ ಹೋಗುತ್ತಾರೆ. ಅಲ್ಲಿ ಮಗ ರಾಮಕೃಷ್ಣನೊಂದಿಗೆ ಮರಗೊಳಲು, ನೀರ್ಗೊಳಲು ಎಂದು ದೂರುತ್ತಾ ದುಡಿಮೆಗೆ ಅಯೋಗ್ಯವೆಂದು ಒಕ್ಕಲು ಮಕ್ಕಳು ಜರಿಯುತ್ತಿದ್ದ ಭೂಮಿಯನ್ನು ಚಿನ್ನದಂತಹ ಭೂಮಿಯನ್ನಾಗಿ ಪರಿವರ್ತಿಸುತ್ತಾರೆ. ರಾಮಕೃಷ್ಣ ತನ್ನ ನೌಕರಿ ಬಿಟ್ಟು ಮೂರು ವರ್ಷಕಾಲ ದಿನವಿಡೀ ದುಡಿದು ಬೆವರು ಹರಿಸುತ್ತಾನೆ. ಅಪ್ಪ ಮಗ ಕೂಡಿ ಆ ನೆಲದಲ್ಲಿ ತೆಂಗು, ಕಂಗು, ಬಾಳೆ, ಬತ್ತಗಳನ್ನು ಸಮೃದ್ಧವಾಗಿ ಬೆಳೆಯುತ್ತಾರೆ. ಭೂಮಿಯನ್ನು ಹಸನುಮಾಡುವದರೊಂದಿಗೆ ತೋಡು, ತೊಡುಮೆ, ಬೇಲಿ ಮುಂತಾದ ಸಕಲ ವ್ಯವಸ್ಥೆಯನ್ನು ಅಣಿಗೊಳಿಸುತ್ತಾರೆ. ಮುಂಬೈಯಲ್ಲಿದ್ದ ವೆಂಕಟೇಶ ನಗರೆಗೆ ಬಂದಾಗ ತನ್ನ ಬಾವ ರಾಮಕೃಷ್ಣ ಮತ್ತು ಅವನ ತಂದೆ ದುಡಿದು ಮಾಡಿದ ಮನೆ ಬದುಕನ್ನು ನೋಡಿ ಬೆರಗಾಗುತ್ತಾನೆ. ತಂದೆ, ಮಕ್ಕಳು ಕೂಡಿ ಮಾಡಿದಂಥ ಅಗಮೆ, ಬೆಳೆಯಿಸಿದ ತೋಟ, ಗದ್ದೆ, ಕಟ್ಟಿದ ಮನೆ ಇವುಗಳನ್ನು ಕಂಡನೋ, ಆಗ ಮನಸ್ಸು ಬೆರಗುಗೊಂಡಿತು. ಅವರ ಸಾಹಸವನ್ನು ಹೊಗಳಿದಷ್ಟೂ ಸಾಲದೆನಿಸಿತು. ಅದು ಬರಿಯ ಶ್ರಮವಾಗಿರಲಿಲ್ಲ. ವಿಚಾರ, ವಿವೇಕ, ಓರಣಗಳೆಲ್ಲವೂ ಕೂಡಿದ್ದ ಶ್ರಮವೆನಿಸಿತು. ಮನೆಯಲ್ಲಿ, ಅದರ ಆಯದಲ್ಲಿ, ಅಂದದಲ್ಲಿ, ಪಾತ್ರೆ ಪರಡಿಗಳಲ್ಲಿ, ಊಟ ಉಪಚಾರದಲ್ಲಿ, ಬಡಿಸುವಲ್ಲಿ, ಮಾಡುವಲ್ಲಿ–ಒಟ್ಟಿಂದ ಅವರು ಜೀವಿಸುತ್ತಿದ್ದ ರೀತಿಯಲ್ಲಿ ನಗು, ಉತ್ಸಾಹ, ಚೆಲುವುಗಳೆಲ್ಲವೂ ಸೇರಿದ್ದುವು.[2]

ಇದೇ ಕಾದಂಬರಿಯಲ್ಲಿ ಸತ್ಯಭಾಮೆಯ ಗಂಡ ಸುಬ್ರಾಯ ಮೆಟ್ರಿಕ್ ಓದಿದವ. ಹಿರಿಯರಿಂದ ಬಂದ ಹೊಲಮನೆಗಳಲ್ಲಿ ದುಡಿಯುವುದಕ್ಕೆ ಒಗ್ಗದೆ ಮುಂಬೈ ಪಟ್ಟಣ ಸೇರಿಕೊಳ್ಳುತ್ತಾನೆ. ಮದುವೆಯಾದರೂ ಬಿಡಾರ ಹೂಡಲು ಸಂಬಳ ಸಾಲದೆಂದು ಹೆಂಡತಿಯನ್ನು ಊರಲ್ಲೆ ಬಿಡುತ್ತಾನೆ. ಖರ್ಚಿಗೆ ಸಾಲದೆಂದು ಉದ್ಯೋಗವನ್ನು ಆಗಾಗ ಬದಲಿಸುತ್ತಾ ಅಪಾಪೋಲಿಯಂತೆ ವರ್ತಿಸುವ ಸುಬ್ರಾಯನೊಂದಿಗೆ ಉದ್ಯೋಗ ತೊರೆದು ಬಂದು ಕೃಷಿಯಲ್ಲಿ ತೊಡಗಿಕೊಂಡ ರಾಮಕೃಷ್ಣನನ್ನು ಮುಖಾಮುಖಿಯಾಗಿಸುವ ಕಾರಂತರು ಕೃಷಿಯ ಮೌಲ್ಯವನ್ನು ಮನದಟ್ಟಾಗಿಸುತ್ತಾರೆ.

ಇನ್ನೊಂದೇ ದಾರಿಯ ಮಾದೇವ ಹಡುವಲು ಬಿದ್ದ ತೊಟ್ಟಿಲು ಬಯಲಿನ ಭೂಮಿಯನ್ನು ಕೃಷಿಗೆ ಬಳಸಿಕೊಂಡ ರೀತಿ ಅಚ್ಚರಿಯೆನಿಸುತ್ತದೆ. ಹೆಸರುಗದ್ದೆಯ ನಾರ್ಣಪ್ಪನವರಿಂದ ದೊರೆತ ಭೂಮಿಯಲ್ಲಿ ನಾಲ್ಕು ವರ್ಷಗಳ ಕಾಲ ಹೊನ್ನಜ್ಜಿ, ಮಾದೇವ, ಪದ್ದಿ ಮತ್ತು ಮಕ್ಕಳು ಅನವರತವೂ ದುಡಿದುದರಿಂದ ಕಾಡು ಪಾಲಾಗಿದ್ದ ಭೂಮಿ ಮರಳಿ ಕಂಗೊಳಿಸುವಂತಾಗುತ್ತದೆ. ಹದಿನೈದು ಎಕರೆಯ ಆ ಭೂಮಿಯ ಅಂಗುಲಂಗುಲದಲ್ಲೂ ಅವರ ಪರಿಶ್ರಮ ಎದ್ದು ಕಾಣುತ್ತಿತ್ತು. ಮಾದೇವನ ಪಾಲಿಗೆ ಭೂಮಿ ಅನ್ನ ಕೊಡುವ ತಾಯಿ ಮಾತ್ರವಲ್ಲ. ಬದುಕು ನೀಡುವ ದೇವತೆಯೂ ಹೌದು. ಸಾಂಪ್ರದಾಯಿಕ ವಾತಾವರಣದಲ್ಲಿ ಹುಟ್ಟಿ ಬೆಳೆದ ಮಾದೇವ ನಿತ್ಯ ದೇವರ ಪೂಜೆ ಮಾಡುತ್ತಿದ್ದರೂ ಆ ಪೂಜೆಯಲ್ಲಿ ಆತ ಕಾಣುತ್ತಿದ್ದುದು ಕೃಷಿ ಕಾಯಕದ ದೈವಿಕ ಸ್ಪರ್ಶದ ಅನುಭವ. ಗಿಡ, ಮರ, ಹಸಿರು, ಹಚ್ಚೆ, ಬೆಳೆ, ಕಳೆಗಳ ಚಿತ್ರಗಳಲ್ಲದೆ ಅವನ ಕಣ್ಣಿಗೆ ಬೇರೇನೂ ಕಾಣಿಸುತ್ತಲಿಲ್ಲ–ಎಂದು ಹೇಳಬೇಕು. ಬೇಸಾಯವಿಲ್ಲದಾಗಲೂ ಮನಸ್ಸು ನೇಗಿಲಿನ ಸಾಲನ್ನು ಹಿಂಬಾಲಿಸಿ, ಬಿತ್ತನ್ನು ಬಿತ್ತಿ, ಬೂದಿ ಚೆಲ್ಲಿ, ಸಸಿ ಮೊಳೆಯಿಸಿ ಅಗೆ ಬೆಳೆದು, ಹಸುರಾಗಿ ತಲೆಯೆತ್ತಿ ಹೊಡೆಯನ್ನು ಹೊಂದೆನೆಯನ್ನು ತೂಗಿಸುತ್ತದೆ; ಕಲ್ಪನಾ ವಿಲಾಸದಲ್ಲಿ.[3] ಅಭಿವೃದ್ಧಿ ಸಾಕಾರಗೊಳ್ಳುವುದು ಹಣಕಾಸಿನ ವ್ಯವಹಾರದಲ್ಲಿ ಅಲ್ಲ. ಅದು

ಮನುಷ್ಯನ ಮನಸ್ಸಿನಲ್ಲಿ, ಮನಸ್ಸು ಬಿತ್ತುವ ಕಾಯಕದಲ್ಲಿ. ಶ್ರದ್ಧೆಯಿಂದ ಕೆಲಸ ಮಾಡುವ ಮನಸ್ಸನ್ನು ಮನುಷ್ಯ ತಳೆದಾಗ ಅಭಿವೃದ್ಧಿ ಸರಾಗವಾಗಿ ಸಾಗುತ್ತದೆ. ಅಭಿವೃದ್ಧಿಗೂ ಮನುಷ್ಯನ ಮನಸ್ಸಿಗೂ ಇರುವ ಸೂಕ್ಷ್ಮ ನಂಟನ್ನು ಶೋಧಿಸುವತ್ತ ಕಾರಂತರ ಗಮನ ಇಲ್ಲಿ ಹರಿದಿದೆ.

1943ರಲ್ಲಿ ಬಂಗಾಲದಲ್ಲಿ ಉಂಟಾದ ಬರಗಾಲ ಭಾರತದ ಇತಿಹಾಸದಲ್ಲಿ ಮರೆಯಲಾಗದ ಸಂಗತಿ. ಅಂದು ಹಸಿವಿನಿಂದ ಜನ ಸತ್ತಿರುವುದು ನಮ್ಮಲ್ಲಿ ಆಹಾರ ಉತ್ಪಾದನೆ ಮತ್ತು ಅದರ ಹಂಚಿಕೆಯ ಕುರಿತು ಯೋಚಿಸುವಂತೆ ಮಾಡಿತು. ಅಲ್ಲದೆ ಮುಂಬರುವ ವರ್ಷಗಳಲ್ಲಿ ಆಹಾರದ ಅಭಾವ ಇನ್ನಷ್ಟು ತೀವ್ರವಾಗುವುದೆಂಬ ಅರಿವಿನೊಂದಿಗೆ ಕೃಷಿಯ ಅಭಿವೃದ್ಧಿಯನ್ನು ಸಾಧಿಸುವ ಕುರಿತು ದೇಶದಲ್ಲಿ ಚಿಂತನ ಮಂಥನ ನಡೆಯಿತು. ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ ಕೃಷಿಯ ಆಧುನೀಕರಣಕ್ಕೆ ಚಾಲನೆ ನೀಡಲಾಯಿತು. ಅಧಿಕ ಇಳುವರಿ ತೆಗೆಯುವ ನಿಟ್ಟಿನಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಕಾಣಿಸಿಕೊಂಡ ಅಭಿವೃದ್ಧಿಯ ಪರಿಕಲ್ಪನೆಗಳು ನಮ್ಮಲ್ಲೂ ಕಾಣಿಸಿಕೊಳ್ಳತೊಡಗಿತು. ಪ್ರಯೋಗಶೀಲ ಮನಸ್ಸುಳ್ಳ ಕಾರಂತರೂ ಇದಕ್ಕೆ ಹೊರತಾಗಲಿಲ್ಲ. ಯಂತ್ರೋಪಕರಣಗಳ ಬಳಕೆಯಿಂದ ಕೃಷಿ ಉತ್ಪನ್ನಗಳನ್ನು ಹೆಚ್ಚಿಸುವಲ್ಲಿ ಹೊಸ ಅನ್ವೇಷಣೆಗಳ ಕುರಿತು ಚಿಂತಿಸಿದರು. ಪಾಶ್ಚಾತ್ಯ ದೇಶಗಳ ಪ್ರಗತಿ, ಅವುಗಳ ವೈಜ್ಞಾನಿಕ, ಆಧುನಿಕ ಬೆಳವಣಿಗೆಯನ್ನು ನಮ್ಮಲ್ಲೂ ತರುವ ಸಹಜ ತುಡಿತ ಅವರದ್ದು. ಅದನ್ನು ಚಿಗುರಿದ ಕನಸು ಕಾದಂಬರಿಯಲ್ಲಿ ಕಾಣಬಹುದು.

ವಸಾಹತು ಶಿಕ್ಷಣ ಕ್ರಮದಿಂದಾಗಿ ಹೊಸ ಜ್ಞಾನ ಶಾಖೆಗಳನ್ನು ಅಭ್ಯಸಿಸಿದ ಶಂಕರನ ತಾಂತ್ರಿಕ ಆವಿಷ್ಕಾರಗಳ ಸಂಕರತನ ಕೃಷಿ ಚಟುವಟಿಕೆಗಳಿಗೆ ಕಾರಣವಾಗುವುದು ಈ ಕಾದಂಬರಿಯಲ್ಲಿ ವ್ಯಕ್ತವಾಗಿದೆ. ಶಂಕರ ಮುಡೋಡಿಯ ಮಣ್ಣು, ಹವಾಮಾನ, ಭೌಗೋಳಿಕ ರಚನೆ ಇವೆಲ್ಲವನ್ನು ವಿವಿಧ ಮಗ್ಗುಲಗಳಿಂದ ಶೋಧನೆಗೆ ಹಚ್ಚಿ ಅವನ್ನು ತನ್ನ ಪ್ರಯೋಗಕ್ಕೆ ಒಳಗುಪಡಿಸಿಕೊಂಡು ಹೊಸ ಅನ್ವೇಷಣೆಗೆ ತೊಡಗುತ್ತಾನೆ. ಮುತ್ತಯ್ಯಗೌಡನ ಪಾರಂಪರಿಕ ಅನುಭವ, ಶಂಕರನ ವೈಜ್ಞಾನಿಕ ತಿಳಿವು ಹೊಸ ಪ್ರಯೋಗವಾಗಿ ರೂಪುಗೊಳ್ಳುವುದರೊಂದಿಗೆ ನಶಿಸಿಹೋದ ಮುಡೋಡಿಯ ವೈಭವ ಮರಳಿ ಬರುತ್ತದೆ. ಪಾರಂಪರಿಕ ಕೃಷಿ ಪದ್ಧತಿಯಲ್ಲಿ ಬದಲಾವಣೆಯನ್ನು ಮಾಡಿ ವೈಜ್ಞಾನಿಕವಾಗಿ ಅದನ್ನು ಮುಂದುವರೆಸಿಕೊಂಡು ಹೋಗಬೇಕೆಂಬ ಕಾರಂತರ ಒತ್ತಾಸೆ ಇಲ್ಲಿ ಚಿಗುರೊಡೆಯುತ್ತದೆ. ಪಾರಂಪರಿಕ ಕೃಷಿ ಜ್ಞಾನದೊಂದಿಗೆ ಆಧುನಿಕ ಜ್ಞಾನ ಮಿಳಿತಗೊಂಡಲ್ಲಿ ಕೃಷಿ ಕ್ಷೇತ್ರದಲ್ಲಿ ಮಾರ್ಪಾಡು ತರುವುದು ಸಾಧ್ಯ. ವಿದ್ಯಾವಂತ ತರುಣ ಜನಾಂಗ ಕೃಷಿಯತ್ತ ಒಲವು ಹರಿಸಿದಲ್ಲಿ ಕೃಷಿ ಕ್ಷೇತ್ರ ಸುಧಾರಣೆಗೊಳ್ಳುವುದರಿಂದ ಆಹಾರ ಸಾಮಗ್ರಿಗಳ ಉತ್ಪಾದನೆಯೂ ಹೆಚ್ಚುತ್ತದೆ. ತನ್ಮೂಲಕ ವ್ಯಕ್ತಿಯೊಂದಿಗೆ ಇಡೀ ಸಮಾಜದ ಬದುಕಿನ ಸ್ತರ ಊರ್ಜಿತಗೊಳ್ಳಲು ಸಾಧ್ಯ ಎಂಬ ಕಾರಂತರ ಚಿಂತನೆ ಈ ಕಾದಂಬರಿಯುದ್ದಕ್ಕೂ ಬಿಂಬಿತವಾಗಿದೆ. ಇಂಜಿನಿಯರಿಂಗ್ ಪದವೀಧರನಾಗಿ ಉದ್ಯೋಗವನ್ನು ಸೇರಬಯಸದೆ ಕೃಷಿ ಜೀವನವನ್ನು ಎಳಸಿ ಹಳ್ಳಿಯತ್ತ ಹೊರಟ ಶಂಕರನ ನಿರ್ಧಾರವನ್ನು ತಮ್ಮ ವಿಠಲ ಅನುಮೋದಿಸುವುದು ಸ್ವತಂತ್ರವಾಗಿ ಬದುಕ ಬಯಸುವ ವ್ಯಕ್ತಿ ಸಾಹಸಕ್ಕೆ ಕಾರಂತರು ನೀಡುವ ಬೆಂಬಲದ ದ್ಯೋತಕವಾಗಿದೆ. ಸ್ವಂತಿಕೆಯನ್ನು ಬೆಳೆಯಗೊಡದೆ ಉದ್ಯೋಗಾಕಾಂಕ್ಷಿಗಳಾಗಿ ಚಡಪಡಿಸುವ ಮನುಷ್ಯ ಪ್ರವೃತ್ತಿಯ ಬಗ್ಗೆ ಕಾರಂತರು ಉದ್ದಕ್ಕೂ ಅಸಹನೆಯನ್ನು ಹೊರಹಾಕುತ್ತಾ ಬಂದವರು. ಸರಕಾರಿ ನೌಕರಿಯನ್ನೊ, ಯಾರದೊ ಚಾಕರಿಯನ್ನು ಮಾಡಿಕೊಂಡಿರುವವರಿಗಿಂತ ಸ್ವಾವಲಂಬಿಗಳಾಗಿ ಬದುಕ ಬಯಸುವವರತ್ತ ಕಾರಂತರ ಒಲವು ಹೆಚ್ಚಿನದು.

ಔದಾರ್ಯದ ಉರುಳಲ್ಲಿ ಕಾದಂಬರಿಯ ರಾಧಾಕೃಷ್ಣನದ್ದು ಸೇವಾನಿಷ್ಠ ಮನಸ್ಸು. ತಾನು ದುಡಿಯುತ್ತಾ ಇನ್ನೊಬ್ಬರನ್ನೂ ದುಡಿಮೆಗೆ ಹಚ್ಚುವ ಪ್ರವೃತ್ತಿ ಅವನದ್ದು. ಕಿರಿಪದವಿನ ಆಶ್ರಮ ಶಾಲೆಯ

ಮಕ್ಕಳಿಗೆ ಶಿಕ್ಷಣದೊಂದಿಗೆ ಸ್ವಾವಲಂಬಿ ಬದುಕಿಗೆ ಬೇಕಾದ ತರಬೇತಿಯನ್ನು ನೀಡುತ್ತಿದ್ದ. ನಾಳಿನ ಬದುಕಿಗೆ ನೆರವಾಗಬೇಕೆಂಬ ಕಾರಣದಿಂದ ಅವರುಗಳನ್ನು ಕೃಷಿ ಕಾಯಕದಲ್ಲಿ ತೊಡಗಿಸುತ್ತಿದ್ದ. ಕಿರಿಪದವಿನ ಭೂಮಿಯ ಗೇಣಿ ವಾಯಿದೆ ಮುಗಿದು ಮುಂದೇನು? ಎಂಬ ಪ್ರಶ್ನೆ ಇದಿರಾದಾಗ ಕದ್ರೆಗೆ ಒಂದು ಮೈಲು ದೂರದಲ್ಲಿ ಕೃಷಿಗೆ ಲಗತ್ತಾದ ಭೂಮಿಯೊಂದನ್ನು ಖರೀದಿಸುತ್ತಾನೆ. ಭವಿಷ್ಯದಲ್ಲಿ ಕೃಷಿ ಭೂಮಿಯ ವಿಸ್ತರಣೆ ಮತ್ತು ಹೈನುಗಾರಿಕೆಯನ್ನು ವೃದ್ಧಿಸುವ ಯೋಜನೆ ರಾಧಾಕೃಷ್ಣನದ್ದು. ಆಶ್ರಮವನ್ನು ನಡೆಸುವಾಗ ಇದಿರಾದ ಆರ್ಥಿಕ ಅಡಚಣೆ, ಅವಮಾನ, ಒದ್ದಾಟಗಳು ಸ್ವಾವಲಂಬಿ ಬದುಕಿಗೆ ಪ್ರೇರಣೆಯಾಗುತ್ತದೆ. ಬದುಕಿರುವಷ್ಟು ಕಾಲ ತಾವಾಗಲೀ ತಮ್ಮ ಆಶ್ರಮಗಳಲ್ಲಿ ಕಲಿತು ಹೋಗುವ ಮಕ್ಕಳಾಗಲೀ ಪರಾಶ್ರಯಕ್ಕೆ ಒಳಗಾಗಬಾರದೆಂಬ ನಿಷ್ಠೆಯೇ ಆತನನ್ನು ಮತ್ತೆ ಮತ್ತೆ ಕೃಷಿ ಕಾಯಕಕ್ಕೆ ನೂಕುತ್ತದೆ.

ಕಾರಂತರಲ್ಲಿ ಕೃಷಿ ಪ್ರಧಾನ ಲೋಕದಲ್ಲಿನ ಸಾಹಸಗಳ ಮುಂದೆ ಪೇಟೆ ಪಟ್ಟಣಿಗರ ವೈಭವದ ಸಿರಿವಂತಿಕೆಯ ಬದುಕು ನಿಸ್ಸಾರವಾಗಿ ಕಾಣುತ್ತದೆ. ಚಿಗುರಿದ ಕನಸುವಿನಲ್ಲಿ ಸೀತಾರಾಮು ಮುಡೋಡಿಯ ಮುತ್ತಯ್ಯಗೌಡನ ಮುಂದೆ ತನ್ನ ತಾಯ್ತಂದೆಯರ ಪರಿಚಯ, ದಿಲ್ಲಿಯ ವರ್ಣನೆಗಳನ್ನು ಮಾಡಿದಾಗ ಶತಮಾನಗಳ ಕಾಲ ವೈಭವದ ಬಾಳನ್ನು ಬಾಳಿದ ಹಳ್ಳಿಗರ ಸಾಹಸದ ಮುಂದೆ ತಮ್ಮದೇನು ಮಹಾ? ಎಂಬಂತೆ ಪ್ರತಿಕ್ರಿಯಿಸುತ್ತಾನೆ. ಮುದ್ರಾಡಿ ಶಾಲೆಯ ಮಾಸ್ತರರಾದ ಭಂಗರಿಗೆ ಶಂಕರನ ಸಾಹಸದ ಬಗ್ಗೆ ಕುತೂಹಲ. ಆತ ತನ್ನ ಕಾಯಕದಲ್ಲಿ ಜಯಶೀಲನಾದಲ್ಲಿ ತಾನೂ ಅದೇ ದಾರಿ ಹಿಡಿದೇನು ಎಂಬ ಹಂಬಲ. ಯಾವುದೋ ಊರಿನಲ್ಲಿ ಹೆಂಡತಿ ಮಕ್ಕಳಿಂದ ದೂರವಾಗಿ ತಿಂಗಳಿಗೆ ಬರೇ ಹದಿನೈದು ರೂಪಾಯಿ ಸಂಬಳ ಪಡೆಯುವ ತನ್ನ ಮಾಸ್ತರಿಕೆ ಕೆಲಸಕ್ಕಿಂತ ಊರು ಮನೆಗೆ ಮರಳಿ ಕೃಷಿ ಕಾಯಕ ನಡೆಸುವುದೇ ಲೇಸು ಎಂದು ಯೋಚಿಸಲಾರಂಭಿಸುತ್ತಾನೆ.

**ನಗರ ಜೀವನದಿಂದ ಕೃಷಿ ಕಾಯಕಕ್ಕೆ**

ಸರಕಾರಿ ನೌಕರಿಯಲ್ಲಿದ್ದು ಊರಿಂದ ಊರಿಗೆ ಅಲೆಯುವ ಸ್ವತಂತ್ರವಲ್ಲದ ತಂದೆಯ ಬದುಕಿನ ಬಗೆಗೆ ಶಂಕರನಿಗೆ ಮೊದಲಿನಿಂದಲೂ ಸಮಾಧಾನವಿರಲಿಲ್ಲ. ತನ್ನದಾದ ಊರಿನ ನೆಲವೊಂದರ ಮಗುವಾಗಿ ಬಾಳಬೇಕೆಂಬ ಕನಸು ಆತನದು. ಬೆಳಕವಾಡಿಯ ರೈತರ ಮಧ್ಯೆ ಕೇಳಿಕೊಂಡ ಕಷ್ಟವೋ ಸುಖವೋ ಇಷ್ಟಾದರೂ ಇದೆಯಲ್ಲ ಎನ್ನುವ ಸಂತೃಪ್ತ ನುಡಿಗಳು ಅವನ ಮನಸ್ಸನ್ನು ಗಟ್ಟಿಗೊಳಿಸುತ್ತದೆ. ಗೆಳೆಯ ಸೀತಾರಾಮನೊಂದಿಗೆ ಮುದ್ರಾಡಿಗೆ ಹೋದಾಗ ಅಲ್ಲಿನ ಜನಜೀವನದಲ್ಲಿರುವ ದಟ್ಟ ದಾರಿದ್ರ್ಯವನ್ನು ಕಂಡು ಸೀತಾರಾಮು, ಇಷ್ಟೆಲ್ಲ ಸೃಷ್ಟಿಯ ಅನುಕೂಲತೆಗಳು ಸುತ್ತಲಿರುವಾಗ ನಮ್ಮ ಜನ ಇದಕ್ಕಿಂತ ಸುಖವಾಗಿ ಬಾಳಲಾರರೇ? ನಟ್ಟಲ್ಲಿ ಗಿಡ ಚಿಗುರುತ್ತದೆ; ಎಲ್ಲಿ ಕಂಡರಲ್ಲಿ ತೊರೆಗಳು ಹರಿಯುತ್ತವೆ. ಬೇಕಷ್ಟು ಕಾಡಿದೆ. ಜನ ಜಾಗೃತಿಗೊಂಡರೆ ಇದನ್ನೇ ನಂದನವನವನ್ನಾಗಿ ಮಾಡಲು ಬರಲಾರದೇ? ಇದು, ಒಬ್ಬೊಬ್ಬರಿಂದಾಗಲಾರದ ಕೆಲಸ ನಿಜ. ಏನೂ ಅರಿಯದ ಜನಗಳು ಕೈಗೊಳ್ಳುವ ಕೆಲಸವಲ್ಲ. ಆದರೆ ನನ್ನ ನಿನ್ನಂತಹ ಓದಿದವರು, ಬಲ್ಲವರು, ಕನಸುಗಾರರು ಇಂಥ ಸ್ಥಳಗಳನ್ನು ಬಿಟ್ಟು ಓಡಿ ನೌಕರಿಗಾಗಿ ಹಾತೊರೆದರೆ ಇದರ ಶ್ರೇಯಸ್ಸನ್ನೆಣಿಸುವವರಾರು? ನಿನಗೂ ಸಾಕಷ್ಟು ಜಮೀನಿದೆ; ಅದನ್ನು ಬಿಟ್ಟು ಬಿಡುವುದರಲ್ಲೇನರ್ಥ?[4] ಎಂಬಲ್ಲಿ ವಿದ್ಯಾವಂತ ಜನಾಂಗ ಕೃಷಿಯತ್ತ ಮುಖ ಮಾಡಬೇಕೆಂಬ ಕಾರಂತ ಪ್ರಜ್ಞೆ ಕೆಲಸ ಮಾಡಿದೆ. ನಗರ ಜೀವನದಿಂದ ಬೇಸತ್ತು ನೆಲಮೂಲವನ್ನು ಶೋಧಿಸುತ್ತಾ ಹಳ್ಳಿಗೆ ಮರಳುವ ಆಶಯ ಚಿಗುರಿದ ಕನಸುವಿನ ಶಂಕರನದ್ದಾದರೆ, ಆಧುನಿಕ ಜಗತ್ತಿನ ಮನುಷ್ಯ ಸಂಬಂಧಗಳು ಹಣದ ಮೇಲೆ ನಿಂತು ಮೋಸ ವಂಚನೆಗಳು ಮೇಲುಗೈ ಪಡೆಯಲಾರಂಭಿಸಿ

ದಾಗ ಖಾಸಗಿ ನೆಲೆಯಲ್ಲಿ ಅನುಭವಿಸಿದ ನೋವನ್ನು ಮರೆಯಲು ಊರಿಗೆ ಮರಳಿದವರು 'ಇದ್ದರೂ ಚಿಂತೆ' ಯ ಹೆಗಡೆಯವರು ಮತ್ತು 'ಗೆದ್ದ ದೊಡ್ಡಸ್ತಿಕೆ' ಯ ನಾಗೇಂದ್ರ. ಕೃಷಿ ಕಾಯಕ ಕಷ್ಟಕರವೆಂದು ಗೊತ್ತಿದ್ದೂ ತಮ್ಮ ನೆಲದಲ್ಲಿ ತಾವು ಬೆಳೆದ ಆಹಾರವನ್ನು ಉಣ್ಣುವ ಯೋಗ ಹೆಚ್ಚಿನ ತೃಪ್ತಿ ಕೊಟ್ಟೀತು[5] ಎಂಬ ಮಮಕಾರದಿಂದ ಬಿಡುವು ಸಿಕ್ಕಾಗಲೆಲ್ಲ ತಾಯ್ತಂದೆಯರೊಂದಿಗೆ ದುಡಿಯುವುದನ್ನು ಅಭ್ಯಾಸ ಮಾಡಿಕೊಂಡವ ನಾಗೇಂದ್ರ. ಮುಂದೆ ಬೇರೂರು ಸಂಸ್ಥೆಯಿಂದ ಹೊರ ಬಂದರೂ ಉದ್ಯೋಗವನ್ನು ಸೇರಬಯಸದೆ ಜಾಂತಾರಿನಲ್ಲಿ ಭೂಮಿ ಖರೀದಿಸಿ ಕೃಷಿ ಕೆಲಸಕ್ಕೆ ಕೈಯಿಕ್ಕುತ್ತಾನೆ. ತಾನೇ ದುಡಿದು ಭೂಮಿಗೊಂದು ಆಕಾರ ಕೊಡಬೇಕೆನ್ನುವ ಸೃಷ್ಟಿಶೀಲ ಮನಸ್ಸು ಆತನದ್ದು. ಕೃಷಿ ಕಾಯಕಕ್ಕೆ ವ್ಯಯವಾಗುವ ಶ್ರಮ, ಕಾಲದ ಗಣನೆಗಳು ಆತನಿಗೆ ನಗಣ್ಯವೆನಿಸಿ ದುಡಿಯುವಾಗಿನ ಸುಖವೇ ಪ್ರಧಾನವೆನಿಸುತ್ತದೆ. ಕೃಷಿ ದುಡಿಮೆ ನೀರಸಗೊಳ್ಳದೆ ನಿರ್ಜೀವವೆನಿಸದೆ ಸಜೀವ ಪ್ರಕ್ರಿಯೆಯಾಗಿ ಮೂಡುವಲ್ಲಿ ಕಾರಂತರಿಗಿರುವ ಕೃಷಿ ಶ್ರದ್ಧೆ ಪ್ರಖರವಾಗಿ ಗೋಚರಿಸುತ್ತದೆ. ಮನಸ್ಸಿನ ಸಂತೋಷ ಸಿಗಬೇಕಾದರೆ ಕೃಷಿಯಂಥ ಒಂದು ವೃತ್ತಿಯೇ ಬೇಕು ಅನಿಸುತ್ತದೆ. ಅದೂ ಹೊಸದಾಗಿ ಜಮೀನನ್ನು ಕೊಂಡು, ಆಗಮೆ ಮಾಡಿ, ಮೊದಲು ಇದ್ದಿರದ ಬರಡು ಭೂಮಿಯೊಂದು ಚೆಂದದ ಆಕಾರಕ್ಕೆ ಬಂದಿದೆ ಎಂದು ತೋರಿಸಲು ಬಂದರೆ ಎಷ್ಟೊಂದು ಸಂತೋಷ ಬಂದೀತೋ ಏನೋ! ಅಂಥ ಕೆಲಸಕ್ಕೆ ಹತ್ತು ವರ್ಷಗಳು ಹಿಡಿಯಲಿ; ಚಿಂತೆಯಿಲ್ಲ. ಆಮೇಲೆ ಅದರ ಉತ್ಪನ್ನದಿಂದಲೇ ಇನ್ನೊಂದು ತುಣುಕು ನೆಲ ತೆಗೆದುಕೊಂಡು ಅದನ್ನೂ ರೂಢಿಸಿದ[6] ಎನ್ನುವಲ್ಲಿ ಕೃಷಿಭೂಮಿಯ ವಿಸ್ತರಣೆಯ ಸೂಚನೆ ಇದೆ.

ಇದ್ದರೂ ಚಿಂತೆಯ ಗಣಪತಿ ಹೆಗಡೆಯವರು ಮರಳಿ ಊರಿಗೆ ಬಂದವರೇ ಕಳೆದುಕೊಂಡ ಭೂಮಿಯನ್ನು ಖರೀದಿಸುತ್ತಾರೆ. ಹೆಗಡೆಯವರು ನೇರವಾಗಿ ಕೃಷಿ ಕಾಯಕದಲ್ಲಿ ತೊಡಗಿಕೊಳ್ಳದೆ ಹೋದರೂ ಕಾಯಕಷ್ಟದಲ್ಲಿ ತೊಡಗಿರುವವರಿಗೆ ನೆರವಾಗಬೇಕೆಂಬ ತೀವ್ರ ಅಭೀಪ್ಸೆವುಳ್ಳವರು. ಬಡತನವನ್ನು ಮೀರಿ ದುಡಿಯುವ ಹಂಬಲ ತೊಟ್ಟು ಶ್ರಮಿಸುತ್ತಿರುವ ಗೋಳಿಮನೆ ಶಂಕರಯ್ಯನ ಕುಟುಂಬಕ್ಕೆ ನೆರವಾಗುವ ಯೋಚನೆ ಗಣಪತಿ ಹೆಗಡೆಯವರದ್ದು. ನಿಮ್ಮ ಕೃಷಿಗೆ ಬೇಕಾದಷ್ಟು ಹಣವನ್ನು ಬೇಕಾದಷ್ಟು ಸಮಯಕ್ಕೆ ಕೊಡುತ್ತೇನೆ. ಒಂದು ಐವತ್ತು ಎಕರೆ ಜಮೀನು ಕೊಳ್ಳುವುದಕ್ಕೆ ಬೇಕಾದ ಹಣವನ್ನು ಕೊಡುತ್ತೇನೆ. ಯಾವ ಲಾಭವನ್ನೂ ಅಪೇಕ್ಷೆ ಮಾಡಿ ನಾನು ಈ ಮಾತನ್ನು ಆಡುತ್ತೇನೆಂದು ತಿಳಿಯಬೇಡಿ. ನನ್ನಲ್ಲಿರುವ ದುಡ್ಡು ಒಂದು ಸಾರ್ಥಕವಾದ ಪ್ರಯೋಜನಕ್ಕೆ ಬಿದ್ದರೆ, ಅದರಿಂದ ನಾಲ್ಕು ಕುಟುಂಬಗಳು ನಗುತ್ತ ತಮ್ಮ ಕಾಲ ಮೇಲೆ ನಿಲ್ಲುವುದಕ್ಕೆ ಕಲಿತರೆ, ನನಗೆ ತುಂಬಾ ಸಂತೋಷವಾದೀತು. ಪುಕ್ಕಟೆ ದಾನ, ಧರ್ಮ ಮಾಡುವ ಇಚ್ಛೆಯಾಗಲೀ, ಬುದ್ಧಿಯಾಗಲೀ ನನಗೆ ಮೊದಲಿನಿಂದಲೂ ಬಂದಿಲ್ಲ[7] ಎನ್ನುತ್ತಾರೆ. ಶಂಕರಯ್ಯನ ಕಾಫಿ ತೋಟದ ಕನಸಿಗೆ ಸಸ್ಯಶಾಸ್ತ್ರವನ್ನು ಓದಿದ ಸೀತಾರಾಮನ ಸಹಕಾರ ದೊರೆಯುವಂತೆ ಮಾಡಿ ಕೃಷಿ ಕೆಲಸಕ್ಕೆ ಬೆಂಬಲವನ್ನು ನೀಡುತ್ತಾರೆ.

ಮುಂಬೈ ಬದುಕಿಗೆ ಬೇಸತ್ತ ಮರಳಿ ಮಣ್ಣಿಗೆಯ ರಾಮ ಊರು ಮನೆಯ ಸೆಳೆತದಿಂದ ಮರಳಿ ಕೋಡಿಗೆ ಆಗಮಿಸುತ್ತಾನೆ. ತಾಯಿ ನಾಗವೇಣಿಯೊಂದಿಗೆ ಕೃಷಿ ಕಾಯಕದಲ್ಲಿ ಕೈಜೋಡಿಸುವುದ ರೊಂದಿಗೆ ಹುಟ್ಟೂರಿನಲ್ಲೆ ನೆಲೆ ನಿಲ್ಲುತ್ತಾನೆ. ಆಕಸ್ಮಿಕವಾಗಿ ಘಟಿಸಿದ ಕೊಲೆ ಕೃತ್ಯದಿಂದ ಊರುಬಿಟ್ಟು ಪರಾರಿಯಾದ ಕರುಳಿನ ಕರೆಯ ಲಕ್ಷ್ಮಣ ಮಗನ ನಂಟಿನ ನೆಪದಿಂದ ಮರಳಿ ಬಂದು ಕಳಂಜಿಮೂಲೆ ಯಲ್ಲಿದ್ದ ತನ್ನ ಒಡಹುಟ್ಟಿದವರೊಂದಿಗೆ ಕೃಷಿಗೆ ಕೈ ಜೋಡಿಸುತ್ತಾನೆ. ನಿಸರ್ಗದ ವೈಪರೀತ್ಯಗಳ ನಡುವೆ ಸೆಣಸಾಡುತ್ತಾ, ಕೃಷಿ ಕಾಯಕವನ್ನು ನಡೆಸುವುದು, ಕೃಷಿ ಭೂಮಿಯನ್ನು ವಿಸ್ತರಿಸುವುದು, ಆಧುನಿಕ ತಂತ್ರಜ್ಞಾನಗಳೊಂದಿಗೆ ಹೆಚ್ಚೆಚ್ಚು ಫಸಲು ಪಡೆಯಲೆತ್ನಿಸುವುದು, ಯಾವ್ಯಾವುದೋ ಕಾರಣಗಳಿಂದ ಊರು ಬಿಟ್ಟು ಹೋದವರು ಮರಳಿ ಊರಿಗೆ ಬಂದು ಕೃಷಿಯನ್ನು ನೆಮ್ಮಿಕೊಳ್ಳುವುದು ಹೀಗೆ

ಕೃಷಿಯೊಂದಿಗಿನ ಜನರ ತವಕ ತಲ್ಲಣಗಳನ್ನು ಕಾರಂತರ ಹಲವು ಕಾದಂಬರಿಗಳು ಅಭಿವ್ಯಕ್ತಿಸುವಲ್ಲಿ ಕೃಷಿನಿಷ್ಠೆ ಪ್ರಕಟಗೊಂಡಿದೆ.

**ಅಡಿ ಟಿಪ್ಪಣಿಗಳು**

1. ಪೋಲಂಕಿ ರಾಮಮೂರ್ತಿ, ಜಿ.ಎಸ್. ಶಿವರುದ್ರಪ್ಪ (ಸಂ) (1983) ಪುಟ 78
2. ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ–11, 2003, ಪುಟ – 339, 340
3. ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ: ಸಂ–13, 2003, ಪುಟ 274
4. ಶಿವರಾಮ ಕಾರಂತ, ಚಿಗುರಿದ ಕನಸು, 2009, ಪುಟ 41, 42
5. ಶಿವರಾಮ ಕಾರಂತ, ಗೆದ್ದ ದೊಡ್ಡಸ್ತಿಕೆ, 2008, ಪುಟ 115
6. ಅದೇ, ಪುಟ 255
7. ಶಿವರಾಮ ಕಾರಂತ, ಇದ್ದರೂ ಚಿಂತೆ, 2009, ಪುಟ 192, 193

**ಪರಾಮರ್ಶನ ಗ್ರಂಥಗಳು**


1. ಅನಂತನಾರಾಯಣ ಎಸ್. : ಕಾರಂತರ ಕಾದಂಬರಿಗಳಲ್ಲಿ ನಿಸರ್ಗ, ಕರ್ನಾಟಕ ಸಂಘ, ಪುತ್ತೂರು, 1992
2. ಗುರುಲಿಂಗ ಕಾಪಸೆ : (ಸಂ) ಶಿವರಾಮ ಕಾರಂತ ಸಾಂಸ್ಕೃತಿಕ ಅನುಸಂಧಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು 2003
3. ವಿವೇಕ ರೈ ಬಿ.ಎ. (ಸಂ) ಶತಮಾನದ ಕೊನೆಯಲ್ಲಿ ಶಿವರಾಮ ಕಾರಂತ, ಡಾ. ಶಿವರಾಮ ಕಾರಂತ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ, 2002
4. ವಿವಿಧ ಲೇಖಕರು : ಕಾದಂಬರಿ ಕಣ್ಣಲ್ಲಿ ಕಾರಂತರು, ಪ್ರತಿಭಾ ಯುವ ವೇದಿಕೆ, ಬೆಂಗಳೂರು, 1992
5. ಶಿವರುದ್ರಪ್ಪ ಜಿ.ಎಸ್. (ಸಂ) ಕಾದಂಬರಿಕಾರರಾಗಿ ಕಾರಂತ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು 1983
6. ಸುಮಿತ್ರಾ ಎಲ್.ಸಿ. : ಕಾಡು–ಕಡಲು, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ 2002
7. ಸುಮಿತ್ರಾ ಬಾಯಿ ಬಿ.ಎನ್. ಅಂಗಳದೊಳಗಿನ ಕಡಲು, ಕರ್ನಾಟಕ ಸಂಘ, ಪುತ್ತೂರು, 1997
8. ಹರಿದಾಸ ಭಟ್ಟ, ಕು.ಶಿ. (ಸಂ) ಕಾರಂತ ಪ್ರಪಂಚ, ಗೀತಾ ಬುಕ್ ಹೌಸ್, ಮೈಸೂರು, 1969


ಬಿಸಿಲಿನ ಬೇಗೆಗೆ ಭೂಮಿಯದು ತತ್ತರ
ಮುಗಿಲದೊ ಇದೆ ಬಾನಲಿ ಎತ್ತರ
ಹನಿಗಳ ಮುತ್ತು ಇಳೆಯನು ಒತ್ತಲು
ಮಳೆಯಲಿ ಸಿಕ್ಕಿತು ಮುಗಿಲಿನ ಉತ್ತರ



# ಸಂಪಾದಕೀಯಕ್ಕೆ ಹೊಸ ಆಯಾಮ ನೀಡಿದ ಗುಲ್ವಾಡಿ : ಒಂದು ವಿಶ್ಲೇಷಣೆ

**ಮೌಲ್ಯ ಜೀವನ್**
ಉಪನ್ಯಾಸಕರು
ಪತ್ರಿಕೋದ್ಯಮ ವಿಭಾಗ, ಆಳ್ವಾಸ್ ಕಾಲೇಜು, ಮೂಡುಬಿದಿರೆ-574227

ಕನ್ನಡ ನಿಯತಕಾಲಿಕೆಗಳ ಪ್ರಪಂಚಕ್ಕೆ 1980ರ ದಶಕದಲ್ಲಿ ಹೊಸದಾಗಿ ಸೇರ್ಪಡೆಗೊಂಡದ್ದು ತರಂಗ. ಆಗಿನ ಮಣಿಪಾಲ ಪ್ರಿಂಟರ್ಸ್‌ನ ಮಾಲಕ ಮೋಹನದಾಸ ಪೈ ಅವರ ಮಾರ್ಗದರ್ಶನದಲ್ಲಿ 1982ರ ನವಂಬರ್ 28ರಂದು ತರಂಗ ಪತ್ರಿಕೆಯ ಪ್ರಾಯೋಗಿಕ ಸಂಚಿಕೆ ಪತ್ರಕರ್ತ ಸಂತೋಷಕುಮಾರ ಗುಲ್ವಾಡಿ ಸಂಪಾದಕತ್ವದಲ್ಲಿ ಹೊರಬಂತು. 1983 ಜನವರಿ 2ರಿಂದ ತರಂಗ ಸಾಪ್ತಾಹಿಕವಾಗಿ ತನ್ನ ನಿರಂತರತೆಯನ್ನು ಕಾಯ್ದುಕೊಂಡು ಈ ವರೆಗೆ ಕರ್ನಾಟಕದ ಖ್ಯಾತ ನಿಯತಕಾಲಿಕೆಗಳಲ್ಲಿ ಪ್ರಮುಖ ಸ್ಥಾನ ಪಡೆದುದರ ಹಿಂದೆ ಗುಲ್ವಾಡಿಯವರ ಕೊಡುಗೆ ಅಪಾರ. ಗುಲ್ವಾಡಿಯವರ ಕ್ರಿಯಾಶೀಲತೆಗೆ ಸಾಕ್ಷಿಯಂತಿದ್ದ ತರಂಗದ ಸಂಪಾದಕೀಯಗಳು ಜನಮನ್ನಣೆಗೆ ಪಾತ್ರವಾದುದಲ್ಲದೆ ತರಂಗದ ಹಲವಾರು ಅಂಕಣಗಳು ತರಂಗ ಓದುಗರಿಗೆ ಆಪ್ತವಾದವು.ಕನ್ನಡ ಪತ್ರಿಕೋದ್ಯಮದ 145 ವರ್ಷಗಳ ದೀರ್ಘ ಇತಿಹಾಸದಲ್ಲೇ ಎರಡು ಲಕ್ಷ ಪ್ರತಿಗಳ ಮಾರಾಟ ಮಾಡಿದ ಪ್ರಥಮ ಸಾಪ್ತಾಹಿಕವಾಗಿ ತರಂಗ ಕೀರ್ತಿ ಶಿಖರವೇರುವಂತಾಯಿತು.[1]

ಪತ್ರಿಕೆ ಎಂಬುದು ಒಂದು ರಾಷ್ಟ್ರದ, ಒಂದು ಜನಾಂಗದ ತ್ರಾಣ, ಶುದ್ಧೀಕರಣ ಮನೋಭಾವ ಬೆಳೆಸುವ ಜೀವಂತ ಉಪಕರಣ. ದೇಶದ ಸಾರ್ವತ್ರಿಕ ಮನೋಭಾವದ, ಜನರ ಮಾನಸಿಕ ಮಟ್ಟದ ಅಳತೆಗೋಲು. ಆ ರಾಷ್ಟ್ರ ಹೇಗಿದೆ, ಹೇಗೆ ಮುಂದುವರಿಯುತ್ತಿದೆ, ಎತ್ತ ಎಡವುತ್ತಿದೆ, ಎಲ್ಲಿ ತಿದ್ದಿಕೊಳ್ಳುತ್ತಿದೆ ಎಂಬುದೆಲ್ಲ ಸ್ಪಷ್ಟವಾಗಿ ಹೇಳುವ ಸಂಕೇತ[2] ಎಂದು ನಂಬಿದ್ದ ಗುಲ್ವಾಡಿಯವರ ಸಂಪಾದಕೀಯಗಳು ನೇರ ಮತ್ತು ದಿಟ್ಟ.

ನವಂಬರ್ 28, 1982ರ ತರಂಗದ ಮೊದಲನೆಯ ಪ್ರಾಯೋಗಿಕ ಸಂಚಿಕೆ

ಪ್ರಕಟವಾದಾಗ ಅದರ ಹೆಸರು ನಾಂದಿ ಎಂದಿತ್ತು. ಆ ಸಂಪಾದಕೀಯದಲ್ಲಿ ತರಂಗದ ಆಶಯವನ್ನು ಗುಲ್ವಾಡಿ ಹೇಳಿದ್ದು ಹೀಗೆ– ತರಂಗ ನಿಮ್ಮೆಲ್ಲರ ಸಾಪ್ತಾಹಿಕ. ಜನರು ಮತ್ತು ಜನರ ನಡುವೆ, ಜನತೆ ಮತ್ತು ಸಕಾರದ ನಡುವೆ, ವಿಜ್ಞಾನಿಗಳು ಮತ್ತು ಅಜ್ಞಾನಿಗಳೆನಿಸಿಕೊಂಡವರ ನಡುವೆ, ವೈಚಾರಿಕರು ಮತ್ತು ಭಾವುಕರ ನಡುವೆ, ಸಮಸ್ತ ಜಾತಿ, ಮತ, ಧರ್ಮ, ನಂಬಿಕೆ, ಪಂಥ ಮತ್ತು ನಸ್ತಿಕರ ನಡುವೆ ತರಂಗ ಸುವರ್ಣ ಸೇತುವೆಯಾಗಬೇಕೆಂಬುದು ನಮ್ಮ ಹಾರೈಕೆ[3]. ಹೀಗೆ ಸಮಗ್ರ ಕುಟುಂಬದ ಕೈಗನ್ನಡಿಯಾಗಿತರಂಗ ರೂಪುಗೊಳ್ಳುವಲ್ಲಿ ಗುಲ್ವಾಡಿಯುವರ ಸಂಪಾದಕೀಯಗಳು ಪ್ರಮುಖವಾದವು.ತರಂಗದ ಮೊದಲ ಸಂಚಿಕೆಯ ಸಂಪಾದಕೀಯ ಸ್ವಾಗತ–ಸ್ವಗತ ಎಂಬ ಶೀರ್ಷಿಕೆಯಡಿ ಪ್ರಕಟವಾಯಿತು.[4] ನಾಲ್ಕನೆಯ ವರುಷದ ಮೊದಲ ಸಂಚಿಕೆಯಲ್ಲಿ (ಜನವರಿ 5, 1986) ಸಂಪಾದಕೀಯಕ್ಕೆ ಅಂತರಂಗ–ಬಹಿರಂಗ ಎಂಬ ಹೆಸರು ಬಂತು.[5]

ಸಂಪಾದಕೀಯಗಳಲ್ಲಿ ಸಮಕಾಲೀನ ಬದುಕು, ಸಮಸ್ಯೆಗಳು, ರಾಜಕಾರಣದ ಅಗತ್ಯತೆ, ಸಂಸ್ಕೃತಿ, ಸಾಹಿತ್ಯ, ಕಲೆ, ಧರ್ಮ ಹೀಗೆ ಸಮಾಜದ ವಿವಿಧ ಮಗ್ಗಲುಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಸಂತೋಷಕುಮಾರ ಗುಲ್ವಾಡಿ ಮಾಡಿದರು. ಗುಲ್ವಾಡಿಯವರ ಸಂಪಾದಕೀಯಗಳನ್ನು ಓದುವಾಗ ಒಂದು ನಿರ್ದಿಷ್ಟ ಕಾಲಘಟ್ಟದ ದೇಶ ದರ್ಶನವಾಗುತ್ತದೆ.

**ರಾಜಕೀಯದ ಮೆಲಿನ ಸಂಪಾದಕೀಯಗಳು**

ರಾಷ್ಟ್ರ, ರಾಜ್ಯ ರಾಜಕಾರಣದ ಬಗೆಗೆ ಬರೆದ ಸಂಪಾದಕೀಯಗಳಲ್ಲಿ ವಿಡಂಬನೆಯ ಜೊತೆಗೆ, ಸಮಸ್ಯೆಗಳಿಗೆ ಪರಿಹಾರ ಸೂಚಿಸಿದ್ದಾರೆ. ಸಂಪಾದಕೀಯಕ್ಕೆ ಒಂದು ಕ್ರಾಂತಿಕಾರಕ ಶಕ್ತಿ ಇದೆ ಎಂದು ತೋರಿಸಿಕೊಟ್ಟವರು ಗುಲ್ವಾಡಿ. ಅವರ ಸಂಪಾದಕೀಯಗಳು ನೇರ ಮತ್ತು ಕಠೋರವಾಗಿತ್ತು. ಸಂಪಾದಕೀಯ ಯಾವ ವಿಷಯದ ಮೇಲೆಯೇ ಆಗಲಿ, ವಿಷಯ ಅಧ್ಯಯನ, ಪರಿಸ್ಥಿತಿಯ ವಿಶ್ಲೇಷಣೆ ಮಾಡಿ ಬರೆಯುತ್ತಿದ್ದರು.

ಗುಲ್ವಾಡಿಯವರ ನುಡಿಗಳೆಂದರೆ ಅವು ಬರಿ ನುಡಿಗಳಲ್ಲ, ಬೆಂಕಿಯ ಕಿಡಿಗಳು. ಅದರಲ್ಲಿ ಸ್ಫೋಟಕ ದ್ರವ್ಯ ಜಡಿದು ತುಂಬಿರುತ್ತದೆ. ಯಾರಪ್ಪನ ಭೀತಿ ಇದ್ದುದನ್ನು ಇದ್ದಂತೆ ಹೇಳಲಿಕೆ? ಎಂಬ ಧೈರ್ಯದ, ನಿರ್ಭಯ, ನಿರ್ಭಿಡೆಯ ಮನೋವೃತ್ತಿಯ ಲೇಖನ ಗುಲ್ವಾಡಿ ಅವರದು. ಅವರದು ಬಾಲ್‌ಪೆನ್ ಅಲ್ಲ, ಅಕ್ಷರ ಬಾಂಬು[6] ಎಂದು ಅಂತರಂಗ–ಬಹಿರಂಗದ 1ನೇ ಸಂಪುಟದಲ್ಲಿ ಎನ್ಕೆ ಕುಲಕರ್ಣಿ(ಧಾರವಾಢ) ಬರೆದಿದ್ದಾರೆ.ಗುಲ್ವಾಡಿಯವರ ಬರಹದ ಆಳ, ಅಧ್ಯಯನ, ಸಾಮರ್ಥ್ಯಕ್ಕೆ ಅವರ ಸಂಪಾದಕೀಯಗಳೇ ಪ್ರಮುಖ ಸಾಕ್ಷಿಗಳಾಗಿ ನಿಲ್ಲುತ್ತವೆ.

ರಾಜಕೀಯ ವಿಷಯಗಳ ವಿಶ್ಲೇಷಣೆಗಳೂ ಅವರ ಸಂಪಾದಕೀಯದಲ್ಲಿ ಸ್ವಲ್ಪ ಮಟ್ಟಿನ ಪಾಲು ಪಡೆದಿದ್ದವು. ಆದರೆ ರಾಜಕೀಯ, ರಾಜಕಾರಣಿಗಳ ಸುದ್ಧಿ ಮಾಡುವುದರ ಬಗೆಗೆ ಅಷ್ಟಾಗಿ ಒಲವಿರದ ಗುಲ್ವಾಡಿ, ಯಾವತ್ತು ಪತ್ರಿಕೆಯ ಮೊದಲ ಪುಟದಿಂದ ರಾಜಕೀಯ ಸುದ್ದಿಗಳು ಹೊರಹೋಗುತ್ತವೋ ಆಗ ರಾಜಕೀಯ ಒಳ್ಳೆಯದಾಗುತ್ತದೆ. ರಾಜಕಾರಣಿಗಳಿಗೆ ಮಾಧ್ಯಮದ ಪ್ರಚಾರದ ಕೆಟ್ಟ ಚಾಳಿ ಪ್ರಾರಂಭವಾಗಿದೆ[7] ಎಂದು ಹೇಳುತ್ತಿದ್ದರಂತೆ.

ಅವರ ರಾಜಕೀಯ ಕೇಂದ್ರಿತ ಸಂಪಾದಕೀಯಗಳೆಲ್ಲ ಸ್ಪಷ್ಟ ಮತ್ತು ನೇರ. ಅವರಿಗೆ ಹೇಳಬೇಕೆನ್ನಿಸದ್ದನ್ನು ಸ್ಪಷ್ಟವಾಗಿ ಹೇಳುತ್ತಿದ್ದರು. ಪ್ರಜಾಪ್ರಭುತ್ವ ಸರಕಾರ ಹೇಗಿರಬೇಕು?, ಅದರ ಲಕ್ಷಣಗಳ, ಜವಾಬ್ದಾರಿಗಳ ಬಗ್ಗೆ ಖಡಾಖಂಡಿತವಾಗಿ ಬರೆದರು. ಅದಕ್ಕೆ ನಿದರ್ಶನವೆಂಬಂತೆ ಅವರು ಬರೆದದ್ದು 1983 ರ ಜನವರಿ 16ರ ಸಂಚಿಕೆಯ ಸಂಪಾದಕೀಯ. ಅದರ ಶೀರ್ಷಿಕೆ ಪ್ರಜಾವಿಜಯ. ಈ

ಸಂಪಾದಕೀಯ ಬರಹ ಕರ್ನಾಟಕದಲ್ಲಿ ಮೊತ್ತಮೊದಲ ಬಾರಿಗೆ ಕಾಂಗ್ರೆಸು ಸೋತು ಜನತಾ ಸರಕಾರ ಅಧಿಕಾರಕ್ಕೆ ಬಂದಾಗ ವಿಶೇಷ ಸಂಪಾದಕೀಯವಾಗಿ ಪ್ರಕಟಗೊಂಡಿತ್ತು. ಅದು ಹೀಗಿತ್ತು:

ಇದು ಅನಿರೀಕ್ಷಿತ: ಭಾರತೀಯ ಪ್ರಜಾತಂತ್ರದ ವಿಜಯಕ್ಕೆ ಜೀವಂತ ನಿದರ್ಶನ. ಮತದಾರರು ತಾವೇ ಪ್ರಭುಗಳು, ತಾವು ಜಾಗೃತರಾಗಿದ್ದೇವೆ. ಎಂದು ಆಯ್ಕೆಯನ್ನು ಸ್ಪಷ್ಟಪಡಿಸಿದ ಪ್ರದರ್ಶನ. ಕರ್ನಾಟಕ–ಆಂಧ್ರ ರಾಜಕೀಯಕ್ಕೆ ಹೊಸ ತಿರುವು. ಮತದಾರನ ಗೆಲುವು.

ಇದು ಪ್ರತಿಭಟನೆ: ತಾಳ್ಮೆ ತಪ್ಪಿದ ಪ್ರಜೆಗಳು ತಮ್ಮ ಅಧಿಕಾರ ಚಲಾಯಿಸಿದ ರೀತಿ. ತಲೆತಿರುಕ ನಾಯಕರುಗಳಿಗೆ ತಕ್ಕ ಶಾಸ್ತಿ. ವ್ಯಕ್ತಿಪೂಜೆಗೆ ತಮ್ಮ ಒಲವು ಇಲ್ಲ. ಕೆಲಸ ಮಾಡುವವರಿಗೆ ಮಾತ್ರ ಕುರ್ಚಿ. ದುರಾಡಳಿತಕ್ಕೆ ಜನತೆಯ ತೀರ್ಪು. ಇದು ಜನರ ಮರ್ಜಿ.

ಇದು ಜನತೆಯ ಆಸೆ: ವ್ಯಕ್ತಿಗಿಂತ ಪಕ್ಷ, ಪಾರ್ಟಿಗಿಂತ ಕಾರ್ಯ, ದೇಶಾಭಿವೃದ್ಧಿ ಮುಖ್ಯ. ಭ್ರಷ್ಟಾಚಾರ, ಪಕ್ಷಾಂತರಿಗಳಿಗೆ ಅರ್ಧಚಂದ್ರ. ಆಯ್ಕೆಯಾಗಿ ಬಂದವರೂ ಈ ಮಾತು ಮನಗಾಣಬೇಕು. ಜನರು ಡೊಂಬರಾಟ ಸಹಿಸರು[8] ಹೀಗೆ ಸಾಗುತ್ತದೆ ಆ ಸಂಪಾದಕೀಯ. ಹಿಂದಿನ ಸರಕಾರ ಯಾಕೆ ಬಿತ್ತು ಮತ್ತು ಮುಂದಿನ ಸರಕಾರ ಏನು ಮಾಡಬೇಕು ಎನ್ನುವ ಸಲಹೆ ಕೊಡುತ್ತಿದ್ದ ಅಪರೂಪದ ಸಂಪಾದಕೀಗಳು ಜನಮನ ಗೆದ್ದವು.

1983 ಫೆಬ್ರುವರಿ 13ನೇ ತಾರೀಕಿನ ಸಂಚಿಕೆಯಲ್ಲಿ ಬೇಡ ಬೇಡ ಬೇಡ ಎಂಬ ಶೀರ್ಷಿಕೆಯಡಿ ಬರೆದ ಸಂಪಾಕೀಯಲ್ಲಿ ರಾಜಕಾರಣಿಗಳು ಒಬ್ಬರಿಗೊಬ್ಬರು ಕೀಕಿಸುವ ಪ್ರವೃತ್ತಿಯನ್ನು ಗುಲ್ವಾಡಿ ಈ ಬರಹದಲ್ಲಿ ವಿರೋಧಿಸಿದ್ದರು. ಒಬ್ಬರ ಮೇಲೊಬ್ಬರು ಧೋಷಾರೋಪಣೆ ಮಾಡುವ ಬದಲು ರಾಜ್ಯದ ಅಭಿವೃದ್ಧಿಗೆ ಒಟ್ಟಾಗಿ ಗಮನ ಕೊಡಿ[9] ಎಂದು ಆಡಳಿತ ಮತ್ತು ವಿರೋಧ ಪಕ್ಷಕ್ಕೆ ಸಲಹೆ ಕೊಟ್ಟಿದ್ದರು.

ಜನಸೇವೆಯ ಹೆಸರಿನಲ್ಲಿ ಸ್ವಾರ್ಥ ಸಾಧಿಸುತ್ತಿರುವ ರಾಜಕಾರಣಿಗಳ ನಿಲುವಿನ ವಿರುದ್ಧ ಗುಲ್ವಾಡಿ ತಮ್ಮ 1983ರ ಮಾರ್ಚ್ 6 ರ ಸಂಚಿಕೆಯಲ್ಲಿ ಧ್ವನಿ ಎತ್ತಿದ್ದು ಹೀಗೆ– ಈ ದೇಶದಲ್ಲಿ ಮಂತ್ರಿಗಳಿಂದ ಹಿಡಿದು, ವೈದ್ಯರು, ಇನ್ಶೂರೆನ್ಸ್ ಏಜಂಟರ ವ್ಯವಹಾರದ ವರೆಗೂ ಎಲ್ಲವನ್ನೂ ಜನಸೇವೆ ಎಂದು ಹೆಸರಿಸುತ್ತಾ, ಸೇವೆ ಎಂಬ ಪರಿಶುದ್ಧ ಪದದ ಅರ್ಥವ್ಯಾಪ್ತಿಯನ್ನೇ ಕುಲಗೆಡಿಸಿಬಿಟ್ಟಿದ್ದಾರೆ. ಮುಂದುವರೆಯುತ್ತಾ ಗುಲ್ವಾಡಿ ಬರೆದಿದ್ದಾರೆ, ಯಥಾ ರಾಜ ತಥಾ ಪ್ರಜಾ ಎಂಬ ಹಳೆಯ ಮಾತು ಪ್ರಜಾಪ್ರಭುತ್ವದಲ್ಲೂ ಹೊಂದುತ್ತದೆ. ಬ್ರಿಟೀಷ್ ಪರಂಪರೆಯ ಆಳುವವರು ಮತ್ತು ಆಳಿಸಿಕೊಳ್ಳುವವರು ಎಂಬ ಸ್ಪಷ್ಟವಾದ ಎರಡು ವರ್ಗಗಳನ್ನು ನಾವು ಇನ್ನೂ ಹಾಗೆಯೇ ಪೋಷಿಸುತ್ತಿದ್ದೇವೆ. ಆಳುವವರ ಕೈಯಲ್ಲಿ ಅಧಿಕಾರ, ಬಾಯಲ್ಲಿ ಸೇವೆಯ ಮಾತು, ಮಾಡುವುದೆಲ್ಲ ಸ್ವಾರ್ಥ, ಸಾರ್ವಜನಿಕ ಹಣದ ಪೋಲು.[10] ಹೀಗೆ ಸಾಗುತ್ತದೆ ಗುಲ್ವಾಡಿಯವರ ಬರಹದ ಧಾಟಿ. ರಾಜಕಾರಣಿಗಳ, ರಾಜಕೀಯದ ಬಗೆಗಿನ ಅವರ ಅಸಮಾಧಾನವನ್ನು ನೇರವಾಗಿ ತಮ್ಮ ಸಂಪಾದಕೀಯ ಬರಹದ ಮೂಲಕ ಗುಲ್ವಾಡಿ ಹೊರಹಾಕಲು ಪ್ರಯತ್ನಿಸಿದ್ದು ಇಲ್ಲಿ ಸ್ಪಷ್ಟವಾಗುತ್ತದೆ.

ಅವರ ಇನ್ನೊಂದು ಸಂಪಾದಕೀಯ ಬರಹ ವಿಧಾನ ಸಭೆಗಳ ವೈಖರಿಯಲ್ಲಿ (1983, ಏಪ್ರಿಲ್ 3) ವಿಧಾನಸಭೆಗಳಲ್ಲಿ ಮಂತ್ರಿಗಳ ನಡತೆ, ಬೇಜವಾಬ್ದಾರಿತನಗಳ ಬಗೆಗೆ ಬೆಳಕು ಚೆಲ್ಲಿದ್ದಾರೆ. ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಗುಲ್ವಾಡಿ ಕೇವಲ ವಿಮರ್ಶಿಸಲಿಲ್ಲ, ಮಂತ್ರಿವರ್ಯರ ಜವಾಬ್ದಾರಿಗಳನ್ನೂ ಈ ಸಂಪಾದಕೀಯದಲ್ಲಿ ಒತ್ತಿಹೇಳಿದ್ದಾರೆ. ಅತ್ಯಂತ ಮಹತ್ವದ ಚರ್ಚೆ ನಡೆಯುವಾಗ ಎಷ್ಟೋ ಶಾಸಕರು ಗೈರು ಹಾಜರಾಗುತ್ತಾರೆ. ಕೆಲವರಿಗೆ ತಮ್ಮ ವೈಯಕ್ತಿಕ ದ್ವೇಷ, ಈರ್ಷ್ಯೆಗಳ ತೀಟೆ ಸಾಧಿಸಲು ಇರುವ ಸವಾಲ್–ಜವಾಬು ಅಖಾಡಾ[11] ಎಂದು ಲೋಕಸಭೆ ರಾಜ್ಯಸಭೆಗಳ ಸಭೆಗಳನ್ನು ಬಣ್ಣಿಸಿದ್ದಾರೆ.

ಹೀಗೇ ಬರಗಾಲದ ಸಮಯದಲ್ಲಿ ಸರಕಾರದ ನಿರ್ಲಕ್ಷ್ಯ, ಭರಿಸಲಾಗದ ತೆರಿಗೆ, ನೀರಾವರಿ ಯೋಜನೆಗಳ ಅಸಮರ್ಪಕ ಅನುಷ್ಠಾನದ ಬಗೆಗೂ ಸಂಪಾದಕೀಯಗಳನ್ನು ಬರೆದಿದ್ದಾರೆ. ಹಾಗೆಂದು ಅವುಗಳು ಸಾಮಾನ್ಯ ಟೀಕೆಗಳಲ್ಲ. ಬಜೆಟ್, ಯೋಜನೆಗಳ ಬಗ್ಗೆ ದನಿ ಎತ್ತಿದಾಗಲೆಲ್ಲ ಗುಲ್ವಾಡಿ ಸಮರ್ಪಕ ಅಂಕಿ ಅಂಶಗಳನ್ನು ಓದುಗರ ಮುಂದಿಟ್ಟಿದ್ದಾರೆ.

ಪ್ರಜಾಪ್ರಭುತ್ವದ ಹೆಸರಿನಲ್ಲಿ ರಾಜಮಹಾರಾಜರುಗಳ ಸಿಂಹಾಸನಗಳನ್ನು ಕಿತ್ತುಹಾಕಿದೆವು. ರಾಜಧನವನ್ನು ರದ್ದು ಪಡಿಸಿದೆವು. ಈ ಮಾಜೀ ರಾಜಮಹಾರಾಜರುಗಳ ವೈಭವ, ವಿಲಾಸೀ ಜೀವನ, ಅಟ್ಟಹಾಸ, ಮೋಜುಗಳ ರೋಮಾಂಚಕಾರಿ, ಲೇವಡಿ ಪುಸ್ತಕಗಳನ್ನು ಬರೆದು ಪ್ರಕಟಿಸಿದೆವುಮಂತ್ರಿಗಳ ಹೆಲಿಕಾಪ್ಟರ್ ಹಾರಾಟ, ಹೋದಲ್ಲೆಲ್ಲಾ ಮೇಜವಾನಿ ಟಿ.ವಿ. ಕ್ಯಾಮೆರಾಗಳು, ಛಾಯಾಗ್ರಾಹಕರು, ಪತ್ರಕರ್ತರು, ಎಕ್ಸೈಸ್‌ಗಳಿಂದ ಹಿಡಿದು ಪಿಡಬ್ಲ್ಯೂ.ಡಿ ಕಂಟ್ರಾಕ್ಟರುಗಳು, ವ್ಯಾಪಾರಿಗಳು ಮಂದಿ ಮಾಗಧ ಸೇನೆ ಇವುಗಳೆಲ್ಲ ಮಾಜಿ ಮಹಾರಾಜರುಗಳ ವೈಭವಕ್ಕಿಂತ ಯಾವ ಮಟ್ಟಿಗೆ ಕಡಿಮೆ? ಮಂತ್ರಿಗಳ ಈ ಅಡ್ಡಪಲ್ಲಕಿ ಉತ್ಸವಗಳು ಗಣತಂತ್ರದಲ್ಲಿ ಅವಶ್ಯವೇ?[12] ಹೀಗೆ ಪಶ್ನೆಗಳನ್ನು ಕೇಳುತ್ತಲೇ ಓದುಗರಲ್ಲಿ ಪ್ರಶ್ನೆಗಳನ್ನು ಮೂಡಿಸುತ್ತಾ ಜಾಗೃತಿ ಹುಟ್ಟಿಸಿದರು ಗುಲ್ವಾಡಿ.

ಪಕ್ಷಪ್ರೇಮ[13] ಎಂಬ ಶೀರ್ಷಿಕೆಯ ಸಂಪಾದಕೀಯದಲ್ಲಿ ರಾಜಕಾರಣಿಗಳಿಗೆ ದೇಶ ಪ್ರೇಮಕ್ಕಿಂತ ಪಕ್ಷಪ್ರೇಮ ಹೆಚ್ಚಾದ ಬಗ್ಗೆ, ಆದರೆ ಪಕ್ಷಕ್ಕಿಂತ ದೇಶವೇ ಮುಖ್ಯವಾಗಬೇಕೆಂಬ ಸಲಹೆ ಕೊಟ್ಟಿದ್ದಾರೆ. ಕರ್ನಾಟಕದಲ್ಲಿ ದೂರದರ್ಶನ ಕೇಂದ್ರ ಸ್ಥಾಪಿಸುವ ಬಗೆಗೆ ಸರಕಾರದ ನಿರ್ಲಕ್ಷ್ಯ, ಪಕ್ಷಾಂತರ, ರಾಮಕೃಷ್ಣ ಹೆಗಡೆಯವರ ಆಢಳಿತ ವೈಖರಿ ಸರಿಕಾಣದಿದ್ದಾಗ ತಮ್ಮ ಸಂಪಾದಕೀಯದಲ್ಲಿ ಬಲವಾಗಿ ವಿರೋಧಿಸಿದ್ದಾರೆ. ಅಷ್ಟೇ ಅಲ್ಲದೆ 1984 ಏಪ್ರಿಲ್ 8ರ ಸಂಚಿಕೆಯ ಸಂಪಾದಕೀಯವನ್ನು ಈ ಬದಲಾವಣೆ ತರುವುದು ಖಂಡಿತವಾಗಿಯೂ ನಿಮಗೆ ಸಾಧ್ಯವಿದೆ[14] ಎಂಬ ಶೀರ್ಷಿಕೆಯಡಿ ಆಗಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರಿಗೆ ಬಹಿರಂಗ ಪತ್ರ ಬರೆದರು. ಆ ಮೂಲಕ ಸರಕಾರದಿಂದ ಜನರ ನಿರಿಕ್ಷೆಗಳೇನು ಎಂಬ ಬಗ್ಗೆ ಸ್ಪಷ್ಟವಾಗಿ ಬರೆದರು. ಕೇವಲ ಹೆಗಡೆಯವರಿಗೆ ಮಾತ್ರವಲ್ಲ ಅಟಲ್ ಬಿಹಾರಿ ವಾಜಪಯಿ ಅವರಿಗೂ ಸಂಪಾದಕೀಯದಲ್ಲಿ ಪತ್ರ ಬರೆದಿದ್ದರು ಗುಲ್ವಾಡಿ. ಪತ್ರದ ಮೂಲಕ ಜನರಲ್ಲೂ ಪ್ರಶ್ನಿಸುವ ಧೈರ್ಯ ಬರಲಿ ಎನ್ನುವ ಉದ್ದೇಶದಿಂದ ಹೀಗೆ ಬಹಿರಂಗ ಪತ್ರ ಬರೆದರು ಎನ್ನುವುದು ಅವರ ಪತ್ರಗಳನ್ನು ಓದಿದರೆ ಗೊತ್ತಾಗುತ್ತದೆ.

ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸಮಸ್ಯೆಗಳ ಬಗೆಗೆ ನಿರಂತರವಾಗಿ ಗುಲ್ವಾಡಿ ಬರೆದರು. ಯಾರ ಮುಲಾಜಿಗೂ ಬೀಳದೆ ರಾಜಕಾರಣಿಗಳನ್ನು ನಿಷ್ಪಕ್ಷಪಾತವಾಗಿ ಟೀಕಿಸಿದರು. 1984ರಲ್ಲಿ ಅಮೆರಿಕಾದ ಲಾಸ್ ಏಂಜಲೀಸ್‌ನಲ್ಲಿ ನಡೆದ ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ಕರ್ನಾಟಕದ ಶಾಸಕರು ಹೊರಟಿದ್ದ ಸಂದರ್ಭದಲ್ಲೂ ಅದನ್ನು ವಿರೋಧಿಸಿ ಗುಲ್ವಾಡಿ ಸಂಪಾದಕೀಯ ಬರೆದರು. ಹೀಗೇ ದುಂದು ವೆಚ್ಚ ಮಾಡುವ ಬದಲು ಕ್ರೀಡಾಳುಗಳಿಗೆ ಆ ಹಣದಲ್ಲಿ ಸೌಲಭ್ಯ ಒದಗಿಸಿ ಎಂಬ ಧ್ವನಿ ಎತ್ತಿದರು.[15] ರಾಜಕಾರಣಿಗಳು ಕೊಡುವ ಪೊಳ್ಳು ಭರವಸೆಗಳು ಭ್ರಮೆ ಉಂಟುಮಾಡುವ ಇಂದ್ರಜಾಲಗಳಷ್ಟೇ. ಇದೊಂದುಸತತ ಬ್ರೈನ್ ವಾಷಿಂಗ್ ಕಾರ್ಯಕ್ರಮ[16] ಎಂದು ಗುಲ್ವಾಡಿ ಬಣ್ಣಿಸಿದ್ದಾರೆ(1984, ಸೆಪ್ಟೆಂಬರ್ 16 ಸಂಚಿಕೆ). ಪಕ್ಷಾಂತರಿಗಳು ನಂಬರ್ 1 ದೇಶದ್ರೋಹಿಗಳು[17] ಎಂದರು(ಸೆ.23 1984ನೇ ಸಂಚಿಕೆ).

ಕನ್ನಡಪ್ರಭದ ವೈ.ಎನ್.ಕೆ, ಪ್ರಜಾವಾಣಿಯ ಶೈಲೇಶ್ಚಂದ್ರ ಗುಪ್ತ, ಟಿ.ಎಸ್.ಆರ್, ಕನ್ನಡಪ್ರಭದ ಖಾದ್ರಿ ಶಾಮಣ್ಣ, ಕರ್ಮವೀರ, ಸಂಯುಕ್ತ ಕರ್ನಾಟಕದ ಪಾ.ವೆಂ.ಆಚಾರ್ಯ, ವಾರಪತ್ರಿಕೆಯ ಬಿ.ವಿ.ವೈಕುಂಠರಾಜು ಹೀಗೇ ಪತ್ರಿಕೋದ್ಯಮದಲ್ಲಿ ಹೊಸ ಕ್ರಾಂತಿ ಮಾಡಿದ ಪತ್ರಕರ್ತರ, ಸಂಪಾದಕರ

ಹೆಸರಿನ ಜೊತೆ ಸೇರಿಕೊಳ್ಳಲೇ ಬೇಕಾದ ಇನ್ನೊಂದು ಹೆಸರು ಗುಲ್ವಾಡಿ.[18] ಹಿರಿಯ ಹಾಗೂ ಸಮಕಾಲೀನ ಪತ್ರಕರ್ತರ ಜೊತೆಗೆ ಕೆಲಸ ಮಾಡಿಕೊಂಡು ತರಂಗ ಮತ್ತು ತರಂಗದ ಸಂಪಾದಕೀಯದ ಮೂಲಕ ಕನ್ನಡ ನಿಯತಕಾಲಿಕೆಗಳ ಮಟ್ಟಿಗೆ ಹೊಸ ಭಾಷ್ಯ ಬರೆಯುವ ಪ್ರಯತ್ನ ಗುಲ್ವಾಡಿಯವರಿಂದ ನಿರಂತರವಾಗಿ ನಡೆದದ್ದನ್ನು ಕಾಣಬಹುದು.

1980ರ ದಶಕದಲ್ಲಿ ಇನ್ನೂ ತಂತ್ರಜ್ಞಾನ ಅಷ್ಟಾಗಿ ಬೆಳೆದಿರದಂತಹ ಸಂದರ್ಭದಲ್ಲೂ ಆ ಕಾಲದ ಪತ್ರಕರ್ತರು ಹೊಸ ವಿಷಯ, ಹೊಸತನಗಳ ಜೊತೆ ಕನ್ನಡ ಪತ್ರಿಕೋದ್ಯಮವನ್ನು ಬೆಳೆಸಿದ್ದು ರೋಚಕ ಸಂಗತಿ. ಅದಾಗಿಯೂ ದಿನದ ಬೆಳವಣಿಗೆಗಳನ್ನು ಮರುದಿನ ಪತ್ರಿಕೆಗಳಲ್ಲಿ ಕೊಟ್ಟು, ಪ್ರಚಲಿತ ವಿಷಯಗಳ ಬಗ್ಗೆ ಪರಿಣಾಮಕಾರಿ ಸಂಪಾದಕೀಯಗಳನ್ನು ಬರೆದದ್ದು ನಿಜಕ್ಕೂ ವಿಶೇಷ.

ಗುಲ್ವಾಡಿ ಇಂತಹ ಸಂದರ್ಭದಲ್ಲೇ ರಾಷ್ಟ್ರ ರಾಜಕಾರಣದ ಬಗೆಗೂ ಗಮನಹರಿಸಿದರು. ಇಂದಿರಾ ಗಾಂಧಿ ಬಗ್ಗೆ, ರಾಜೀವ್ ಗಾಂಧೀ ಆಢಳಿತದ ಬಗ್ಗೆ, ವಾಜಪೇಯಿ ಆಢಳಿತದ ಕುರಿತು ಸಂಪಾದಕೀಯ ಬರೆದರು. ಅವರನ್ನೂ ಟೀಕಿಸಿದರು. ಪ್ರಧಾನಿ ಕಛೇರಿ ಬಗ್ಗೆ ಬರೆದರು. ರಾಷ್ಟ್ರೀಯ ಸಮಸ್ಯೆಗಳನ್ನು ಎದುರಿಸುವ ಬಗ್ಗೆ ಸಲಹೆಯಿತ್ತರು.[19](ಹುರುಪಿನ ಹೆಜ್ಜೆಗಳು–ಜನವರಿ 27, 1985 ಸಂಚಿಕೆ.)

ಸರಕಾರ ಮಾತ್ರವಲ್ಲ, ಸರಕಾರೀ ಕಛೇರಿಗಳ ಬಗ್ಗೆಯೂ ತಮ್ಮ ಸಂಪಾದಕೀಯದಲ್ಲಿ ಟೀಕಾಪ್ರಹಾರ ನಡೆಸಿದರು[20](1987–ಮಾರ್ಚ್ ಸಂಚಿಕೆ), ಪ್ರಾದೇಶಿಕ ಪಕ್ಷಗಳ ದೌರ್ಬಲ್ಯಗಳ ಬಗೆಗೆ ವಿವರಣೆ ಕೊಟ್ಟರು[21](1986 ಫೆಬ್ರವರಿ ಸಂಚಿಕೆ) ಗುಲ್ವಾಡಿಯವರಿಗೆ ಶೋಕಾಚರಣೆ ಆಚರಿಸಲು ಸರಕಾರ ರಜೆ ಕೊಡುವ ಬಗ್ಗೆ ತೀವ್ರ ಅಸಮಾಧಾನವಿತ್ತು. ಅವರ ಸಂಪಾದಕೀಯವೊಂದರಲ್ಲಿ ಶೋಕಾಚರಣೆ ಒಂದು ನಾಟಕ ಎಂದು ಬಣ್ಣಿಸಿದ್ದಾರೆ. ಯಾರಾದರೂ ಹಿರಿಯ ನಾಯಕರು ಸತ್ತರೆ ಶೋಕಾಚರಣೆ ಸಲುವಾಗಿ ರಜೆ ಕೊಡುವ ಸರಕಾರ ಆ ಮೂಲಕ ಇನ್ನಷ್ಟೂ ಆಲಸಿಯಾಗುತ್ತಿದೆ ಎಂದರು. ಅಕ್ಷರಶಃ ಇರುವ ರಜೆಗಳೆಷ್ಟು, ಧಾರ್ಮಿಕ, ಖಾಸಗೀ ರಜೆಗಳೆಷ್ಟು ಎಂಬ ಲೆಕ್ಕವನ್ನೂ ತಮ್ಮ ಸಂಪಾದಕೀಯದಲ್ಲಿ ವಿವರಿಸಿದರು[22](1988, ಫೆಬ್ರವರಿ 7ರ ಸಂಚಿಕೆ).

1988ರ ಪಾಕಿಸ್ತಾನದ ಚುನಾವಣೆ, ಅಸ್ಸಾಂ ರಾಜಕೀಯ, ಚೀನಾ, ಅಮೆರಿಕಾ ರಷ್ಯಾ ರಾಜಕೀಯ ಬೆಳವಣಿಗೆ, ಆ ದೇಶದ ನಾಯಕರ ಬಗೆಗೆ ಅಧ್ಯಯನ ನಡೆಸಿ ಬರೆದರು. ಬೇಕೆಂದಾಗಲೆಲ್ಲ ಹೊರದೇಶಗಳಿಗೆ ಹೋಗಿ ಜನರನ್ನು ಭೇಟಿ ಮಾಡಿ, ಸ್ಥಳಗಳನ್ನು ವೀಕ್ಷಿಸಿ ಬರುತ್ತಿದ್ದ ಗುಲ್ವಾಡಿಗೆ ಸಹಜವಾಗಿ ಅಂತರಾಷ್ಟ್ರಿಯ ರಾಜಕೀಯದಲ್ಲೂ ಆಸಕ್ತಿ ಬೆಳೆಯಿತು.

ಅದು 1993ನೇ ವರ್ಷ. ಲೋಕಸಭೆಯ ಐತಿಹಾಸಿಕ ಬೈಠಕ್‌ನಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಿಗೆ ಅವರ ಭ್ರಷ್ಟಾಚಾರ ಅಪರಾಧಗಳಿಗಾಗಿ ಛೀಮಾರಿ ಹಾಕುವ ನಿಂದನಾ ನಿರ್ಣಯ ಮಾಡುವ ಸಂಧರ್ಭ. ಕಾಂಗ್ರೆಸ್ ಆ ಕಾರ್ಯಕ್ರಮವನ್ನು ನಿರಾಕರಿಸಿಬಿಟ್ಟಿತು. ಗುಲ್ವಾಡಿ ಸಂದರ್ಭಕ್ಕೆ ಸರಿಯಾಗಿ ಒಂದು ಸಂಪಾದಕೀಯ ಬರೆದರು. ಆತ್ಮವೇ ಇಲ್ಲದ ಸಾಕ್ಷೀಭೂತಗಳಿಂದ ಲೋಕಸಭೆಯಲ್ಲಿ ಸತ್ಯದ ಕೊಲೆ, ಭ್ರಷ್ಟಾಚಾರಕ್ಕೆ ಸುಪ್ರೀಂ ಭಾರತರತ್ನ ಪ್ರಶಸ್ತಿ[23]. ಈ ಶೀರ್ಷಿಕೆಯಡಿ ಬಂದ ಸಂಪಾದಕೀಯ ಇಡೀ ಪ್ರಕರಣವನ್ನು ವಿವರಿಸಿತು. ಗುಲ್ವಾಡಿಯವರ ಸಮಯಪ್ರಜ್ಞೆ, ಅಧ್ಯಯನಶೀಲತೆಗೆ ಆ ಸಂಪಾದಕೀಯ ಉತ್ತಮ ನಿದರ್ಶನ.

ಉದಾರ ನೀತಿಯ ಉರುಳುಗಳು, ಮನಸ್ಸೂ ಇಲ್ಲ ಮಾರ್ಗವೂ ಇಲ್ಲ, ಜನರಿಂದ ಜನರಿಗಾಗಿ, ಕಬಂದ ಯೋಜನೆಗಳು, ಚುನಾವಣೆ ಎಂಬುದು ಪ್ರಜೆಗಳ ಚಿತಾವಣೆ ಹಾಗೂ ಬನಾವಣೆ ಆಗಬೇಕೇ?, ಚುನಾವಣಾ ನಿಧಿ ಸಂಗ್ರಹಣ, ಭ್ರಷ್ಟ ರಾಜಕೀಯದ ಶುದ್ಧೀಕರಣ– ಇವುಗಳು 1990ರ ಆದಿಯಲ್ಲಿ

ಬರೆದ ರಾಜಕೀಯ ಕುರಿತಾದ ಸಂಪಾದಕೀಯಗಳು.[24] ಅಯ್ಯಯ್ಯೋ ಎಂತಾ ಅಧಃಪತನ, ಇದು ರಾಷ್ಟ್ರ ಚಾರಿತ್ರ್ಯದ ಪ್ರಶ್ನೆ, ಕರ್ನಾಟಕ ಕರಾವಳಿಯಲ್ಲಿ ಕರಾಳ ರಾಜಕೀಯ ಆಟಂ ಬಾಂಬ್, ಅಯ್ಯಯ್ಯೋರಸ್ತೆ ಏನೆಂದು ಬಣ್ಣಿಸಲಿ ನಿನ್ನ ದುರವಸ್ಥೆಇವು 1990ರ ಮಧ್ಯ ಭಾಗದಲ್ಲಿ ಪ್ರಕಟವಾದ, ರಾಜಕಾರಣಿಗಳಿಗೆ ಬಿಸಿ ಮುಟ್ಟಿಸಿದ ಗುಲ್ವಾಡಿ ಸಂಪಾದಕೀಯಗಳು.[25]

ಇಲ್ಲಿ ಗಮನಿಸಲೇ ಬೇಕಾದ ಮುಖ್ಯ ಅಂಶವೆಂದರೆ, 1980ರ ದಶಕದಲ್ಲಿ ಬರೆದ ರಾಜಕೀಯ ವಿಮರ್ಶೆಗಳ ಸಂಖ್ಯೆ 1990ರ ವೇಳೆಗೆ ಕಡಿಮೆಯಾಯಿತು. ವರುಷಕ್ಕೆ 2 ರಿಂದ 3 ಸಂಪಾದಕೀಯಗಳು ಮಾತ್ರ ರಾಜಕೀಯ ಕೇಂದ್ರಿತವಾಗಿತ್ತು. ಉಳಿದಂತೆ ಸಿನೆಮಾ, ಕ್ರೀಡೆ, ಸಂಗೀತ, ಸಾಹಿತ್ಯ, ಸಾಮಾಜಿಕ ಸಮಸ್ಯೆಗಳ ಬಗೆಗೆ ಗುಲ್ವಾಡಿ ಗಮನಹರಿಸಿದ್ದನ್ನು ನಾವು ಗಮನಿಸಬಹುದು.

ಮತ್ತೆ 1995 ನಂತರದ ದಿನಗಳಲ್ಲಿ ತರಂಗದ ಸಂಪಾದಕೀಯಗಳಲ್ಲಿ ಮತ್ತೆ ರೋಚಕ ರಾಜಕೀಯ ಕೇಂದ್ರಿತ ಸಂಪಾದಕೀಯಗಳು ಪ್ರಕಟವಾದವು. ನಮ್ಮ ದೇಶದ ಚುನಾವಣಾ ವೈಖರಿಯನ್ನು ದಿ ಗ್ರೇಟ್ ಇಂಡಿಯನ್ ಎಲೆಕ್ಷನ್ ಸೂಪರ್ ಬಜಾರ್ ಎಂದು ಕರೆದರು. ಹನ್ನೊಂದನೆಯ ಲೋಕಸಭೆಯ ಕುರಿತಾಗಿ ಬರೆದ ಸಂಪಾದಕೀಯವನ್ನು ಗೂಂಢಾ, ಕ್ರಿಮಿನಲ್, ದಗಲ್‌ಬಾಜಿ, ಢಕಾಯಿತರ ಸಂತೆ ಎಂಬ ಶೀರ್ಷಿಕೆಯಡಿ ಬರೆದರು. ಈ ಕುಡುಕ, ಲಂಪಟ, ಅಧಿಕಾರಮತ್ತ ಅಮಲುಕೋರ ಜೂಜಾಟಗಾರರು ಪಾನನಿಷೇಧ ತರಬಲ್ಲರೆ? ಸಂಪಾದಕೀಯ ಬರಹಗಳು ಗುಲ್ವಾಡಿಯವರ ನಿರ್ಭೀಢ ಬರಹಕ್ಕೆ ನಿದರ್ಶನ. ಅಟಲ್ ಬಿಹಾರಿ ವಾಜಪೇಯಿ, ದೇವೇಗೌಡರಿಗೆ ಪತ್ರ ಬರೆದರು (ಸಂಪಾದಕೀಯ–ಜೂನ್ ಸಂಚಿಕೆಗಳು).[26] ಪ್ರಜಾಪ್ರಭುತ್ವದ ಭಾದಶಹರು ಎಂಬ ಶೀರ್ಷಿಕೆಯಡಿ ಬಂದ ಸಂಪಾದಕೀಯ ಬರಹ ರಾಷ್ಟ್ರ ನಾಯಕರ ನಿವಾಸಗಳ ಮೇಲೆ ಬರೆದದ್ದು.[27] ಅಂತಹ ಅಧ್ಯಯನದ ಅಗಾಧತೆ ಮತ್ತು ಆಸಕ್ತಿಯೇ ಗುಲ್ವಾಡಿಯವರನ್ನು ಒಬ್ಬ ಅಪರೂಪದ ಸಂಪಾದಕನನ್ನಾಗಿ ಗುರುತಿಸಿದ್ದು.

ಮುಂಬಯಿ ವಿ.ವಿ.ಯು ಶಾಸಕರಿಗೆ ಪಾರ್ಲಿಮೆಂಟರಿ ಕ್ರಮಗಳು, ವಿಧಿಗಳನ್ನು ತಿಳಿಸಿ, ತರಬೇತಿಗೊಳಿಸುವ ಸಲುವಾಗಿ ಮೂರು ತಿಂಗಳ ಸರ್ಟಿಫಿಕೇಟ್ ಕೋರ್ಸನ್ನು ಆರಂಭಿಸಿದ ಸಂದರ್ಭದಲ್ಲಿ ಗುಲ್ವಾಡಿ, ಆ ನಿರ್ಧಾರದ ಬಗ್ಗೆ ಮೆಚ್ಚುಗೆ ಸೂಚಿಸಿ ಒಂದು ಸಂಪಾದಕೀಯ ಬರೆದರು.[28] ಎಲ್ಲಿ ಏನೇ ಬೆಳವಣಿಗೆಗಳಾಗಲಿ ಅದಕ್ಕೆ ಸ್ಪಂದಿಸುವ ಸಹೃದಯತೆ ಮತ್ತು ಯಾವುದೇ ವಿಷಯಗಳನ್ನೂ ವಿರೋಧಿಸುವ ಗಟ್ಟಿತನ ಗುಲ್ವಾಡಿಯವರ ಯಶಸ್ಸಿಗೆ ಇನ್ನೊಂದು ಕಾರಣವಾಯಿತು.

ಇನ್ನು ಚುನಾವಣೆ, ಪಕ್ಷಾಂತರ, ಭ್ರಷ್ಟಾಚಾರ, ದುರ್ಬಲ ಶಾಸಕರು, ಮಂತ್ರಿಗಳು, ಯೋಜನೆಗಳ ಬಗ್ಗೆ ನಿರಂತರವಾಗಿ ತಮ್ಮ ಸಂಪಾದಕೀಯದಲ್ಲಿ ಸಂತೋಷ ಕುಮಾರ ಗುಲ್ವಾಡಿ ದನಿಯೆತ್ತಿದ್ದಾರೆ. ಗುಲ್ವಾಡಿಯವರ ಸಂಪಾದಕೀಯಗಳು ಅನುಕರಣೀಯ ಮತ್ತು ಆದರ್ಶವಾಗಿ ನಿಲ್ಲುವುದರಲ್ಲಿ ಸಂಶಯವಿಲ್ಲ. ಪ್ರಸ್ತುತ ರಾಜಕೀಯ ಬೆಳವಣಿಗೆ, ರಾಜಕಾರಣಿಗಳ ಚಟುವಟಿಕೆಗಳನ್ನು ಗಮನದಲ್ಲಿಟ್ಟು ಬರೆಯುತ್ತಿದ್ದ ಸಂಪಾದಕೀಯಗಳು ಮತ್ತು ಗುಲ್ವಾಡಿಯವರು ಸಂಪಾದಕೀಯಗಳ ಮೂಲಕ ಕೊಡುತ್ತಿದ್ದ ಸಲಹೆಗಳು ಇಂದಿಗೂ ಪ್ರಸ್ತುತ. ನಿರ್ಭಯ ರಾಜಕೀಯ ವಿಶ್ಲೇಷಣೆ, ವಿಢಂಬನೆಗಳು ಮಾದರಿ ಸಂಪಾದಕೀಯಗಳು.

**ಸಾಹಿತ್ಯ ಮತ್ತು ಸಾಂಸ್ಕೃತಿಕ ಹಾಗೂ ಇತರ ವಿಷಯಗಳ ಕುರಿತಾದ ಸಂಪಾಕೀಯಗಳು**

ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿಗಳ ಬಗ್ಗೆ ಅಪಾರ ಒಲವಿದ್ದ ಗುಲ್ವಾಡಿ ಕುಟುಂಬದಿಂದ ಬಂದ ಸಂತೋಷ ಕುಮಾರ ಗುಲ್ವಾಡಿ ತಮ್ಮ ಪತ್ರಿಕೋದ್ಯಮ ಬರಹಗಳಲ್ಲೂ ಅದನ್ನೇ ಪ್ರತಿಪಾದಿಸಿದರು.

ಹಿಂದೂಸ್ತಾನೀ ಸಂಗೀತ, ಸಂಗೀತ ವಾದ್ಯಗಳು, ಸಂಗೀತಗಾರರು, ಭಾರತೀಯ ಸಂಸ್ಕೃತಿ, ಕಲೆ, ವಾಸ್ತುಶಿಲ್ಪ ಇವೇ ಮೊದಲಾದ ವಿಷಗಳ ಕುರಿತು ಅವ್ಯಾಹತವಾಗಿ ಗುಲ್ವಾಡಿ ಬರೆದರು. ತರಂಗದ ಸಂಪಾದಕೀಯಗಳಲ್ಲೂ ಗುಲ್ವಾಡಿ ಈ ಕುರಿತು ದನಿ ಎತ್ತಿದ್ದಾರೆ.ಸಾಮಾಜಿಕ ಸಾಂಸ್ಕೃತಿಕ ಇತಿಹಾಸವನ್ನು ನಿರ್ಮಿಸುವವರಿಗೆ ಗುಲ್ವಾಡಿ ಸಂಪಾದಕೀಯಗಳು ಅಪೂರ್ವ ಆಕರಗಳಾಗುತ್ತವೆ ಎಂದು ಹಾ.ಮಾ ನಾಯಕ ಹೇಳಿದ್ದಾರೆ.[29]

ವಂದೇ ಮಾತರಂಗೆ ನೂರು ವರ್ಷವಾದಾಗ ಅದರ ರಚನೆ, ಆಶಯ, ಜನಗಣಮನ ಅಧಿನಾಯಕ ಹಾಡಿನ ಕುರಿತಾಗಿ ಬರೆದಿದ್ದರು[30] ಗುಲ್ವಾಡಿ.

ಡಾ.ವಿ.ಕೃ.ಗೋಕಾಕರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸ್ಥಾನ ಸಿಕ್ಕಾಗ, ಗೋವಿಂದ ಪೈ ಅವರ 100ನೆಯ ಜನ್ಮಜಯಂತಿ ಸಂದರ್ಭದಲ್ಲಿ ಅವರ ಕುರಿತಾಗಿ ಬರೆದರು. ಫಣಿಯಮ್ಮ ಚಿತ್ರಕ್ಕೆ ರಜತಕಮಲ ಪ್ರಶಸ್ತಿ ಬಂದಾಗ ಪ್ರೇಮಾಕಾರಂತರಿಗೆ ಸಂಪಾದಕೀಯದಲ್ಲೇ ಪತ್ರ ಬರೆದರು.[31]

ಗುಲ್ವಾಡಿಯವರ ಅಧ್ಯಯನಶೀಲ ಸಂಪಾದಕೀಯಕ್ಕೆ ಉತ್ತಮ ಉದಾಹರಣೆ ಹಿಂದಿನ ಬಾಗಿಲಿನಿಂದ ಹೇರಲಾಗುತ್ತಿರುವ ಹಿಂದಿಎಂಬ ಶೀರ್ಷಿಕೆಯಡಿ ಬರೆದ ಸಂಪಾದಕೀಯ. ಅದು ಹೀಗಿದೆ: ಭಾರತದ ಇತ್ತೀಚಿನ ಭಾಷೆಗಳಲ್ಲಿ ಹಿಂದಿ ತುಂಬ ಸುಂದರ. ಅದು ಸಂಪರ್ಕ ಭಾಷೆಯಾಗಬೇಕು ಎಮಬ ಪ್ರಯತ್ನವೂ ನಡೆದಿದೆ. ಆದರೆ ಇದನ್ನು ಜನರ ಮೇಲೆ ಹೇರುವ ರೀತಿ ಮಾತ್ರ ಸರಿಯಲ್ಲ.

ಭಾರತದಲ್ಲಿ ಹಿಂದಿ ಮಾತನಾಡುವ ಜನರು ಒಟ್ಟು 28 ಶೇಕಡಾ ಮಾತ್ರ. ಉಳಿದ ಶೇಕಡಾ 72 ಮಂದಿಗೆ ಹಿಂದಿ ಸರಿಯಾಗಿ ಅರ್ಥವಾಗುತ್ತಿಲ್ಲ. ಒಟ್ಟು ಜನಸಂಖ್ಯೆಯಲ್ಲಿಶೇಕಡಾ 6 ಮಂದಿಗೆ ಮಾತ್ರ ಹಿಂದಿ ಓದಲು-ಬರೆಯಲು ಬರುತ್ತದೆ(1971ರ ಜನಗಣತಿ ವರದಿ). ಕೆಲವು ರಾಜ್ಯಗಳಲ್ಲಿ 45 ಶೇಕಡಾ ಮಂದಿ ಹಿಂದಿಯಲ್ಲಿ ಮೇಲಿಂದ ಮೇಲೆ ವ್ಯವಹರಿಸಬಲ್ಲರು. ಲೋಕಸಭೆಯಲ್ಲಿ ಕೇಂದ್ರ ಸರಕಾರ ವರದಿ ಮಾಡಿದಂತೆ ಭಾರತದಲ್ಲಿ 1,000 ಮಂದಿ ಪತ್ರಿಕೆ ಓದುವವರಲ್ಲಿ 36 ಮಂದಿ ಮಲೆಯಾಳಂ, 21 ತಮಿಳು ಪತ್ರಿಕೆ ಓದಿದರೆ, ಹಿಂದಿ ಪತ್ರಿಕೆ ಓದುವ ಮಂದಿ ಆರು ಮಾತ್ರ! ಈ ಹಿನ್ನಲೆಯಲ್ಲಿ ಹಿಂದಿ ಸಂಪರ್ಕ ಭಾಷೆಯಾಗುವುದಕ್ಕೆ ಇನ್ನೂ ಕಾಲ ಬೇಕು. ಹಾಗಾದರೆ ಅದನ್ನು ಪ್ರತ್ಯಕ್ಷ-ಪರೋಕ್ಷವಾಗಿ ಜನಗಳ ಮೇಲೆ ಹೇರುವ ಒತ್ತಡವೇಕೆ?

ಭಾರತದಲ್ಲಿ 28 ಪ್ರಮುಖ ಭಾಷೆಗಳಿವೆ. ಸುಮಾರು 800 ಭಾಷೆಗಳಿವೆ. ಎಂಥ ಸಮೃದ್ಧಿ! ಜಗತ್ತಿನ ಯಾವ ದೇಶದಲ್ಲೂ ಇಲ್ಲದ ಅದ್ಭುತ ಸೃಷ್ಟಿ. ಈ ಅಭಿಮಾನದ ಬದಲು ಭಾಷೆಯ ಹೆಸರಲ್ಲಿ ನಾವು ಹುಚ್ಚುನಾಯಿಗಳಂತೆ ಕಚ್ಚಾಡುತ್ತಿದ್ದೇವೆ. ಪರಸ್ಪರ ಒಬ್ಬರನ್ನೊಬ್ಬರು ಹೆಚ್ಚು ಹೆಚ್ಚು ತಿಳಿದುಕೊಳ್ಳಲು ಉಪಯೋಗಿಸಬೇಕಾದ ಭಾಷೆಗಳನ್ನು ನಾವು ಹೋರಾಟದಅಸ್ತ್ರವನ್ನಾಗಿ ಮಾಡಿಕೊಂಡಿದ್ದೇವೆ. ಪ್ರಜೆಗಳಲ್ಲಿ ಅಂತರವನ್ನು ತಂದು ಭೇದಭಾವ ಹುಟ್ಟಿಸಲು ರಾಜಕಾರಣಿಗಳು, ಭಾಷಾಂಧರು ಇವುಗಳನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ.

ಭಾರತದಲ್ಲಿ ಹಿಂದಿ ಸಹಿತ 14 ಭಾಷೆಗಳೂ ರಾಷ್ಟ್ರಭಾಷೆಗಳೇ. ಎಲ್ಲಾ ಭಾಷೆಗಳಿಗೂ ಸಂವಿಧಾನದನ್ವಯ ಸಮಾನ ಸ್ಥಾನ. ಹಾಗಾದರೆ ಹಿಂದಿಗೆ ಮಾತ್ರ ವಿಶೇಷ ಪ್ರೋತ್ಸಾಹ, ಆದ್ಯತೆಗಳೇಕೆ?...[32] ಹೀಗೆ ಬರೆದ ಸಂಪಾದಕೀಯಗಳಲ್ಲಿ ಇಂತಹ ವಿಶ್ಲೇಷಣೆಗಳನ್ನು ಸಾಮಾನ್ಯವಾಗಿ ಕಾಣಬಹುದಾಗಿದೆ. ತಂತ್ರಜ್ಞಾನ ಇನ್ನೂ ಪತ್ರಿಕಾಲಯಗಳಿಗೆ ಪ್ರವೇಶಿಸಿದ ಸಂದರ್ಭದಲ್ಲೂ ಗುಲ್ವಾಡಿ ಹೀಗೆ ಮಾಹಿತಿ ಕಲೆಹಾಕಿದ್ದನ್ನು ಗಮನಿಸಿದರೆ ಅಚ್ಚರಿ ಎನಿಸುತ್ತದೆ. ಸಂಗೀತ, ಕಾದಂಬರಿ, ಕಥೆ, ಕವಿಗಳು, ಲೇಖಕರು, ಕನ್ನಡ ಭಾಷೆ, ಸಾಹಿತ್ಯ ಸಮ್ಮೇಳನಗಳು, ಸಿನಿಮಾ ಹೀಗೆ ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಗುಲ್ವಾಡಿ ಬರೆಯದ ವಿಷಯಗಳಿಲ್ಲ.

ಗುಲ್ವಾಡಿಯವರಿಗೆ ಸಂಗೀತವೆಂದರೆ ಪ್ರಾಣ. ಲೇಖನಗಳಲ್ಲಿ ಮಾತ್ರವಲ್ಲ ತಮ್ಮ ಸಂಪಾದಕೀಗಳಲ್ಲೂ ಸಂಗೀತದ ಬಗ್ಗೆ ಬರಿಯುತ್ತಿದ್ದರು. ಸಂಗೀತ ಮೋಕ್ಷದಾಯಕ, ವಿಕಾರ, ಚಂಚಲ ಸ್ಥಿತಿಯ ಮನಸ್ಸನ್ನು ತಿಳಿಯಾಗಿ ಮಾಡಬಲ್ಲಂಥ ಶಕ್ತಿಯುಳ್ಳದ್ದು. ಅತ್ಯಂತ ಮೇಲಿನ ಸ್ತರದಲ್ಲಿ ಜ್ಞಾನಿಗಳು ಈ ಆನಂದವನ್ನೇ ನಾದಬ್ರಹ್ಮ ಅನುಭವ ಎಂದರು. ಸಂಗೀತ ಎಂಬುದು ಪ್ರಕೃತಿಯಿಂದಲೇ ಪಡೆದ ಅಮೃತ. ನಮ್ಮೊಳಗೇ ಇರುವ ಸಂಜೀವಿನಿ... 1990–ಅಂದರೆ ಇಪ್ಪತ್ತನೆಯ ಶತಮಾನದ ಕೊನೆಯ ದಶಮಾನದ ಮೊದಲನೆಯ ವರ್ಷ. ಇದನ್ನು ತರಂಗ ಸಂಗೀತಕ್ಕಾಗಿ ಮುಡಿಪಾಗಿಡುತ್ತದೆ. ಬದುಕೇ ಸಂಗಿತವಾಗಬೇಕು. ಕಲೆಗಳಲ್ಲಿ ಪರಮಕಲೆ ಜೀವನಕಲೆಯಾಗಬೇಕು ಎಂಬ ದೃಷ್ಟಿಯಲ್ಲಿ ಹೂರಣವನ್ನು ರೂಪಿಸುತ್ತೇವೆ.[33] ಎಂದು ಬರೆದರು ಮತ್ತು ತರಂಗದ ಮೂಲಕ ಅದನ್ನು ಕಾರ್ಯರೂಪಕ್ಕೂ ತಂದರು.

ಸಾಹಿತಿ ಚದುರಂಗ ಮಂಡ್ಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಸಂದರ್ಭದಲ್ಲಿ ಅವರ ದೈತ್ಯ ಪ್ರತಿಭೆಯನ್ನು ತಮ್ಮ ಸಂಪಾದಕೀಯದ ಮೂಲಕ ಓದುಗರ ಮುಂದಿಟ್ಟರು.[34] Atlas of the world's languages ಲಂಡನ್‌ನಿಂದ ಪ್ರಕಟವಾದ 15,000 ಬೆಲೆಬಾಳುವ ಪುಸ್ತಕದ ಬೆಲೆ, ಸಂಪಾದಕರು, ಪ್ರಕಾಶಕರು ಸೇರಿದಂತೆ ಪುಸ್ತಕದ ಸಾರಾಂಶವನ್ನೂ ಗುಲ್ವಾಡಿ ಭಾಷಾಲೋಕದಲ್ಲಿ ಭೂಕಂಪ ಎಂಬ ಶೀರ್ಷಿಕೆಯಡಿ ಬರೆದಿದ್ದಾರೆ.[35]

ಸೂತ್‌ಬಿ ಜಗತ್ತಿನಲ್ಲೇ ಕಲಾಕೃತಿಗಳ ವಿಖ್ಯಾತ ಮಾರಾಟಗಾರರು. ಅವರು ನ್ಯೂಯಾರ್ಕ್‌ನಲ್ಲಿ ನಡೆಸಿದ ವಿಶೇಷ ಮಾರಾಟದಲ್ಲಿ ಭಾರತದ ಕಲಾವಿದ ಹುಸೇನ್‌ರ ಚಿತ್ರಕಲೆಗಳು ಎಷ್ಟು ಬೆಲೆಗೆ ಮಾರಾಟವಾದವು, ಭಾರತೀಯ ಚಿತ್ರಕಲೆಗಳಿಗಿರುವ ಗೌರವ ಇವೆಲ್ಲವನ್ನೂ ಹೇಳುವ ಜೊತೆಗೆ ಎಂ.ಎಫ್.ಹುಸೇನರ ವ್ಯಕ್ತಿಚಿತ್ರಣವನ್ನು ತಮ್ಮ ಸಂಪಾದಕೀಯದಲ್ಲಿ– ಭಾರತೀಯ ಚಿತ್ರಕಲಾ ಪ್ರಪಂಚದ ನವರಸಾಭಿನಯ– ಕೊಟ್ಟಿದ್ದಾರೆ.[36] ಬಹುಶಃ ಹುಸೇನರು ತೀರಿಕೊಂಡಾಗಲೂ ಯಾವ ಪತ್ರಿಕೆಯೂ ಇಷ್ಟು ಒಳ್ಳೆಯ ವ್ಯಕ್ತಿಚಿತ್ರಣ ಕೊಟ್ಟಿರಲಿಲ್ಲ. ಅಂತಹದ್ದನ್ನು ಗುಲ್ವಾಡಿ 1995ರಲ್ಲೇ ಮಾಡಿದರು.

ಗುಲ್ವಾಡಿಯವರ ಸಂಪಾದಕೀಯಗಳ ಬಗ್ಗೆ ಗಮನಿಸಿದಾಗ ಹೇಳಲೇಬೇಕಾದ ಮತ್ತೊಂದು ವಿಷಯವೆಂದರೆ 1995ರ ಆದಿಯಲ್ಲಿ ಅವರು ಭಾರತೀಯ ಸಿನೆಮಾ ಇತಿಹಾಸದ ಬಗೆಗೆ ಬರೆದ ಸಂಪಾದಕೀಯಗಳು. 1895ರಿಂದ 1995 ರ ವರೆಗಿನ ನೂರು ವರ್ಷಗಳ ಸಿನಿಮಾ ಇತಿಹಾಸವನ್ನು ಗುಲ್ವಾಡಿ ಬರೆದದ್ದು ಇಂದಿನ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಒಂದು ಅದ್ಭುತ ಅಧ್ಯಯನ ಮೂಲವಾಗುವುದರಲ್ಲಿ ಸಂದೇಹವಿಲ್ಲ. ನಾಲ್ಕು ಭಾಗಗಳಲ್ಲಿ ಒಂದು ತಿಂಗಳ ಕಾಲ ನಿರಂತರವಾಗಿ ತನ್ನ ಸಂಪಾದಕೀಯದಲ್ಲಿ ಗುಲ್ವಾಡಿ ಸಿನಿಮಾ ಇತಿಹಾಸವನ್ನು ತೆರೆದಿಟ್ಟಿದ್ದಾರೆ.[37] ಭಾರತಕ್ಕೆ ಸಿನಿಮಾ ಬಂದ ಬಗೆ, ಮೊದಲು ಬಂದ ಸಿನಿಮಾಗಳು, ಟಾಕಿಗಳು, ಮೂಕಿ ಚಿತ್ರಗಳ ಬಗ್ಗೆ ಆಳವಾದ 36 ಅಧ್ಯಯನಭರಿತ ಸಂಪಾದಕೀಯಗಳನ್ನು ಬರೆದರು. ಅದರೊಂದಿಗೆ ಚಿತ್ರರಂಗದ ಹೆಗ್ಗುರುತು ಮತ್ತು ಹೆಸರಾಂತ ನಿರ್ದೇಶಕರ ಬಗೆಗೂ ವಿಮರ್ಶಾತ್ಮಕ ಬರಹಗಳು ಸಂಪಾದಕೀಯಗಳಾದವು.

ಶ್ರೀಮದ್ಭಾಗವತ ಕೃತಿಯ ಬಗ್ಗೆ ಗುಲ್ವಾಡಿ ಬರೆದ ಸಂಪಾದಕೀಯ ಅವರಿಗೆ ವೇದ, ಪುರಾಣಗಳ ಬಗೆಗೂ ಇದ್ದ ಆಸಕ್ತಿಗೆ ಸಾಕ್ಷಿಯಾಗುತ್ತವೆ. ಅದು ಕೇವಲ ವಿವರಣೆಯಾಗಿರದೆ ಶ್ರೀಮದ್ಭಾಗವತವನ್ನು ಓದದ, ರಾಮಾಯಣ, ಮಹಾಭಾರಗಳನ್ನು ಓದದೆ, ಓದಿಯೂ ಅರ್ಥವಾಗದವರಿಗೆ ಒಂದು ಮಾರ್ಗಸೂಚಿಯಂತೆ ಇದ್ದದ್ದು ವಿಶೇಷ. ಆ ಸಂಪಾದಕೀಯದ ಗಹನ ಚರ್ಚೆಗಳನ್ನು ಅರ್ಥಮಾಡಿಕೊಳ್ಳಲು ಅದರ ಕೆಲವು ಸಾಲುಗಳನ್ನು ಉಲ್ಲೇಖಿಸುವುದು ಅಗತ್ಯ. ಗಾತ್ರದಲ್ಲಿ ರಾಮಾಯಣ ಮಹಾಕಾವ್ಯವು ಏಳು ಕಾಂಡಗಳಲ್ಲಿ 645 ಸರ್ಗಗಳಿಂದ ಕೂಡಿದೆ. ಇತಿಹಾಸವೆನಿಸಿದ ಮಹಾಭಾರತದ 18 ಪರ್ವಗಳಲ್ಲಿ ಸುಮಾರು ಒಂದು ಲಕ್ಷ ಶ್ಲೋಕಗಳಿವೆ. ಅದು ಜಗತ್ತಿನ ಅತ್ಯಂತ

ಬೃಹತ್ ಗ್ರಂಥ. ಶ್ರೀಮದ್ಭಾಗವತದಲ್ಲಿ 12 ಸ್ಕಂದಗಳಿವೆ. ಶ್ಲೋಕ ಸಂಖ್ಯೆ ಸುಮಾರು 18 ಸಾವಿರ. ಹತ್ತನೆಯ ಸ್ಕಂಧವು ಪೂರ್ವಾರ್ಧ-ಉತ್ತರಾರ್ಧ ಎಂದು ಎರಡು ಭಾಗಗಳಿದ್ದು 12ನೆಯ ಸ್ಕಂಧ ಚಿಕ್ಕದಿದೆ. ಭಗವದ್ಗೀತೆಯ ಬಳಿಕ ಇಷ್ಟು ಸರ್ವಮಾನ್ಯ ಗ್ರಂಥ ಬೇರೊಂದಿಲ್ಲ.[38] ಹೀಗೆ ವಿಷಯದ ಎಳೆಎಳೆಯನ್ನೂ ಗುಲ್ವಾಡಿ ತಮ್ಮ ಸಂಪಾದಕೀಯಗಳಲ್ಲಿ ಬಿಚ್ಚಿಟ್ಟಿದ್ದರು.

ಸುಖೀದಾಂಪತ್ಯದ ಸ್ವಾರಸ್ಯ ಎಂಬ ಶೀರ್ಷಿಕೆಯ ಸಂಪಾದಕೀಯದಲ್ಲಿ ದೃಷ್ಟಾಂತವಾಗಿ ಭಾರತದ ಪ್ರಸಿದ್ಧ ದಂಪತಿಗಳಾದ ಸುಬ್ಬುಲಕ್ಷ್ಮೀ ಮತ್ತು ಟಿ.ಸದಾಶಿವಂ ಅವರ ಬದುಕನ್ನು ನಿರೂಪಿಸಿ ದಾಂಪತ್ಯದ ಸ್ವಾರಸ್ಯವನ್ನು ವಿವರಿಸಿದ್ದಾರೆ. ಶತಪಥಬ್ರಾಹ್ಮಣ, ಮನುಸ್ಮತಿ, ಮಹಾಭಾರತದಿಂದ ಆಯ್ದ ವಾಕ್ಯಗಳನ್ನು ಪ್ರಸ್ತುತೀಕರಿಸಿದ್ದಾರೆ. ಕೊನೆಗೆ, ಅಜ್ಞಾನ, ಪರಕೀಯ ಪ್ರಭಾವ, ದಾಸ್ಯಭಾವ, ಅಭಿಮಾನ ಶೂನ್ಯತೆ, ಆಲಸ್ಯ ಹಾಗೂ ಇತರ ಕಾರಣಗಳಿಂದ ದಾಂಪತ್ಯದ ಸೊಗಸು ಸುಖಗಳನ್ನು ನಾವು ಕಳೆದುಕೊಳ್ಳುತ್ತಿದ್ದೇವೆ ಎಂಬ ಸಕಾಲಿಕ ಸತ್ಯ ಹೇಳಿ ಗುಲ್ವಾಡಿ ಮುಗಿಸಿದ್ದಾರೆ. ಅಂದರೆ ಸಾಹಿತ್ಯ, ಸಂಸ್ಕೃತಿ, ವೇದ, ಪುರಾಣಗಳಲ್ಲದೆ, ಜೀವನದ ಸೂಕ್ಷ್ಮತೆಗಳ ಬಗೆಗೂ ಗುಲ್ವಾಡಿ ಗಂಭೀರ ಆರೋಪ ಮತ್ತು ವಿಶ್ಲೇಷಣೆಗಳನ್ನು ಮಾಡಿದ್ದಾರೆ. ಅದರೊಂದಿಗೆ ಮಾರ್ಗದರ್ಶನವನ್ನೂ ನೀಡಿದ್ದಾರೆ.

ಉಸ್ತಾದ್ ಝಾಕಿರ್ ಹುಸೇನ್ ಕುರಿತಾದ ಸಂಪಾದಕೀಯದಲ್ಲಿ ತಬಲಾ ಮೋಡಿ, ಝಾಕೀರರ ಚಿರಂತನ ನಗುವಿನ ನುಡಿ, ಮುನಿಸಿನ ಕಿಡಿ, ನವರಸಗಳ ಮುಖಭಾವ, ತಂತ್ರಜ್ಞಾನದ ನೈಪುಣ್ಯ, ಶ್ರುತಿಯ ಕರಾರುವಾಕ್ಕು ಜ್ಞಾನ, ಸಭಾಮರ್ಯಾದೆಯ ಸಭ್ಯತನ, ಅಪ್ಪಟ ಕಲಾವಿದನ ವಿನಯ, ಕಠಿಣವಾದುದನ್ನೂ ನಗುನಗುತ್ತಾ ಅನಾಯಾಸಕರ ಎಂದು ಪುಂಖಾನುಪುಂಖವಾಗಿ, ಹೊಸಹೊಸ ಬಾಣಗಳನ್ನು ಎಸೆಯುವಂತೆ....[39] ಹೀಗೆ ಶಬ್ಧ ಭಂಡಾರವನ್ನೆಲ್ಲಾ ಗುಲ್ವಾಡಿ ಉಪಯೋಗಿಸುವ ಪರಿ ಅವರ ಭಾಷಾ ಸೌಂದರ್ಯಕ್ಕೆ ನಿದರ್ಶನ.

ಅಂತರಂಗ-ಬಹಿರಂಗ ಅದ್ಯಯನಪೂರ್ಣ, ಅನುಭವಪೂರ್ಣ, ವಿಷಯಗಳ ಆಯ್ಕೆ, ಸಾದರಪಡಿಸುವ ಜಾಣ್ಮೆ ವಿಶಿಷ್ಟ, ಇದು ಕಿರೀಟ, ತುರಾಯಿ.[40] ಹೀಗೆ ಗುಲ್ವಾಡಿ ಸಂಪಾದಕೀಯಗಳ ಬಗ್ಗೆ ಹೇಳಿದವರು ಹೆಸರಾಂತ ಸಾಹಿತಿ ಗೌರೀಶ ಕಾಯ್ಕಿಣಿ.

ಭಾಷೆ, ಆಳವಾದ ಅಧ್ಯಯನ, ವಿಶ್ಲೇಷಣಾತ್ಮಕ ಬರಹ, ಅನುಭವಜನ್ಯ ಮಾತು, ಸರಳ ಪ್ರಸ್ತುತಿ ಇವುಗಳು ಗುಲ್ವಾಡಿ ಸಂಪಾದಕೀಯಗಳನ್ನು ಇಂದಿಗೂ ಪಸ್ತುತವಾಗಿ ಮಾಡುತ್ತವೆ. ರಾಜಕೀಯ ವಿಢಂಬನೆ, ಸಾಮಾಜಿಕ ಸಂಗತಿಗಳ ಅದ್ಯಯನಗಳ ಜೊತೆಗೆ ಮಾಧ್ಯಮದ ವೈಖರಿಗಳನ್ನೂ ಖಂಡಿಸುತ್ತಾ ಬಂದಿದ್ದ ಗುಲ್ವಾಡಿ ಪ್ರಸಾರದ ಜೊತೆಜೊತೆಗೆ ತರಂಗದಲ್ಲಿ ಆರೋಗ್ಯಕರ ಬರಹಗಳ ಪ್ರಸ್ತುತಿಗೆ ಹೆಚ್ಚು ಅವಕಾಶ ಕೊಟ್ಟದ್ದು ವಿಶೇಷ. ಕೆಲವೊಂದೆಡೆ ಅತಿ ಗಂಭೀರ ಮತ್ತು ವಿಮರ್ಶೆಗಳೇ ಹೆಚ್ಚು ಎಂದು ಅನ್ನಿಸಿದರೂ ಅವೆಲ್ಲವೂ ಸತ್ಯಕ್ಕೆ ಹತ್ತಿರವಾದ ಬರಹಗಳು ಎಂಬುವುದು ನಿರ್ವಿವಾದ

**ಆಕರಗಳು**


1) ಗುಲ್ವಾಡಿ-50- ಪುಟ 51, ಕಯ್ಯಾರ ಕಿಞ್ಞಣ್ಣ ರೈ, ಪ್ರಕಾಶಕರು-ಗುಲ್ವಾಡಿ ಅಭಿನಂದನಾ ಸಮಿತಿ

2) ಅಂತರಂಗ ಬಹಿರಂಗ-ಸಂಪುಟ 1-ಪುಟ 7(ಸಂತೋಷ ಕುಮಾರ ಗುಲ್ವಾಡಿ-ಪೀಠಿಕೆಯಲ್ಲಿ)

3) ನವಂಬರ್ 28, 1982ರ ತರಂಗದ ಮೊದಲನೆಯ ಪ್ರಾಯೋಗಿಕ ಸಂಚಿಕೆ

4) ತರಂಗದ ಮೊದಲ ಸಂಚಿಕೆ ಜನವರಿ 2, 1983

5) ತರಂಗ ಜನವರಿ 5, 1986ರ ಸಂಚಿಕೆ

6) ಅಂತರಂಗ-ಬಹಿರಂಗದ 1ನೇ ಸಂಪುಟ- ಎನ್ಕೆ ಕುಲಕರ್ಣಿ ಅಭಿಪ್ರಾಯ

7) ಆಸ್ಟ್ರೋ ಮೋಹನ್(ಫೋಟೋ ಜರ್ನಲಿಸ್ಟ್) ಉದಯವಾಣಿ ಪತ್ರಿಕೆ ಮತ್ತು ತರಂಗ. (ಸಂದರ್ಶನ-21-07-2012)
8) 1983, ಜನವರಿ 16ರ ಸಂಚಿಕೆಯ ಸಂಪಾದಕೀಯ
9) 1983 ಫೆಬ್ರುವರಿ 13ರ ಸಂಚಿಕೆಯ ಸಂಪಾದಕೀಯ
10) 1983, ಮಾರ್ಚ್ 6ರ ತರಂಗ ಸಂಚಿಕೆ ಸಂಪಾದಕೀಯ
11) 1983, ಏಪ್ರಿಲ್ 3ರ ಸಂಚಿಕೆ
12) 1983, ಜೂನ್ 12ರ ಸಂಚಿಕೆ.
13) 1983, ಜುಲೈ 31ರ ಸಂಚಿಕೆ.
14) 1984 ಏಪ್ರಿಲ್ 8ರ ತರಂಗ ಸಂಪಾದಕೀಯ
15) 1984, ಜುಲೈ 22ರ ಸಂಚಿಕೆ.
16) 1984, ಸೆಪ್ಟೆಂಬರ್ 16 ಸಂಚಿಕೆ ಸಂಪಾದಕೀಯ
17) ಸೆ.23 1984ನೇ ಸಂಚಿಕೆ ಸಂಪಾದಕೀಯ
18) ಆಸ್ಟ್ರೋ ಮೋಹನ್ ಸಂದರ್ಶನ (21-07-2012)
19) ಹುರುಪಿನ ಹೆಜ್ಜೆಗಳು-ಜನವರಿ 27, 1985 ಸಂಚಿಕೆ(ಸಂಪಾದಕೀಯ)
20) 1987-ಮಾರ್ಚ್ ಸಂಚಿಕೆ ಸಂಪಾದಕೀಯ.
21) 1986 ಫೆಬ್ರವರಿ ಸಂಚಿಕೆ ಸಂಪಾದಕೀಯ
22) 1988, ಫೆಬ್ರವರಿ 7ರ ಸಂಚಿಕೆ ಸಂಪಾದಕೀಯ
23) 1993, ಮೇ 30ರ ಸಂಚಿಕೆ.
24) ಅಂತರಂಗ-ಬಹಿರಂಗ -ಸಂಪುಟ 4
25) ಅಂತರಂಗ-ಬಹಿರಂಗ ಸಂಪುಟ 5
26) ಅಂತರಂಗ-ಬಹಿರಂಗ ಸಂಪುಟ 6
27) ಅಂತರಂಗ-ಬಹಿರಂಗ ಸಂಪುಟ 6, ಪುಟ-131
28) ಅಂತರಂಗ-ಬಹಿರಂಗ ಸಂಪುಟ 7. ಪುಟ-127
29) ಅಂತರಂಗ ಬಹಿರಂಗ ಸಂಪುಟ 1. ಪುಟ 12(ಮುನ್ನುಡಿಯಿಂದ)
30) 1983ರ ಫೆಬ್ರವರಿ 27ರ ಸಂಚಿಕೆ.
31) 1983ರಮಾರ್ಚ್, ಮೇ ಸಂಚಿಕೆಗಳು.
32) 1983 ಮೇ 29ರ ಸಂಚಿಕೆ.
33) 1990 ಜನವರಿ 7ರ ಸಂಚಿಕೆ ಸಂಪಾದಕೀಯ.
34) 1994 ಫೆಬ್ರವರಿ ಸಂಚಿಕೆ.
35) 1994 ರ ಮಾರ್ಚ್ ಸಂಚಿಕೆ
36) 1995 ಸೆಪ್ಟೆಂಬರ್ ಸಂಚಿಕೆ
37) ಅಂತರಂಗ-ಬಹಿರಂಗ ಸಂಪುಟ 5
38) ಅಂತರಂಗ-ಬಹಿರಂಗ ಸಂಪುಟ 6
39) ಅಂತರಂಗ-ಬಹಿರಂಗ ಸಂಪುಟ 7
40) ಅಮತರಂಗ ಬಹಿರಂಗ ಸಂಪುಟ 8( ಬೆನ್ನುಡಿಯಿಂದ)




# ಸೆಕ್ಯುಲರಿಸಮ್ಮಿನ ಪರಿಕಲ್ಪನೆ : ಭಾರತೀಯ, ಪಾಶ್ಚಾತ್ಯ ಹಾಗೂ ಸಂವಿಧಾನದ ದೃಷ್ಟಿಯಲ್ಲಿ

**ಪ್ರೊ. ಆರ್.ಎಲ್.ಎಂ. ಪಾಟೀಲ್**
ನಂ. 1105, 41ನೇ ಕ್ರಾಸ್
ಪೂರ್ಣಪ್ರಜ್ಞಲೇಔಟ್, ಉತ್ತರಹಳ್ಳಿ, ಬೆಂಗಳೂರು – 61

ಕ್ರಿಶ್ಚಿಯನ್ ಬದುಕಿನ ಎಲ್ಲಾ ವಿಚಾರಗಳಲ್ಲೂ ಹಸ್ತಕ್ಷೇಪ ಮಾಡುತ್ತಿದ್ದ ಚರ್ಚಿನ ಯಜಮಾನಿಕೆಗೆ ಪ್ರತಿಭಟನೆಯಾಗಿ ಮಧ್ಯಯುಗೀನ ಯುರೋಪಿನಲ್ಲಿ ಸೆಕ್ಯುಲರಿಸಮ್ ಪರಿಕಲ್ಪನೆ ಹುಟ್ಟಿಕೊಂಡಿತು. ಇಟಲಿಯ ಪ್ರಸಿದ್ಧ ಕವಿ ಡಾಂಟೆ ಸುಮಾರು ಕ್ರಿ.ಶ. 1320ರಲ್ಲಿ ಸೆಕ್ಯುಲರ್ ಚಳವಳಿಗೆ ಒಂದು ತಾತ್ವಿಕ ಸ್ವರೂಪವನ್ನು ನೀಡಿದ. ಡಾಂಟೆಯು ಚರ್ಚ್‌ನ್ನು 'ರಾಜ್ಯ'ದಿಂದ ಪ್ರತ್ಯೇಕಿಸಿದ್ದಷ್ಟೇ ಅಲ್ಲ; ಥಿಯಾಲಜಿ ಮತ್ತು ತತ್ತ್ವಶಾಸ್ತ್ರಗಳನ್ನೂ ಪ್ರತ್ಯೇಕಗೊಳಿಸಿದನು. ಅಷ್ಟೇ ಅಲ್ಲ ತತ್ತ್ವಶಾಸ್ತ್ರವನ್ನು ಥಿಯಾಲಜಿಗಿಂತ ಮೇಲಿನ ಸ್ಥಾನದಲ್ಲಿ ಇಟ್ಟನು. ತತ್ತ್ವಶಾಸ್ತ್ರವು ವೈಚಾರಿಕತೆ ಮತ್ತು ವಿಜ್ಞಾನವನ್ನು ಆಧರಿಸಬೇಕಾದುದು ಎಂಬುದು ಅವನ ನಿಲುವಾಗಿತ್ತು. ಹೀಗೆ ಪೋಪರ ಕೆಂಗಣ್ಣಿಗೆ ಗುರಿಯಾದ ಡಾಂಟೆಯ ಪುಸ್ತಕವನ್ನಷ್ಟೇ ಅಲ್ಲ, ಸ್ವತಃ ಅವನನ್ನೂ ಜೀವಂತ ಸುಡುವಂತೆ 1329ರಲ್ಲಿ ಆದೇಶಿಸಲಾಯಿತು.

ಮಾರ್ಸಿಲಿಯೋ (1275 – 1343) ಕೂಡ ಸೆಕ್ಯುಲರ್ ಬದುಕಿನಲ್ಲಿ ಚರ್ಚ್ ಮಧ್ಯಪ್ರವೇಶ ಮಾಡಬಾರದು ಎಂಬ ವಾದವನ್ನು ಮುಂದಿಟ್ಟನು. ಈ ಪ್ರತಿರೋಧದ ಬೆಳವಣಿಗೆಯೇ ಮುಂದೆ, ಪ್ರಾಟೆಸ್ಟೆಂಟ್ ಸುಧಾರಣೆಗಳಿಗೆ ಹಾಗೂ ಯುರೋಪಿನ ರಿನ್ನಾಸೆನ್ಸ್‌ಗೆ ಕಾರಣವಾಯಿತು. ನೊಕೊಲೋ ಮಾಚಿವೆಲ್ಲಿ ಮತ್ತು ಥಾಮಸ್ ಹಾಬ್ಸ್ ಇವರ ಮೂಲಕ ಚರ್ಚ್ ಮತ್ತು ರಾಜ್ಯ ಪೂರ್ಣವಾಗಿ ಪ್ರತ್ಯೇಕಗೊಂಡವು. ಆ ಮೂಲಕ ಉದಯಿಸಿದ್ದೇ ಸೆಕ್ಯುಲರ್ ಆದಂಥ ಸಾರ್ವಭೌಮ ರಾಜ್ಯ.

ಯುರೋಪಿನ ರಿನ್ಯಾಸೆನ್ಸ್ ಎಂಬುದರಲ್ಲಿ ಅಂಥ ಹೊಸತೇನೂ ಇರಲಿಲ್ಲ. ಅದು ಪ್ರಾಚೀನ ಗ್ರೀಕ್ ತತ್ತ್ವಜ್ಞಾನ ಹಾಗೂ ಗ್ರಹಿಕೆಗಳ ಮರುಶೋಧನೆಯಾಗಿತ್ತು.

ಯುರೋಪಿನ 1300 – 1500ರ ಅವಧಿಯ ಸೆಕ್ಯುಲರ್ ಚಳುವಳಿಯು ನೆಹರೂ ಆಡಳಿತದ ಭಾರತಕ್ಕೆ 1950ರ ದಶಕದಲ್ಲಿ ಹಠಾತ್ತಾಗಿ ಪ್ರವೇಶಿಸಿತು. ಈ ಹೊಸ ಆಲೋಚನೆಯ ಸಂಪೂರ್ಣ ಪರಿಜ್ಞಾನ ನೆಹರೂ ಅವರೂ ಸೇರಿದಂತೆ ಬಹುಶಃ ಯಾರಿಗೂ ಇರಲಿಲ್ಲ. ನೆಹರೂ ಅವರು ಒಂದು ಆಧುನಿಕ ರಾಷ್ಟ್ರವನ್ನು ಕಟ್ಟಬೇಕೆಂಬ ಉಮೇದಿನಲ್ಲಿದ್ದರು. ದೇವರನ್ನು ಸ್ಥಳಾಂತರಗೊಳಿಸಿ ಅಲ್ಲಿ ವೈಚಾರಿಕತೆ ಮತ್ತು ವಿಜ್ಞಾನವನ್ನು ತಂದು ನಿಲ್ಲಿಸುವುದು ಅವರ ಉದ್ದೇಶವಾಗಿತ್ತು. ಆದರೆ ಧಾರ್ಮಿಕ ಅಲ್ಪಸಂಖ್ಯಾತರಿಗೆ 'ರಾಜ್ಯ'ವು ಯಾವುದೇ ರೀತಿಯಲ್ಲಿ ತೊಂದರೆ ಕೊಡಬಾರದು ಎಂಬಷ್ಟಕ್ಕೆ ಅವರು ಸೆಕ್ಯುಲರಿಸಮ್ಮಿನ ಅರ್ಥವನ್ನು ಸೀಮಿತಗೊಳಿಸಿದರು. ಈ ರಾಜಕೀಯ ತಂತ್ರ ಚುನಾವಣೆ ದೃಷ್ಟಿಯಿಂದ ಲಾಭಕರವಾಗಿತ್ತು.

ಬ್ರಿಟೀಷರು ಭಾರತಕ್ಕೆ ಬರುವ ಹಲವು ವರ್ಷಗಳ ಪೂರ್ವದಲ್ಲಿಯೇ ಸುಧಾರಣಾವಾದಿಗಳ ಪರಂಪರೆಯೇ ಇಲ್ಲಿತ್ತು. ಬಸವಣ್ಣ, ನಾನಕ್, ಕಬೀರ್, ಆಳ್ವಾರರು ಇತ್ಯಾದಿ ಸಾಮಾಜಿಕವಾಗಿ, ಧಾರ್ಮಿಕವಾಗಿ ಇದ್ದ ಅಸಮಾನತೆಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಶ್ರಮಿಸಿದ ಸಂತರು ಹಾಗೂ ತತ್ತ್ವಜ್ಞಾನಿಗಳನ್ನು ಹೆಚ್ಚು ಕಡಿಮೆ ಇಡೀ ಭಾರತದಲ್ಲಿ ಕಾಣುತ್ತೇವೆ. ಈ ಪ್ರಯತ್ನಗಳಲ್ಲಿ ಯಾರೂ ಸೆಕ್ಯುಲರಿಸಂ ಎಂದು ಇಂದು ನಾವು ಕರೆಯುವ ರೀತಿಯ ಪರಿಕಲ್ಪನೆಯನ್ನು ಬಳಸಲಿಲ್ಲ. ಹೊಸ ಜಾಗೃತಿಯನ್ನು ಮೂಡಿಸಲು 'ಧರ್ಮ'ವನ್ನೇ ಅವರು ಬಳಸಿದರು. ಮಾನವ ಪ್ರೇಮ, ಸಮಾನತೆ ಹಾಗೂ ವೈಚಾರಿಕತೆಗಳಿಗೆ ಪ್ರಾಮುಖ್ಯ ನೀಡಿದರು. ಆ ನಂತರದ ಚಳವಳಿಗಳಾದ ಬ್ರಹ್ಮಸಮಾಜ, ಪ್ರಾರ್ಥನಾ ಸಮಾಜ, ಆರ್ಯಸಮಾಜ, ದಕ್ಷಿಣದ ಸ್ವಾಭಿಮಾನ ಚಳವಳಿ ಇವೆಲ್ಲ ಭಾರತೀಯ ಮನೋಭಾವದಲ್ಲೇ ಬೇರುಬಿಟ್ಟಿದ್ದವು ಮತ್ತು ಅವುಗಳು 'ಧರ್ಮ' ಎನ್ನುವ ನೈತಿಕ ಮಾನದಂಡಗಳಿಗೆ ಅನುಸಾರವಾಗಿಯೇ ಇದ್ದವು. ಹಿಂದೂ – ಮುಸ್ಲಿಂ ಬಂಧುತ್ವಕ್ಕೆ ಗಾಂಧೀಜಿ ನೀಡಿದ್ದ ಪ್ರಾಧಾನ್ಯವೂ ಇದಕ್ಕೆ ಅನುಸಾರವಾಗಿಯೇ ಇತ್ತು. 'ಸರ್ವಧರ್ಮ ಸಮಭಾವ' ಅಥವಾ ''ಎಲ್ಲ ಧರ್ಮಗಳನ್ನೂ ಗೌರವಿಸಬೇಕು'' ಎಂಬುದು ಗಾಂಧೀಜಿಯವರ ಕರೆಯಾಗಿತ್ತು. ಇದನ್ನು ಭಾರತೀಯ ಜನಸಮುದಾಯವೂ ಒಪ್ಪಿತ್ತು.

'ಸೆಕ್ಯುಲರ್' ಎಂಬುದನ್ನು ಭಾರತದ ವಿಶಿಷ್ಟ ಲಕ್ಷಣವಾಗಿಸಬೇಕು ಎಂದು ಅಂಬೇಡ್ಕರ್ ಮತ್ತು ನೆಹರೂ ಸಹ ಒತ್ತಾಯಿಸಲಿಲ್ಲ. ಯಾಕೆಂದರೆ ಬಹುಶಃ ದೇಶದ ಜನರು ಹಾಗೂ ಸಂವಿಧಾನ ಸಮಿತಿ ಸದಸ್ಯರು ಅದನ್ನು ಒಪ್ಪಲಾರರು ಎಂದು ಅವರು ಭಾವಿಸಿದ್ದರು. ಗಾಂಧೀಜಿಯ ಮರಣದ ನಂತರವಷ್ಟೇ ಕಾಂಗ್ರೆಸಿನ, ನೆಹರೂ ಅವರ ಹಾಗೂ ಕಮ್ಯೂನಿಸ್ಟರ ಪದಕೋಶದಲ್ಲಿ 'ಸೆಕ್ಯುಲರ್' ಎಂಬ ಪದವು ಸೇರಿಕೊಳ್ಳಲಾರಂಭಿಸಿತು.

ಯುರೋಪಿನಲ್ಲಿ ಸೆಕ್ಯುಲರಿಸಂ ಮೊದಲು ಕಾಣಿಸಿಕೊಂಡ ಕಾಲಕ್ಕೆ ರಾಜ್ಯಾಧಿಕಾರದಲ್ಲಿ ಚರ್ಚಿನ ಹಸ್ತಕ್ಷೇಪದ ವಿರುದ್ಧವಾಗಿ ಅದು ಬಂದುದು. ಆದರೆ ನೆಹರೂ ಅವರ ಭಾರತದಲ್ಲಿ ಅದು ಮತ್ತೆ ತಲೆಯೆತ್ತಿದುದು ಹಿಂದೂ – ಮುಸ್ಲಿಂ ಸಂಘರ್ಷದ ಹಿನ್ನೆಲೆಯಲ್ಲಿ; ರಾಜ್ಯವು ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಬಾರದು ಎಂಬ ನೆಲೆಯಲ್ಲಿ. ಅಷ್ಟೇ ಅಲ್ಲ; ಮುಸ್ಲಿಂ ಅಲ್ಪಸಂಖ್ಯಾತರಿಗೆ ಹಿಂದೂ ಬಹುಸಂಖ್ಯಾತರಿಂದ ರಕ್ಷಣೆ ನೀಡುವುದು ರಾಜ್ಯದ ಜವಾಬ್ದಾರಿ ಎಂಬಲ್ಲಿಗೆ ಈ ಸೆಕ್ಯುಲರಿಸಮ್ಮಿನ ಪರಿಕಲ್ಪನೆಯನ್ನು ಎಳೆಯಲಾಯಿತು. ಮುಸ್ಲಿಂ, ಕ್ರೈಸ್ತ ಹಾಗೂ ಪಾರ್ಸಿ ಸಮುದಾಯಗಳ ವೈಯಕ್ತಿಕ ಕಾನೂನುಗಳೇ ಆಯಾ ಸಮುದಾಯಗಳಿಗೆ ಅನ್ವಯವಾಗುವಂತೆ ಮಾಡಲಾಯಿತು. ಸಮಾನ

ನಾಗರಿಕ ಸಂಹಿತೆಯನ್ನು ಅಳವಡಿಸಿಕೊಳ್ಳಬೇಕೆಂದು ಸಂವಿಧಾನವು ಒತ್ತಿಹೇಳಿದ್ದರೂ ಈ ಧಾರ್ಮಿಕ ಅಲ್ಪಸಂಖ್ಯಾತರ ವೈಯಕ್ತಿಕ ಕಾನೂನುಗಳಿಗೆ ಅದು ಅನ್ವಯವಾಗಲಿಲ್ಲ.

ಭಾರತೀಯ ಸಂದರ್ಭದಲ್ಲಿ ಸೆಕ್ಯುಲರ್ ಎಂಬ ಪರಿಕಲ್ಪನೆಯು 'ಕೋಮುವಾದ ರಹಿತ' ಹಾಗೂ 'ಜಾತಿ ಆಧಾರಿತ ತಾರತಮ್ಯ ರಹಿತ' ಎಂಬರ್ಥದಲ್ಲಿಯೂ ಬಳಕೆಯಾಯಿತು. ಇದೂ ಕೂಡ ಯುರೋಪಿನ ಮೂಲ ಅರ್ಥಕ್ಕೆ ಸಂಬಂಧವಿಲ್ಲದ್ದು. ಗ್ರಾನ್‌ವಿಲ್ ಆಸ್ಟಿನ್ ಎಂಬವರು ಬರೆಯುವ ಪ್ರಕಾರ, ''ನೆಹರೂ ಅವರು 'ಕೋಮುವಾದ'ಕ್ಕೆ ನೀಡುವ ವ್ಯಾಖ್ಯೆ ಹಾಗೂ ಅದರ ಪರಿಹಾರಕ್ಕಾಗಿ ತರುವ 'ಸೆಕ್ಯುಲರಿಸಮ್' ವ್ಯಾಖ್ಯೆ ಇವುಗಳು ಇಂದು ಪರಿಹಾರಗಳಿಗಿಂತ ಹೆಚ್ಚಾಗಿ ಸಮಸ್ಯೆಗಳನ್ನೇ ಸೃಷ್ಟಿಸಿವೆ''. ನೆಹರೂ ಅವರು 'ಪ್ರಿಯ ಕಾಮ್ರೇಡ್‌ಗಳಿಗೆ' ಅಂದರೆ, ಕಾಂಗ್ರೆಸ್ ನಾಯಕರಿಗೆ ಬರೆದ ಆರು ಪುಟಗಳ ಒಂದು ಕಾಗದದ ಹಿನ್ನೆಲೆಯಲ್ಲಿ ಆಸ್ಟಿನ್ ಈ ಟಿಪ್ಪಣಿಯನ್ನು ನೀಡುತ್ತಾರೆ. ಆ ಪತ್ರದಲ್ಲಿ ನೆಹರೂ ಹೇಳಿದ ಪ್ರಕಾರ, 'ಜಾತಿಗಳಿಂದ ಕೂಡಿದ ಸಮಾಜ ಸರಿಯಾದ ಅರ್ಥದಲ್ಲಿ ಸೆಕ್ಯುಲರ್ ಸಮಾಜ ಆಗಲಾರದು' (ಪು. 557 – 558, ಗ್ರಾನ್‌ವಿಲ್ ಆಸ್ಟಿನ್, ವರ್ಕಿಂಗ್ ಎ ಡೆಮಾಕ್ರಟಿಕ್ ಕನ್‌ಸ್ಟಿಟ್ಯೂಶನ್, ಒ.ಯು.ಪಿ., 2000).

ಆಸ್ಟಿನ್ ಸೂಚಿಸುವಂತೆ, ನೆಹರೂ ಅವರು 'ರಾಷ್ಟ್ರೀಯ ಸಮಗ್ರತೆ' ಎಂಬ ಪದಪುಂಜವನ್ನು ಬಳಸಬಹುದಿತ್ತು. ಆದರೆ ನೆಹರೂ ಅವರಿಗೆ 'ಸೆಕ್ಯುಲರ್' ಎಂಬುದು ಎರಡೂ ಬದಿ ಬಾಯಿಯಿರುವ ಖಡ್ಗವೆಂದು ತಿಳಿದಿತ್ತು. ಯಾಕೆಂದರೆ ಅದರಿಂದ ಅವರು ಒಂದು ನೆಲೆಯಲ್ಲಿ ಬೌದ್ಧಿಕ ಆಧುನಿಕತೆಯ ವಕ್ತಾರರು ಎನಿಸಿಕೊಳ್ಳಲು ಸಾಧ್ಯವಾಯಿತು. ಇನ್ನೊಂದೆಡೆಯಲ್ಲಿ, ಅವರನ್ನು ವಿರೋಧಿಸಿದವರು, 'ಸೆಕ್ಯುಲರ್'ಗೆ ವಿರುದ್ಧವಾಗಿ ಕೋಮುವಾದಿಗಳು, ಪ್ರತಿಗಾಮಿಗಳು ಎಂಬ ಬಣ್ಣ ಬಳಿಯಲ್ಪಟ್ಟರು. ಇದು ನೆಹರೂ ಅವರಿಗೇ ವಿಶಿಷ್ಟವಾದ ರಾಜಕೀಯ ಚಾಣಾಕ್ಷತೆಯಾಗಿತ್ತು.

ಸೆಕ್ಯೂಲರಿಸಂಗೆ ಸಂಬಂಧಿಸಿದಂತೆ, ಗಾಂಧಿ ಮತ್ತು ನೆಹರೂ ಮಧ್ಯದ ಹೆಚ್ಚು ಮೂಲಭೂತವಾದ ವ್ಯತ್ಯಾಸ ಇದು : ಗಾಂಧಿಯವರು ಧರ್ಮ ಮತ್ತು ರಾಜಕೀಯ ಇವುಗಳ ಒಂದು ಸಮಗ್ರ ದೃಷ್ಟಿಯ ಕಡೆಗೆ ಒತ್ತು ನೀಡಿದರೆ, ನೆಹರೂ ಅವರು ರಾಷ್ಟ್ರ ನಿರ್ಮಾಣದಲ್ಲಿ ಧರ್ಮದ ಬಳಕೆಯ ಬಗ್ಗೆ ತಿರಸ್ಕಾರ ಹೊಂದಿದ್ದರು. ಧರ್ಮದ ಹೊರತಾದ ರಾಜಕೀಯವು ಕೊಳಕು ಎಂದು ಗಾಂಧಿ ನಂಬಿದ್ದರು. ಅವರಿಗೆ ಧರ್ಮ ಎಂದರೆ ಆಚರಣೆಯಾಗಿರಲಿಲ್ಲ. ಧರ್ಮವೆಂದರೆ ಒಂದು ನೈತಿಕ ಸಂಹಿತೆ ಹಾಗೂ ಮನುಕುಲದ ಸೇವೆಯಾಗಿತ್ತು. ನೆಹರೂ ಹಾಗೂ ಅವರ ಸಹಯೋಗಿಗಳ ದೃಷ್ಟಿಯಲ್ಲಿ ಸೆಕ್ಯುಲರಿಸಂ ಎಂದರೆ, ರಾಜಕಾರಣವನ್ನು ಧರ್ಮದಿಂದ ಪ್ರತ್ಯೇಕಗೊಳಿಸುವುದಾಗಿತ್ತು.

ಮುಖ್ಯ ಪ್ರಶ್ನೆ ಎಂದರೆ, ರಾಜಕೀಯವನ್ನು ಧರ್ಮದಿಂದ ನಿಜವಾಗಿಯೂ ಪ್ರತ್ಯೇಕಗೊಳಿಸಲು ಸಾಧ್ಯವೇ? ಎಂಬುದು. ರಾಜಕೀಯ ಎಂದರೆ, ಕಾನೂನುಗಳ ಮೂಲಕ ರಾಜ್ಯದ ಅಧಿಕಾರ ಎಂದು ಇಟ್ಟುಕೊಂಡರೆ, ಈ ಕಾನೂನುಗಳು ಅಥವಾ ರಾಜಕೀಯದಿಂದ ಧಾರ್ಮಿಕ ನಂಬಿಕೆಗಳನ್ನು ಹೊರಗಿಡಲು ಸಾಧ್ಯವೇ? ಕ್ಷುಲ್ಲಕ ಎಂದು ಕಾಣಬಹುದಾದ ಎಷ್ಟು ಸಂಗತಿಗಳು ಕೂಡ ಧಾರ್ಮಿಕ ಸಂಹಿತೆಗಳ ಆಧಾರದಲ್ಲಿ ನಡೆಯುವುದಿಲ್ಲ? ಆಹಾರ, ವೇಷಭೂಷಣ, ಮದುವೆ, ವಿಚ್ಛೇದನ, ಆಸ್ತಿ, ವಾರಸುದಾರಿಕೆ ಇತ್ಯಾದಿ ಸಂಗತಿಗಳು ಕೂಡ ಧಾರ್ಮಿಕ ವಿಧಿನಿಷೇಧಗಳನ್ನು ಅವಲಂಬಿಸಿವೆ.

ವಿವಿಧ ಧರ್ಮಗಳು ತಮ್ಮ ಅನುಯಾಯಿಗಳಿಗೆ ವಿಧಿಸುವ ಸತ್ಯ, ಸರಳತೆ, ದಯೆ, ತ್ಯಾಗ ಇತ್ಯಾದಿ ನೈತಿಕ ಬಾಧ್ಯತೆಗಳು ಕೂಡ ಗಮನಾರ್ಹ. ರಾಷ್ಟ್ರೀಯ ಸಮುದಾಯವನ್ನು ರೂಪಿಸುವಲ್ಲಿ ಇವುಗಳು ಯಾವ ಪಾತ್ರಗಳನ್ನೂ ನಿರ್ವಹಿಸುವುದಿಲ್ಲವೇ? ಭಾರತದಲ್ಲಿ ಸೆಕ್ಯುಲರಿಸಂ ಪ್ರತಿಕೂಲ ಪರಿಸ್ಥಿತಿಯನ್ನು ನಿರ್ಮಿಸಿದೆಯೇ? ಪ್ರೀತಿ, ತ್ಯಾಗ, ಸಮಾನತೆ ಇತ್ಯಾದಿ ಮೌಲ್ಯಗಳನ್ನು ಪ್ರಧಾನವಾಗಿ

ಹೊಂದಿದ ಒಂದು ಧಾರ್ಮಿಕ ಹಾದಿ ದೈವರಹಿತ ಸೆಕ್ಯುಲರ್ ಹಾದಿಗಿಂತ ಹೆಚ್ಚು ಉಪಯುಕ್ತವಾಗುತ್ತಿರಲಿಲ್ಲವೆ?

ಈ ವಿಚಾರಕ್ಕೆ ಸಂಬಂಧಿಸಿದಂತೆ, 'all things to all men' ಎಂಬಂತೆ ಸಂವಿಧಾನವು ನೀಡಿರುವ ಅವಕಾಶದಿಂದಾಗಿ ಗೊಂದಲಗಳು, ವೈರುಧ್ಯಗಳು, ವ್ಯಾಜ್ಯಗಳು ಉಂಟಾಗುತ್ತಿವೆ. (ಸ್ಪಷ್ಟಚಿತ್ರಣಕ್ಕಾಗಿ ಪ್ರತಿಯೊಂದಕ್ಕೂ ಸರ್ವೋಚ್ಚನ್ಯಾಯಾಲಯಕ್ಕೆ ಹೋಗಬೇಕಾಗುತ್ತದೆ). ಅಂಬೇಡ್ಕರ್ ಸಂವಿಧಾನದಲ್ಲಿ 'ಸೆಕ್ಯುಲರಿಸಂ' ಎಂಬುದನ್ನು ಉಲ್ಲೇಖಿಸಿರಲಿಲ್ಲ. 1976ರಲ್ಲಿ ಇಂದಿರಾ ಗಾಂಧಿಯವರ ಕಾಲದಲ್ಲಿ 'ಸೆಕ್ಯುಲರ್' ಎಂಬುದನ್ನು ಸಂವಿಧಾನದ ಪ್ರಸ್ತಾವನೆಯಲ್ಲಿ ಸೇರಿಸಲಾಯಿತು. ಆದರೆ ಈ ಪ್ರಸ್ತಾವನೆಯನ್ನು ನೋಡಿದರೆ ಸಂವಿಧಾನದ ನಿರ್ಮಾತೃಗಳು 1949ರಲ್ಲಿಯೇ ಈ ಪದವನ್ನು ಸೇರಿಸಿದ್ದಂತೆ ಕಾಣಿಸಲಾಗಿದೆ.

ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ ಸಂವಿಧಾನವು ಹೇಳುತ್ತದೆ : ಬಹುಸಂಖ್ಯಾತರ ಹಕ್ಕುಗಳ ಬಗ್ಗೆ ಏನು ಹೇಳುತ್ತದೆ? ಭಾರತದಲ್ಲಿ ಬಹುಸಂಖ್ಯಾತರು ಎಂದರೆ ಯಾರು? ಹಿಂದು ಎಂಬುದಕ್ಕೆ ಸಂವಿಧಾನವಾಗಲೀ, ಕಾನೂನುಗಳಾಗಲೀ, ಸುಪ್ರೀಂಕೋರ್ಟು ಆಗಲೀ ಸ್ಪಷ್ಟವಾಗಿ ವ್ಯಾಖ್ಯೆಯನ್ನು ನೀಡಿಲ್ಲ. ನಾಗಾಲ್ಯಾಂಡ್ ಮತ್ತು ಕಾಶ್ಮೀರದಲ್ಲಿ ಹಿಂದೂಗಳು ಅಲ್ಪಸಂಖ್ಯಾತರೇ? ಕಳೆದ ಇಪ್ಪತ್ತು ಅಥವಾ ಇನ್ನೂರು ವರ್ಷಗಳಿಂದ ಬೆಂಗಳೂರಿನಲ್ಲಿ ಇದ್ದುಕೊಂಡು ತೆಲುಗು ಮಾತೃಭಾಷೆಯನ್ನು ಹೊಂದಿದವರು ಕರ್ನಾಟಕದಲ್ಲಿ ಅಲ್ಪಸಂಖ್ಯಾತರೇ?

ಹೀಗೆಲ್ಲ ಇರುವಾಗ, ಸೆಕ್ಯುಲರಿಸಮ್ಮಿಗೆ ಸಂಬಂಧಿಸಿದಂತೆ ನಮ್ಮ ಸಂವಿಧಾನದ ನಿಲುವನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಧರ್ಮ ಅಥವಾ ಸೆಕ್ಯುಲರಿಸಮ್ಮಿಗೆ ಸಂಬಂಧಿಸಿದಂತೆ, ಸಂವಿಧಾನವು ಸ್ಪಷ್ಟವಾದ ಏಕರೂಪದ ಹೇಳಿಕೆಗಳನ್ನು ಹೊಂದಿಲ್ಲ. ಬದಲಾಗಿ ಪರಸ್ಪರ ಹೊಂದಿಕೆಯಾಗದ ಅಂಶಗಳನ್ನು ಹೊಂದಿದೆ ಎಂಬ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ. ಇದರಿಂದ ಒಂದು ಉದ್ದೇಶವಂತೂ ಈಡೇರುತ್ತದೆ. ಯಾಕೆಂದರೆ, ರಾಜಕೀಯ ವಿಚಾರಗಳಿಗೆ ಸಂಬಂಧಿಸಿದಂತೆ ಸ್ಪಷ್ಟತೆಗಿಂತ ಗೊಂದಲವೇ ಹೆಚ್ಚು ಉಪಯುಕ್ತವಾದುದು.

(ಇಂಗ್ಲಿಷಿನಿಂದ ಕನ್ನಡಕ್ಕೆ : ಅಜಕ್ಕಳ)

ಮನ್ನಣೆಯ ಕಾಲದಲಿ
ಮುನ್ನಿನ ಸ್ಥಿತಿಯನು ಮರೆಯೆ
ಸಣ್ಣವನೆ ತಾನವನು ಎಲ್ಲರೊಳಗೂ



# ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಅನಂತಭೋಗೀಶ್ವರ ಶಬ್ದದ ಅರ್ಥ ಮತ್ತು ಪ್ರಯೋಗ : ಕಿರು ವಿಮರ್ಶೆ


**ಎಸ್.ಕಾರ್ತಿಕ್**
65, 1 ನೆಯ ಮಹಡಿ, 3 ನೆಯ ಅಡ್ಡರಸ್ತೆ
ಶಿಕ್ಷಕರ ಬಡಾವಣೆ, 1 ನೆಯ ಹಂತ, ಜೆ.ಪಿ.ನಗರ ಅಂಚೆ, ಬೆಂಗಳೂರು-78


ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ದಾಖಲಾಗಿರುವ ಕೆಲವು ಶಬ್ದಾರ್ಥಗಳು ಮತ್ತು ಪ್ರಯೋಗಗಳ ಬಗೆಗೆ ಪುನರ್ ವಿಮರ್ಶೆಯ ಅಗತ್ಯವಿದ್ದು ಅಂತಹ ಶಬ್ದಾರ್ಥಗಳು ಹಾಗೂ ಪ್ರಯೋಗಗಳಲ್ಲಿ ಅನಂತಭೋಗೀಶ್ವರ ಎಂಬ ಶಬ್ದದ ದಾಖಲಾತಿ, ಅರ್ಥ, ಪ್ರಯೋಗ ಕೂಡ ಒಂದಾಗಿದೆ. ಇದರ ಬಗೆಗೆ ವಿಶ್ಲೇಷಿಸುವುದೇ ಪ್ರಕೃತ ಲೇಖನದ ಉದ್ದೇಶವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಇದು ಕೆಳಗಿನಂತೆ ದಾಖಲಾಗಿದೆ.[1]

ಅನಂತಭೋಗೀಶ್ವರ (ನಾ). ಸರ್ಪರಾಜ; ಆದಿಶೇಷ: ಅನಂತಭೋಗೀಶ್ವರನಾ ದೇವಕಿಯ ಗರ್ಭದೊಳ್ ಜನಿಯಿಸಿದಂ (ಜಗನ್ನಾಥ ವಿಜಯಂ. 2-60) ಅನಂತ + ಭೋಗ + ಈಶ್ವರ

ಮೇಲಿನ ದಾಖಲಾತಿಯನ್ನು ಡಾ || ಬಿ.ಬಿ. ರಾಜಪುರೋಹಿತರು ತಮ್ಮ ಬರಹವೊಂದರಲ್ಲಿ ವಿಮರ್ಶಿಸುತ್ತಾ ಕನ್ನಡ ನಿಘಂಟಿನಲ್ಲಿ ಅನಂತ ಭೋಗೀಶ್ವರ ಅಂದರೆ ಆದಿಶೇಷ ಎಂಬ ಅರ್ಥವನ್ನು ಕೊಟ್ಟಿದ್ದಾರೆ. ಅನಂತ + ಭೋಗ + ಈಶ್ವರ ಎಂದು ಅದರ ವಿಗ್ರಹ ಸೂಚಿಸಿದ್ದಾರೆ. ಅಂದರೆ ಅನೇಕ ಹೆಡೆಗಳ ಒಡೆಯ ಅಂದರೆ ಆದಿಶೇಷ ಎಂದು ಅರ್ಥಮಾಡಿದಂತಿದೆ. ಸಂಸ್ಕೃತ ಸಮಸ್ತಪದಗಳ ವಿಗ್ರಹ ನಿಯಮದಂತೆ ಅನಂತಭೋಗವುಳ್ಳವನು ಆದಿಶೇಷ; ಅವನ ಒಡೆಯ ಅಂದರೆ ವಿಷ್ಣು ಎಂದಾಗುತ್ತದೆ. ಈ ಅರ್ಥ ನಿಘಂಟಿನಲ್ಲಿ ಉದ್ಧರಿಸಿದ ಪ್ರಯೋಗಕ್ಕೂ ಸರಿ ಹೊಂದುತ್ತದೆ. ಅನಂತಭೋಗೀಶ್ವರನಾ ದೇವಕಿಯ ಗರ್ಭದೊಳ್ ಜನಿಯಿಸಿದಂ ಎಂಬ ಜಗನ್ನಾಥ ವಿಜಯದ ಸಾಲಿನಿಂದ ವಿಷ್ಣುವು ದೇವಕಿಯ ಗರ್ಭದಲ್ಲಿ ಕೃಷ್ಣನಾಗಿ ಜನಿಸಿದ ಎಂಬ ಅರ್ಥ ಬರುತ್ತದೆ. ಆದುದರಿಂದ ಅನಂತಭೋಗೀಶ್ವರ ಅಂದರೆ ವಿಷ್ಣು ಎಂಬರ್ಥವೇ ಸರಿಯಾದುದು. ಆದಿಶೇಷನು ವಸುದೇವನ ಇನ್ನೊಬ್ಬ ಹೆಂಡತಿಯಾದ ರೋಹಿಣಿಯ

ಗರ್ಭದಲ್ಲಿ ಬಲದೇವನಾಗಿ ಜನಿಸಿದನೇ ಹೊರತು ದೇವಕಿಯ ಗರ್ಭದಲ್ಲಿ ಅಲ್ಲ. ನಿಘಂಟಿನ ಪರಿಷ್ಕರಣ ಕಾರ್ಯವನ್ನು ಎತ್ತಿಕೊಂಡಾಗ ಇಂಥ ತಪ್ಪುಗಳನ್ನು ಸರಿಪಡಿಸಬಹುದು ಎಂದು ಬರೆದಿರುತ್ತಾರೆ.[2]

ಬಿ.ಬಿ. ರಾಜಪುರೋಹಿತರ ಮೇಲ್ಕಂಡ ಅಭಿಪ್ರಾಯವನ್ನು ವಿಮರ್ಶಿಸುವ ಮೊದಲು ರುದ್ರಭಟ್ಟನ (ಕ್ರಿ.ಶ. ಸು 1185) ಜಗನ್ನಾಥ ವಿಜಯದ ಪ್ರಯೋಗವನ್ನು ಗಮನಿಸಬಹುದಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಸಂದರ್ಭ ತಿಳಿದು ಬರುವಂತೆ ಪೂರ್ಣ ಪ್ರಯೋಗ ದಾಖಲಾಗಿಲ್ಲ. ಕಥಾಸಂದರ್ಭವೂ ಇದರಿಂದ ತಿಳಿಯುವುದಿಲ್ಲ. ಇದರಿಂದಾಗಿ ಈ ದಾಖಲಾತಿಯ ಬಗೆಗೆ ಗೊಂದಲವುಂಟಾಗಲು ಆಸ್ಪದ ವಾಗಿದೆ. ಈ ಕಾರಣದಿಂದ ಸಮಗ್ರ ಕಥಾಸಂದರ್ಭ ತಿಳಿಯುವಂತೆ ಪೂರ್ಣಪ್ರಯೋಗವನ್ನು ಮತ್ತು ಅದರ ಗದ್ಯಾನುವಾದವನ್ನು ಕೆಳಗೆ ನೀಡಲಾಗಿದೆ.[3]

ಕಂದ ಪದ್ಯ ॥ ಧರೆಗವತರಿಸುವ ಲಕ್ಷ್ಮೀ
ವರನವತಾರಕ್ಕೆ ಪೀಠಿಕಾಪ್ರಕರಣದಂ
ತಿರೆ ಬಂದನಂತಭೋಗೀ
ಶ್ವರನಾ ದೇವಕಿಯ ಗರ್ಭದೊಳ್ ಜನಿಯಿಸಿದಂ ॥2-60॥

ಭೂಮಿಗವತರಿಸುವ ಲಕ್ಷ್ಮೀಪತಿಯ ಅವತಾರಕ್ಕೆ ಪೀಠಿಕಾ ಪ್ರಕರಣದಂತೆ ಆದಿಶೇಷನು ಬಂದು ದೇವಕಿಯ ಗರ್ಭದಲ್ಲಿ ಜನಿಯಿಸಿದ

ವಚನ॥ ಅಂತನಂತನನಂತಶಯನನಾಜ್ಞೆಯಿಂ ಬಂದು ದೇವಕಿಯ ಗರ್ಭದೊಳ್ ನೆಲಸೆ ಕತಿಪಯಮಾಸಂಗಳ್ಗೆ
ಹಾಗೆ ಅನಂತನು ಅನಂತಶಯನನ ಆಜ್ಞೆಯಿಂದ ಬಂದು ದೇವಕಿಯ ಗರ್ಭದಲ್ಲಿ ನೆಲೆಸಲು ಕೆಲವು ತಿಂಗಳುಗಳಿಗೆ

ಮತ್ತೇಭವಿಕ್ರೀಡಿತ ॥ ವನಜಾಕ್ಷಂ ಬೆಸವೇಳ್ದುದಂ ನೆನೆದು ಮಾಯಾದೇವಿ ಬಂದೆಯ್ದೆ ಕಂ
ಸನ ಮಾಟ್ಪೊಂದಪಚಾರದಿಂದಿೞಿದುದಿಂದೀ ದೇವಕೀಗರ್ಭಮೆಂ
ಬಿನಮಾದೇವಿಯ ಗರ್ಭದರ್ಭಕನನತ್ತಲ್ ಗೋಕುಲಕ್ಕುಯ್ದು ಮೋ
ಹನಸಾಮರ್ಥ್ಯದೆ ನಿಂದು ಯೋಜಿಸಿದಳಂತಾ ರೋಹಿಣೀಗರ್ಭದೊಳ್ ॥ 2-61 ॥

ಕಮಲಾಕ್ಷನು ಆಜ್ಞಾಪಿಸಿದುದನ್ನು ನೆನೆದು ಮಾಯಾದೇವಿಯು ಬಂದು, ಕಂಸನು ಮಾಡಿದ ಅತ್ಯಪಚಾರ ದಿಂದ ಈ ದೇವಕಿಯ ಗರ್ಭವು ಇಳಿದುಹೋಯಿತೆನ್ನುವಂತೆ ಗರ್ಭದ ಶಿಶುವನ್ನು ತೆಗೆದೆತ್ತಿಕೊಂಡು ಅತ್ತ ಗೋಕುಲಕ್ಕೆ ಹೋಗಿ ಮೋಹನ ಸಾಮರ್ಥ್ಯದಿಂದ ನಿಂತು, ಆ ರೋಹಿಣಿಯ ಗರ್ಭದಲ್ಲಿ ಸೇರಿಸಿದಳು

ಜಗನ್ನಾಥ ವಿಜಯದ ಮೇಲ್ಕಂಡ ಕಥಾಭಾಗದ ಪ್ರಕಾರ ಜನಿಯಿಸಿದ ಎಂಬುದನ್ನು ದೇವಕಿಯ ಗರ್ಭದಲ್ಲಿ ನೆಲಸಿದ ಎಂದು ಅರ್ಥ ಮಾಡಬೇಕು. ಆದಿಶೇಷನು ಮೊದಲು ದೇವಕಿಯ ಗರ್ಭದಲ್ಲಿ ನೆಲೆಸಿದನು. ಅನಂತರ ಮಾಯಾದೇವಿಯು ಆತನನ್ನು ರೋಹಿಣಿಯ ಗರ್ಭಕ್ಕೆ ಸ್ಥಳಾಂತರಿಸಿದಳು. ಜಗನ್ನಾಥ ವಿಜಯಕ್ಕೆ ಆಕರವಾಗಿರುವ ಶ್ರೀ ಭಾಗವತ ಮಹಾಪುರಾಣದಲ್ಲಿಯೂ ಈ ಕಥಾನಕವೇ ಇದೆ.[4] ಇವುಗಳನ್ನು ಗಮನಿಸಿ ಅನಂತಭೋಗೀಶ್ವರ ಎಂದರೆ ಆದಿಶೇಷ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಅರ್ಥೈಸಿರುವುದು ಸಮರ್ಥನೀಯವೇ ಆಗಿದೆ. ಆದರೆ ಅನಂತ + ಭೋಗ + ಈಶ್ವರ ಎಂದು ಸಂಧಿ ಬಿಡಿಸಲಾಗಿದೆ. ಇದನ್ನು ಒಪ್ಪಿಕೊಂಡರೆ ಅನಂತಭೋಗೇಶ್ವರ ಎಂದು ಶಬ್ದರೂಪವಿರಬೇಕು. ಇದು ಗುಣಸಂಧಿಯಾಗುತ್ತದೆ. ಈ ಶಬ್ದ ಜಗನ್ನಾಥ ವಿಜಯದ ಕಥಾಸಂದರ್ಭಕ್ಕೆ ಹೊಂದುವುದಿಲ್ಲವಾಗಿ ಸಮರ್ಥನೀಯವಲ್ಲ. ಜಗನ್ನಾಥ ವಿಜಯದಲ್ಲಿ ಸ್ಪಷ್ಟವಾಗಿ ಅನಂತಭೋಗೀಶ್ವರ ಎಂದಿರುವುದರಿಂದ ಅನಂತ + ಭೋಗಿ + ಈಶ್ವರ ಎಂದು ಸಂಧಿಯನ್ನು ಬಿಡಿಸಬೇಕು. ಇದು ಸವರ್ಣ ದೀರ್ಘ ಸಂಧಿಯಾಗಿದೆ. ಭೋಗಿ ಎಂದರೆ ಹಾವು ಅಥವಾ ಸರ್ಪ ಎಂದರ್ಥ. ಸರ್ಪಗಳಿಗೆ ಒಡೆಯ

ಆದಿಶೇಷ. ಅನಂತನೆಂಬ ಹೆಸರನ್ನು ಹೊಂದಿರುವ, ಸರ್ಪಗಳಿಗೆ ಒಡೆಯನಾದ ಆದಿಶೇಷ ಎಂದು ಇದರ ಅರ್ಥ. ಆದರೆ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಸಂದರ್ಭ ತಿಳಿಯದಂತೆ ಪ್ರಯೋಗವನ್ನು ದಾಖಲಿಸಿರುವ ಕಾರಣ ಬಿ. ಬಿ. ರಾಜಪುರೋಹಿತರು ವಿಷ್ಣು ಎಂಬ ಅರ್ಥವೇ ಸರಿ ಎಂದು ಹೇಳಲು ಅವಕಾಶವಾಗಿದೆ ಹಾಗೂ ಅವರು ಪರಿಷತ್ತಿನ ನಿಘಂಟಿನಲ್ಲಿ ಸಂಧಿಯನ್ನು ತಪ್ಪಾಗಿ ಬಿಡಿಸಿರುವುದನ್ನು ಸಹ ಸರಿಯಾಗಿ ಗಮನಿಸಿಲ್ಲ. ಬಹುಶಃ ಈ ಗೊಂದಲವನ್ನು ಗಮನಿಸಿಯೇ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಕನ್ನಡ ಇಂಗ್ಲಿಷ್ ನಿಘಂಟಿನಲ್ಲಿ ಸಂದರ್ಭ ತಿಳಿದುಬರುವಂತೆ ಧರೆಗವತರಿಸುವ ಲಕ್ಷ್ಮೀವರನವತಾರಕ್ಕೆ ಪೀಠಿಕಾಪ್ರಕರಣದಂತಿರೆ ಬಂದನಂತ ಭೋಗೀಶ್ವರನಾ ದೇವಕಿಯ ಗರ್ಭದೊಳ್ ಜನಿಯಿಸಿದಂ ಎಂದು ಪೂರ್ಣಪ್ರಯೋಗವನ್ನು ನೀಡಲಾಗಿದೆ.[5] ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟನ್ನೇ ಸಂಶೋಧಕರು ಬಹುವಾಗಿ ಅವಲಂಬಿಸುತ್ತಿರುವುದರಿಂದಲೂ ಬೇರೆಡೆಯ ದಾಖಲಾತಿಯಲ್ಲಿಯೂ ದೋಷಗಳುಂಟಾಗಲು ಆಸ್ಪದವಾಗಿದೆ.[6] ಆದ ಕಾರಣ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಪರಿಷ್ಕೃತ ಆವೃತ್ತಿಯಲ್ಲಿ ಸಂದರ್ಭ ಸ್ಪಷ್ಟವಾಗಿ ತಿಳಿಯುವಂತೆ ಅನಂತಭೋಗೀಶ್ವರ ಶಬ್ದದ ಪ್ರಯೋಗವನ್ನು ಮತ್ತು ಅರ್ಥವನ್ನು ದಾಖಲಿಸಬೇಕಾಗಿದೆ.

**ಆಧಾರಸೂಚಿ ಮತ್ತು ಟಿಪ್ಪಣಿಗಳು**

1. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂಪುಟ–1, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–1970, ಪು. 220
2. ನಿಘಂಟು ರಚನೆ ಮತ್ತು ಭಾಷಾ ವಿಶ್ಲೇಷಣೆ– ಡಾ. ಬಿ.ಬಿ. ರಾಜಪುರೋಹಿತ, ಕ.ಸಾ.ಪ 87– 1 ರಿಂದ 4, ಜನವರಿ– ಡಿಸೆಂಬರ್ 2009, ಪುಟ 40; ವ್ಯಾ–ಸಾ–ನು–ಭಾ–ವ, ಬಂಡಾರ ಪ್ರಕಾಶನ, ಮಸ್ಕಿ, ರಾಯಚೂರು ಜಿಲ್ಲೆ–2009, ಪುಟ 109; ದ. ರಾ. ಬೇಂದ್ರೆ ಸಮಗ್ರ ಕಾವ್ಯ ನಿಘಂಟು, ಪ್ರಕಾಶಕರು : ಕೆ.ಎಸ್. ಶರ್ಮಾ, ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ, ಶ್ರೀ ಮಾತಾ ಪ್ರಕಾಶನ, ಅಂಬಿಕಾತನಯದತ್ತ ವೇದಿಕೆ, ಹುಬ್ಬಳ್ಳಿ–2010, ಪುಟ 31
3. (ಅ) ರುದ್ರಭಟ್ಟ ವಿರಚಿತ ಜಗನ್ನಾಥ ವಿಜಯಂ (ಸಂ) ಆರ್. ಶಾಮಶಾಸ್ತ್ರೀ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–1976, ಪುಟ 29
   (ಆ) ರುದ್ರಭಟ್ಟ ವಿರಚಿತ ಜಗನ್ನಾಥ ವಿಜಯಂ (ಸಂ) ಜಿ. ಜಿ. ಮಂಜುನಾಥನ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು–1996, ಪುಟ 26–27
   (ಇ) ರುದ್ರಭಟ್ಟ ವಿರಚಿತ ಜಗನ್ನಾಥ ವಿಜಯಂ (ಗದ್ಯಾನುವಾದಕರು ) ಎಂ.ಆರ್. ವರದಾಚಾರ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–1999, ಪುಟ 56
4. ಶ್ರೀ ಭಾಗವತ ಮಹಾಪುರಾಣ, ಸಂಪುಟ–6–(ಸಂಪಾದಕರು + ಕನ್ನಡ ವ್ಯಾಖ್ಯಾನಕಾರರು) ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿ, ಶ್ರೀ ವಿದ್ಯಾ ಗಣಪತಿ ಪ್ರಕಾಶನ, ತ್ಯಾಗರಾಜನಗರ, ಬೆಂಗಳೂರು–1995 (ಮರುಮುದ್ರಣ), ಹತ್ತನೆಯ ಸ್ಕಂಧ, ಎರಡನೆಯ ಅಧ್ಯಾಯ, ಪುಟ 17–20
5. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ–ಕನ್ನಡ–ಇಂಗ್ಲಿಷ್ ನಿಘಂಟು {Kannada Sahitya Parishat's Kannada-Kannada-English Dictionary} ಸಂಪುಟ–1, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು –2002, ಪುಟ 229 ಈ ನಿಘಂಟಿನಲ್ಲಿ ಶಬ್ದದ ಸಂಧಿಯನ್ನು ಬಿಡಿಸಿ ತೋರಿಸಿಲ್ಲ. ಇಂಗ್ಲಿಷಿನಲ್ಲಿ the snake king; Adishesha ಎಂದು ಸರಿಯಾದ ಅರ್ಥಗಳನ್ನು ದಾಖಲಿಸಲಾಗಿದೆ
6. ಪಿ.ವಿ. ನಾರಾಯಣ ಅವರು ತಮ್ಮ ಚಂಪೂ ನುಡಿಗನ್ನಡಿ ಎಂಬ ನಿಘಂಟಿನಲ್ಲಿ ಸಪ್ನ ಬುಕ್ ಹೌಸ್, ಬೆಂಗಳೂರು–2011, ಪುಟ 47
   ಅನಂತಭೋಗೀಶ್ವರ– ಆದಿಶೇಷ (ಅನಂತ ಭೋಗೀಶ್ವರಂ ಆ ದೇವಕಿಯ ಗರ್ಭದೊಳ್ ಜನಿಯಿಸಿದಂ : ಜಗನ್ನಾಥ ವಿಜಯ 2–60) ಎಂದು ದಾಖಲಿಸಿದ್ದಾರೆ. ಆದಿಶೇಷ ಎಂಬ ಅರ್ಥ ಮಾತ್ರ ಸರಿಯಾಗಿದ್ದು, ಪ್ರಯೋಗ ಬಹುಶಃ ಅಚ್ಚಿನ ಕಾರಣದಿಂದ ತಪ್ಪಾಗಿ ಮುದ್ರಿತವಾಗಿದೆ. ಆದರೂ ಸಂದರ್ಭ ತಿಳಿಯುವಂತೆ ಪೂರ್ಣ ಪ್ರಯೋಗ ದಾಖಲಿಸಬೇಕಿತ್ತು.



# ‘ಸಂಬೋಳಿ’ ಆತ್ಮಕಥನವನ್ನು ಕುರಿತು

**ಡಾ। ಕಾ. ವೆಂ. ಶ್ರೀನಿವಾಸಮೂರ್ತಿ**
ಕನ್ನಡ ಅಧ್ಯಯನ ವಿಭಾಗ
ಸ್ನಾತಕೋತ್ತರ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಕೋಲಾರ – 563 101

ಸಾಮಾನ್ಯವಾಗಿ ಎಲ್ಲ ದಲಿತ ಆತ್ಮಕಥನಗಳಲ್ಲಿ ಎರಡು ಮುಖ್ಯ ನೆಲೆಗಳಿರುತ್ತವೆ. ಅವು ಒಂದು – ಬಡತನ, ಇನ್ನೊಂದು – ಸಾಮಾಜಿಕ ಅಪಮಾನ. ಜಗತ್ತಿನ ಎಲ್ಲ ದೇಶಗಳ ಪೈಕಿ ಇದು ಮೇರಾ ಭಾರತ್ ಮಹಾನ್ ಎಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುವ ಉತ್ಸಾಹವನ್ನಿಟ್ಟುಕೊಂಡಿರುವ ದೇಶದ ಕೊಡುಗೆ. ಇಂತಹ ಎರಡು ನೆಲೆಗಳ ಅನಾವರಣವು ಮೊದಲ ತಲೆಮಾರಿನ ವಿದ್ಯಾವಂತ ವರ್ಗದಿಂದ ಆಗುತ್ತಿದೆ. ಇದು ಮರಾಠಿ ಭಾಷೆಯಲ್ಲಿ ಮೊದಲಿಗೆ ವಿಶೇಷವಾಗಿ ಕಾಣಿಸಿಕೊಂಡದ್ದು. ತದನಂತರದಲ್ಲಿ ಕನ್ನಡದಲ್ಲಿಯೂ ಕಾಣಿಸಿಕೊಳ್ಳುತ್ತಿದೆ. ಇದು ಕೇವಲ ವಿದ್ಯೆಯ ಪರಿಣಾಮವಲ್ಲ; ಜಾಗೃತಿ–ಹೋರಾಟಗಳ ಪರಿಣಾಮವೂ ಹೌದು.

ಇಂತಹ ಅನುಭವವು ಈ ಹಿಂದಿನ ತಲೆಮಾರುಗಳ ಸಮುದಾಯಗಳಿಗೆ ಸಾವಿರಾರು ವರ್ಷಗಳಿಂದ ಇದ್ದಿತಾದರೂ ಅಕ್ಷರ ವಂಚಿತರಾದ ಇವರಿಗೆ ಅದನ್ನು ಅಕ್ಷರದಲ್ಲಿ ಮೂಡಿಸುವುದು ಸಹಜವಾಗಿಯೇ ಅಸಾಧ್ಯವಾಯಿತು. ಈ ಹಿನ್ನೆಲೆಯಲ್ಲಿ ಕಳೆದ ನಾಲ್ಕು ದಶಕಗಳಿಂದ ವಿಶೇಷವಾಗಿ ಮೂಡುತ್ತಿರುವ ಈ ಸಾಹಿತ್ಯ ಪ್ರಕಾರವು ಸಮಕಾಲೀನ ದಲಿತ ಮತ್ತು ದಲಿತೇತರ ಜಗತ್ತುಗಳ ನಡುವಿನ ಬಿಕ್ಕಟ್ಟುಗಳನ್ನು ಅನೇಕ ಒಳನೋಟಗಳಿಂದ ಪ್ರಕಟಿಸುತ್ತಿದೆಯಲ್ಲದೆ ಈ ಹಿಂದಿನ ಇತಿಹಾಸದ ಬಗೆಗೂ ಗಾಢ ಬಿಸಿಯುಸಿರನ್ನು ಬಿಡುವಂತೆ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಇಂತಹ ಕಥನಗಳು ಸಮಕಾಲೀನ ಹಾಗೂ ಚಾರಿತ್ರಿಕ ಕಥನಗಳೂ ಆಗಿ ಗಮನಸೆಳೆಯುತ್ತವೆ.

ಪ್ರಸ್ತುತ ‘ಸಂಬೋಳಿ’ ಎಂಬುದು ಲಕ್ಷ್ಮಣ್ ಅವರ ಆತ್ಮಕಥನವಾಗಿದೆ. ಇವರು ಇಂದು ದಲಿತ ಲೇಖಕರಾಗಿ, ಹೋರಾಟಗಾರರಾಗಿ ಗಮನ ಸೆಳೆದಿದ್ದಾರೆ.

ಇವರು ಈವರೆಗಿನ ದಲಿತ ಆತ್ಮಕಥನಗಳಂತೆ ತಾವು ಬಾಲ್ಯದಿಂದಲೂ ಅನುಭವಿಸಿರುವ ಬಡತನ ಮತ್ತು ಸಾಮಾಜಿಕ ಅಪಮಾನವನ್ನು ಕಣ್ಣಿಗೆ ಕಟ್ಟುವಂತೆ ಇಲ್ಲಿ ಚಿತ್ರಿಸಿದ್ದಾರೆ. ಇದಕ್ಕಾಗಿ ಕೆಲವು ಎಪಿಸೋಡ್‌ಗಳನ್ನು ಇಲ್ಲಿ ಮೂಡಿಸಿದ್ದಾರೆ. ಈ ಒಂದೊಂದು ಎಪಿಸೋಡ್ ಸಣ್ಣಕತೆಯಂತೆ ಒಂದೊಂದು ನಿರ್ದಿಷ್ಟ ಕೇಂದ್ರದ ಸುತ್ತ ಹೆಣೆಯಲ್ಪಟ್ಟಿದೆ. ಇಂತಹ ಹೆಣಿಗೆಗೆ ಬಳಸಿರುವ ಭಾಷೆಯೂ ವಿಶಿಷ್ಟವಾದುದಾಗಿದೆ. ಅದು ಸಾಮಾಜಿಕ ಉಪಭಾಷೆ. ಅಸ್ಪೃಶ್ಯರಲ್ಲಿ ಒಂದು ಸಮುದಾಯದ 'ಸಂಬೋಳಿ'ಯವರು ಬೆಂಗಳೂರು ಸರಹದ್ದಿನಲ್ಲಿ ಬಳಸುವ ಪ್ರಾದೇಶಿಕವೂ ಸಾಮಾಜಿಕವೂ ಆದ ಉಪಭಾಷೆಯಲ್ಲಿ ಇದರ ಕಥನವನ್ನು ಕಟ್ಟುತ್ತಾರೆ. ಇಂತಹ ಭಾಷಾಪ್ರಯೋಗವು ಈಗಾಗಲೇ ಚೆನ್ನಣ್ಣ ವಾಲೀಕಾರ, ದೇವನೂರು ಮಹಾದೇವ ಮುಂತಾದವರಿಂದ ಬಳಕೆಯಾಗಿದೆ. ಅದೇ ದಿಸೆಯಲ್ಲಿ ಇಲ್ಲಿಯ ಲೇಖಕರು ಸಹ ಅಂತಹ ಭಾಷಾಪ್ರಯೋಗವನ್ನು ಮಾಡಿರುವುದರಿಂದ ಇಲ್ಲಿಯ ಸಂಸ್ಕೃತಿಯ ಅನಾವರಣವು ಹೆಚ್ಚು ಪರಿಣಾಮಕಾರಿಯಾಗಿ, ಪಾರದರ್ಶಕವಾಗಿ ಆಗುತ್ತದೆ. ಇದು ಇಂತಹ ಭಾಷೆಗಿರುವ ಒಂದು ಸಾಧ್ಯತೆ; ಭಾಷೆಯನ್ನು ಸಂಸ್ಕೃತಿಯಿಂದ ಬೇರ್ಪಡಿಸಲು ಸಾಧ್ಯವಿಲ್ಲ ಎಂಬ ತಾತ್ವಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಸಹ ಇದು ಮುಖ್ಯವಾಗುವ ಸಂಗತಿ. ಈ ನೆಲೆಯಲ್ಲಿ ಕೃತಿ ಹೊರಡುತ್ತದೆ. ಆದರೆ ಇದು ಕೆಲವೊಮ್ಮೆ ಕೃತಕವಾಗಿ ಪ್ರಯೋಗವಾಗುತ್ತಿದೆ ಎಂಬ ಭಾವನೆಯನ್ನೂ ಮೂಡಿಸುತ್ತದೆ. ಅಂತಹ ಎಡೆಗಳಲ್ಲಿ ಹೇಳಿದ ವಿಚಾರವನ್ನೇ ಇನ್ನೊಂದು ಬಗೆಯಲ್ಲಿ ಹೇಳುವುದು, ಅನಗತ್ಯವಾಗಿ ವಿಚಾರವನ್ನು ಲಂಬಿಸುವುದು, ಒಂದೇ ಪ್ಯಾರಾದಲ್ಲಿ ಒಂದು ವಿಚಾರದ ಪುನರಾವರ್ತನೆ ಆಗುವುದು ಕಾಣುತ್ತದೆ. ಅಂತಹ ಎಡೆಗಳಲ್ಲಿ ಓದಿನ ಓಘಕ್ಕೆ ಭಂಗ ಬರುತ್ತದೆ. ಇದು ಬಹುಶಃ ಹೆಚ್ಚು ಪ್ರಜ್ಞಾವಂತಿಕೆಯಿಂದ ಪ್ರಯೋಗಕ್ಕಾಗಿ ಪ್ರಯೋಗ ಎಂಬ ತಂತ್ರದ ನೆಲೆಯಲ್ಲಿ ಭಾಷೆಯನ್ನು ಬಳಸಿದಾಗ ಆಗುವ ವಿಲಕ್ಷಣ ಅಂಶ ಎನ್ನಿಸುತ್ತದೆ. ಇಂತಹ ಕೆಲವು ಎಡೆಗಳು ಇಡೀ ಕೃತಿಯಲ್ಲಿಲ್ಲ. ಅದರಲ್ಲೂ 'ಅಮರಪ್ರೇಮ' ಎಂಬ ಎಪಿಸೋಡ್‌ನಿಂದ ಆರಂಭವಾಗುವ ಮುಂದಿನ ಒಟ್ಟು ಕೃತಿಯ ಭಾಗವು ನಿರಾಯಾಸವಾಗಿ ಓದಿಸಿಕೊಂಡು ಹೋಗುತ್ತದೆ.

ಉಚಲ್ಯಾ, ಗೌರ್ಮೆಂಟ್ ಬ್ರಾಹ್ಮಣ, ಊರುಕೇರಿ : ಭಾಗ-1,2ರ ನಾಯಕರಂತೆ 'ಸಂಬೋಳಿ'ಯ ನಾಯಕರೂ ಸಹ ದಲಿತ ವಿದ್ಯಾವಂತ ವರ್ಗದ ಮೊದಲ ತಲೆಮಾರಿನವರಾಗಿದ್ದಾರೆ. ಹಾಗಾಗಿ ಇವರು ಪಟ್ಟ ಪಾಡುಗಳು ಈ ತಲೆಮಾರಿವರ ಅನುಭವಗಳಂತೆ ಸಾರ್ವತ್ರಿಕ ನೆಲೆಯನ್ನು ಪಡೆದಿವೆ. ಇದರಾಚೆಗೆ, ಅಂದರೆ ಎರಡನೆಯ ತಲೆಮಾರಿನ ದಲಿತರು ಆತ್ಮಕಥನಗಳನ್ನು ಬರೆದರೆ ಬಹುಶಃ ಅಲ್ಲಿ ಸಾಮಾಜಿಕ ಅಪಮಾನ ಉಳಿದು ಬಡತನ ಗೈರುಹಾಜರಿಯಾಗಿರುತ್ತದೆಂದು ಭಾವಿಸಬಹುದಾಗಿದೆ.

ಒಟ್ಟಾರೆ ಬಡತನ ಮತ್ತು ಸಾಮಾಜಿಕ ಅಪಮಾನಗಳಲ್ಲಿ ಯಾವುದೇ ಒಂದು ಉಳಿದಿರುವವರೆಗೂ ಇಂತಹ ಆತ್ಮಕಥನಗಳು ಬರುತ್ತಿರಬೇಕು; ಭಾರತದ ಮುಖಕ್ಕೆ ಕನ್ನಡಿಯನ್ನು ಹಿಡಿಯುತ್ತಿರಬೇಕು. ಇಲ್ಲವಾದಲ್ಲಿ ಜನರು ಭ್ರಮೆಗಳಲ್ಲಿ ಮುಳುಗುವ ಸಾಧ್ಯತೆಯಿರುತ್ತದೆ. ಅಂತಹ ಸಾಧ್ಯತೆಗಳು ಈಗ ಗೋಚರವಾಗುತ್ತಿರುವುದರಿಂದ ಈ ಮಾತುಗಳನ್ನು ಆತಂಕದ ನೆಲೆಯಲ್ಲಿ ಇಲ್ಲಿ ಹೇಳಲಾಗಿದೆ. ಮುಂದುವರೆದ ಜಾತಿ, ವರ್ಗಗಳ ಜನರಿಗಿಂತ ಹಿಂದುಳಿದ ಜಾತಿ, ವರ್ಗಗಳ ಜನರಿಗೆ ಸವಾಲುಗಳು ಹೆಚ್ಚು ತೀವ್ರವಾಗಿ ಕಾಡಬೇಕಾಗಿದೆ. ಆದರೆ ಈ ಬಗೆಗೆ ಇರುವ ಅಸಮಾಧಾನವು ಇಂದು ಅನೇಕರಲ್ಲಿ ಇರುವುದು ಸಕಾರಣವಾಗಿದೆ. ಈ ಕುರಿತ ನೋಟವು ಸಹ 'ಸಂಬೋಳಿ'ಯ ಉತ್ತರಾರ್ಧದ ಒಂದು ಮುಖ್ಯ ನೆಲೆಯಾಗಿ ಕಾಣುತ್ತದೆ.

ಲಕ್ಷ್ಮಣ್ ಅವರು ಸದ್ಯ ಮಧ್ಯವಯಸ್ಸಿನವರಾಗಿದ್ದಾರೆ. ಹಾಗಾಗಿ ಇವರ ಆತ್ಮಕಥನವು

ಈವರೆಗಿನದು ಮಾತ್ರ. ಇದರಲ್ಲಿಯ ಕಥನವು ಕಾಲಾನುಕ್ರಮಣಿಕೆಯಲ್ಲಿ ಮಂಡನೆಯಾಗಿದೆ. ಮೊದಲಿಗೆ ಬಾಲ್ಯ, ಅಲ್ಲಿಯ ಹಳ್ಳಿ, ಕುಟುಂಬ, ಕುಟುಂಬದ ಆಪ್ತ ಸದಸ್ಯರು, ಅವರ ಜೊತೆಗಿನ ಒಡನಾಟ, ಗೆಳೆಯರೊಂದಿಗಿನ ಸಂಬಂಧ, ಬಡತನ, ಉಣ್ಣುವುದಕ್ಕಾಗಿ ಕೆಲವೊಮ್ಮೆ ಮಾಡಿದ ಅನಿವಾರ್ಯ ಸಣ್ಣಪುಟ್ಟ ಕಳ್ಳತನ, ಪೊತೇವು ಎಂಬ ಖಾಯಿಲೆಗೆ ತುತ್ತಾದದ್ದು, ಅದರಿಂದ ಪೂಜಾರಿ, ನಾಟಿವೈದ್ಯನ ಶೋಷಣೆಗೆ ತುತ್ತಾದ ಬಗೆ, ಭಿಕ್ಷೆಯ ಕಾಸಿನಿಂದ ಕೋಳಿಗಳ ಯಜಮಾನನಾದ ಕತೆ, ಮಳೆಯಲ್ಲಿ ಮನೆಯೊಳಗಿದ್ದೂ ತೋಯ್ದ ಕತೆ ಮುಂತಾದವು ಕೃತಿಯ ಪೂರ್ವಾರ್ಧದಲ್ಲಿ ಚಿತ್ರಣಗೊಂಡಿವೆ. ಇದರ ನಂತರದಲ್ಲಿ ಎಸ್ಸೆಸ್ಸೆಲ್ಸಿ ತಲುಪಿ, ಇಂಗ್ಲಿಷ್‌ನಲ್ಲಿ ಹೆಚ್ಚು ಗ್ರಾಮೀಣ ವಿದ್ಯಾರ್ಥಿಗಳು ಫೇಲಾಗುವಂತೆ ತಾವೂ ಫೇಲಾಗಿ ಸರ್ಕಾರದ ಅನುದಾನದಲ್ಲಿ ನಡೆಯುತ್ತಿರುವ ಶಾಲೆಯೊಂದರಲ್ಲಿ ಅಟೆಂಡರ್ ಕೆಲಸ ಪಡೆದದ್ದು, ಆಗ ಶಾಲೆಯ ಅಧಿಕಾರಿ ವರ್ಗದವರೊಬ್ಬರ ಮನೆಯಲ್ಲಿ ಅಸ್ಪೃಶ್ಯರಾದ ತಾವು ಊಟ ಮಾಡಿದ್ದರ ಪರಿಣಾಮವಾಗಿ ನಾಜೂಕಾಗಿ ಕೆಲಸವನ್ನು ಕಳೆದುಕೊಂಡದ್ದು ಮುಖ್ಯವಾಗಿ ಕಾಣುತ್ತದೆ. ಇಲ್ಲಿ ಜಾತಿ ದೌರ್ಜನ್ಯವು ಹೇಗೆ ನಗರದ ಸಮಾಜದಲ್ಲಿಯೂ ನಾಜೂಕಾಗಿ ನಡೆಯುತ್ತದೆಂಬುದನ್ನು ಲೇಖಕರು ಅನಾವರಣ ಮಾಡುತ್ತಾರೆ. ಹೀಗೆ ಮೇಲ್ಜಾತಿಯವರಲ್ಲದೆ ದಲಿತ ಪರಿವಾರದೊಳಗಿನ ಇನ್ನೊಂದು ಜಾತಿಯಿಂದಲೇ ತಾನು ಮತ್ತೊಮ್ಮೆ ಜಾತಿ ದೌರ್ಜನ್ಯ, ಅಪಮಾನ ಪಟ್ಟ ಘಟನೆಯನ್ನು ಸಹ ಇಲ್ಲಿ ದಾಖಲಿಸುತ್ತಾರೆ. ಅಂತೆಯೇ ಕೆಲವು ನೈಜ ಬಸವಾನುಯಾಯಿಗಳು ದಲಿತರನ್ನು ಸಮಾನವಾಗಿ ನಡೆಸಿಕೊಳ್ಳುವುದನ್ನು ಸಹ ದಾಖಲಿಸುತ್ತಾರೆ.

ಹೀಗೆ ನಮ್ಮ ಸಮಕಾಲೀನ ಸಮಾಜದೊಳಗಿನ ಅನೇಕ ವಿಕೃತ ಒಳವೃತ್ತಗಳನ್ನು ಇಲ್ಲಿ ತೋರಿಸಿ, ಈ ಒಟ್ಟು ನಾಗರೀಕ ಎಂಬ ಸಮಾಜವು ಅಷ್ಟು ಸರಳವಾದುದಲ್ಲ ಎಂಬುದನ್ನು ಮನಗಾಣಿಸುತ್ತಾರೆ.

ಅನಂತರದಲ್ಲಿ ತಾವು ವಿದ್ಯಾಸಂಸ್ಥೆಯ ಸಂಪರ್ಕದಲ್ಲಿ ಇದ್ದುದರಿಂದಲೋ ಏನೋ ವಿದ್ಯಾಸಂಸ್ಥೆಯೊಂದನ್ನು; ಅದರೊಂದಿಗೆ ವಿದ್ಯಾರ್ಥಿನಿಲಯವನ್ನು ಕಟ್ಟಲು ಮುಂದಾಗುತ್ತಾರೆ. ಅದಕ್ಕೆ ಕೈಜೋಡಿಸಿದ ಅನೇಕರಲ್ಲಿ ಕೆಲವರು ಸಂಸ್ಥೆಯ ಮೂಲ ಉದ್ದೇಶಕ್ಕೆ ಎರವಾಗಿ ನಡೆದದ್ದನ್ನು ದಾಖಲಿಸಿ, ಅವರ ಬಗ್ಗೆ ಅಲ್ಲಿ ಕೆಂಡ ಕಾರುತ್ತಾರೆ. ಈ ನಡುವೆ ದಲಿತ ಸಂಘರ್ಷ ಸಮಿತಿಯ ಸಂಪರ್ಕವು ತಮ್ಮನ್ನು ಸಾಂಪ್ರದಾಯಿಕ ಮನಸ್ಥಿತಿಯಿಂದ ವಿಮೋಚನೆಗೊಳಿಸಿ, ಆಧುನಿಕಗೊಳಿಸಿದ್ದನ್ನು ತುಂಬು ಕೃತಜ್ಞತೆಯಿಂದ ನೆನೆಯುತ್ತಾರೆ. ಇದರೊಂದಿಗೆ ಆರಂಭಿಕ ದಸಂಸದ ಹೋರಾಟಗಳ ಕೆಲವು ಚಿತ್ರಣಗಳನ್ನು; ಆಗ ಕಾರ್ಯಕರ್ತರು, ನಾಯಕರೊಂದಿಗೆ ಇವರು ಸಹ ಪಟ್ಟ ಪಾಡನ್ನು ದಾಖಲಿಸುತ್ತಾರೆ. ಅನಂತರದಲ್ಲಿ ಇಂತಹ ಉದಾತ್ತ ಸಂಘಟನೆ ಕೆಲವು ಪಟ್ಟಭದ್ರರ ವಶವಾಗಿದ್ದರ ಬಗ್ಗೆ ಹತಾಶರಾಗುತ್ತಾರೆ. ಇದರ ಪರಿಣಾಮವಾಗಿ ಇವರು ತಮ್ಮ ಮಿತಿಯಲ್ಲೇ ಸಾಹಿತ್ಯ ಮತ್ತು 'ಜಾತಿ ವಿನಾಶ ವೇದಿಕೆ'ಯ ನೆಲೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಮುಂದಾಗುತ್ತಾರೆ.

ಹೀಗೆ ಲಕ್ಷ್ಮಣ್ ಅವರ ಆತ್ಮಕಥನವಾದ 'ಸಂಬೋಳಿ' ಕೇವಲ ಮತ್ತು ಸಹಜವಾಗಿ ತಮ್ಮ ಕಥನವನ್ನಷ್ಟೇ ಹೇಳದೆ ಸಾರ್ವತ್ರಿಕ ನೆಲೆಯಲ್ಲಿ ದಲಿತರ ಬದುಕಿನ ಕಥನವನ್ನು ಸಮಾಜದ ಎಲ್ಲ ಮಗ್ಗಲುಗಳಲ್ಲಿಯೂ ಇರುವ ಜಾತಿಭೇದವನ್ನು, ದಲಿತ ಸಂಘರ್ಷ ಸಮಿತಿ ನಡೆದ ಮತ್ತು ಇಂದಿನ ದಾರಿಯ ಕೆಲವು ರೂಪುರೇಷೆಗಳನ್ನು ಮುಖ್ಯವಾಗಿ ಮಂಡಿಸುತ್ತದೆ. ಇವುಗಳೊಂದಿಗೆ ಭಾರತದ ವಿಮೋಚನೆಯಲ್ಲಿ ದಲಿತರು ಹಾಗೂ ದಲಿತೇತರರು ತಳೆಯಬೇಕಾದ ನಿಲುವಿನ ಬಗ್ಗೆ ಸೂಚ್ಯ ಒಳನೋಟಗಳೂ ಸಿಗುತ್ತವೆ.

ಹೀಗೆ 'ಸಂಬೋಳಿ' ಅನೇಕ ಸ್ತರಗಳಲ್ಲಿ ಗಮನಸೆಳೆಯುವ ಸಾರ್ಥಕ ಕೃತಿಯಾಗಿದೆ.



# ಕನ್ನಡಕ್ಕೆ ಕತ್ತರಿ ಪ್ರಯೋಗ?

**ಸರಸ್ವತಿ ಬಡೆಕ್ಕಿಲ**

1566, ಚಾಲುಕ್ಯಶಿಲ್ಪ

19ನೇ ಅಡ್ಡರಸ್ತೆ, ರೂಪಾನಗರ, ಬೋಗಾದಿ, ಮೈಸೂರು – 570 026

ಋ. ಐ. ಔ.

ಖ. ಘ. ಛ. ಝ. ಠ. ಢ. ಥ. ಧ. ಫ. ಭ. ಷ.

''ಇದು ಯಾವ ವರ್ಣಾಕ್ಷರ ಮಾಲೆ'' ಎಂದು ನೀವು ಪ್ರಶ್ನಿಸುತ್ತೀರಿ.

ಇದು ಭಾಷಾವಿಜ್ಞಾನಿ ಎನಿಸಿದ ಡಿ.ಎನ್. ಶಂಕರಭಟ್ಟರು – ಕನ್ನಡ ತಾಯಿಯ ಕಂದ (ಕಂಟ?)ಹಾರಕ್ಕೆ ಕಂಟಕವೆಂದು ತೆಗೆದೊಗೆದ 'ಅಕ್ಷರ ರತ್ನ'ಗಳು! ''ಹಾಗಿದ್ದರೆ ಅವೆಲ್ಲ ಈಗ ಎಲ್ಲಿವೆ?'' ಎಂದು ನೀವು ಕೇಳಬೇಕಲ್ಲವೆ? ಅವನ್ನೆಲ್ಲ ಡಿ.ಎನ್. ಶಂಕರ ಭಟ್ಟರು ಕನ್ನಡದಿಂದ ಹೊರಗಟ್ಟಿದ್ದಾರೆ.

ಮೇಲೆ ತಿಳಿಸಿದ 'ವರ್ಣಾಕ್ಷರಗಳನ್ನು ಕತ್ತರಿಸಿ ಹಾಕ 'ಬೇಕೆಂದು ಡಿ.ಎನ್. ಶಂಕರ ಭಟ್ಟರು ತಮ್ಮ 'ಕನ್ನಡ ಬರಹವನ್ನು ಸರಿಪಡಿಸೋಣ', 'ಹೊಸ ಬರಹ' ಮೊದಲಾದ 'ಬರವಣಿಗೆ'ಗಳಲ್ಲಿ ಹಾಗೂ ಮಯೂರ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ, ಇನ್ನಷ್ಟು ಕಿರುಲೇಖನಗಳಲ್ಲಿ ಪ್ರತಿಪಾದಿಸಿದ್ದಾರೆ. ಈ ವಾದವನ್ನು ಸಮರ್ಥಿಸುವುದಕ್ಕಾಗಿ ತಮ್ಮ ಹೆಸರನ್ನೇ ಬದಲಾಯಿಸಿದ್ದಾರೆ.

ಆದರೆ ಇಂಗ್ಲಿಷ್ ಬೀಜಾಕ್ಷರ ಡಿ.ಎನ್. – ಇದು ಕನ್ನಡಕ್ಕೆ ಮಾಡುವ ಅನ್ಯಾಯವೆಂದೇಕೋ ಕಾಣಿಸಲಿಲ್ಲ? 'ಲ್ಯಾಂಗ್ವೇಜ್ ಪ್ಲಾನಿಂಗ್' ಎನ್ನುವ ಇವರಿಗೆ ಕನ್ನಡ ಪದಗಳು ಸಿಗಲಿಲ್ಲವೇನೋ? ಈ ಬದಲಾವಣೆಗೆ ಇವರ ಪ್ರಕಾಶನ ಘಟಕವೂ ಬಲಿಯಾಗಿದೆ – ಭಾಷಾ ಪ್ರಕಾಶನವು 'ಬಾಶಾ ಪ್ರಕಾಶನ'ವೆಂದು ಹೊಸ ವೇಶ ಹಾಕಿದೆ.

ನನ್ನ ತಂದೆ ದಿ| ಸೇಡಿಯಾಪು ಕೃಷ್ಣಭಟ್ಟರು, ಸುಮಾರು 45 ವರ್ಷಗಳ ಹಿಂದೆ ನನ್ನೊಡನೆ – ''ಶಂಕರನ ಕನ್ನಡ 'ಅಮೆರಿಕನ್ನಡ'' ಎಂದುದು ನೆನಪಾಯಿತು.

ಆ ಕಾಲದಲ್ಲೇ ಅವರು ಈ ರೀತಿ ಹೇಳಿದ್ದರು – ''ಡಿ.ಎನ್.ಎಸ್.ರ ಚಿಂತನೆಗಳ, ಸಂಶೋಧನಾ ವಿಧಾನಗಳ ಮೂಲದಲ್ಲೇ ದೋಷವಿದೆ. ಅವರು ಭಾರತೀಯ ಭಾಷೆಗಳ ಸ್ವರೂಪದ, ರಚನಾಕ್ರಮದ ಅಧ್ಯಯನ ಮಾಡದೆ, ಪರಕೀಯವಾದ ಪಾಶ್ಚಾತ್ಯ ಭಾಷೆಗಳ ನೆಲೆಗಟ್ಟಿನಲ್ಲಿ ಭಾರತೀಯ ಭಾಷೆಗಳಲ್ಲಿ ಕಾಲಕ್ರಮೇಣ ಉಂಟಾಗುವ ಬದಲಾವಣೆಗಳನ್ನು ಅಳೆಯುತ್ತಾರೆ. ದೇಶೀಯ ಭಾಷಾ ಇತಿಹಾಸವನ್ನು ಪರಕೀಯವಾದ ದೃಷ್ಟಿಕೋನದಿಂದ ಅರ್ಥೈಸುವುದರಿಂದ ಸಂಶೋಧನೆಯ ಮಾರ್ಗವೇ ತಪ್ಪಾಗುತ್ತದೆ.''

ಈ ಕಾರಣದಿಂದ ಇವರ ಶೋಧನೆಗಳನ್ನು ಸ್ವೀಕರಿಸುವುದು ಎಷ್ಟರಮಟ್ಟಿಗೆ ಸರಿ? 'ಇವರ ಭಾಷೆಯ ಬಗೆಗೆ ನೀವೇನು ಬಲ್ಲಿರಿ?' 'ಕನ್ನಡಕ್ಕೆ ಕನ್ನಡದ್ದೇ ವ್ಯಾಕರಣ ಬೇಕು', 'ಕನ್ನಡ ವಾಕ್ಯಗಳ ಒಳರಚನೆ' ಮುಂತಾದುವುಗಳನ್ನು ಪ್ರಾಜ್ಞರಾದವರು ತೀಕ್ಷ್ಣ ಪರಿಶೀಲನೆ ಮಾಡಿ ತಪ್ಪು ಒಪ್ಪುಗಳ ನಿರ್ಣಯ ಕೈಗೊಳ್ಳುವ ಅಗತ್ಯವಿದೆ ಎಂದು ನನ್ನ ಅನಿಸಿಕೆ.

ಈಗ್ಗೆ ಹತ್ತು ವರ್ಷಗಳ ಹಿಂದೆ – ಹತ್ತಿರದ ನೆಂಟಳೂ, ನೆರೆಮನೆಯವಳೂ ಆದ ನನ್ನ ಬಳಿ ಬಂದು ಡಿ.ಎನ್.ಎಸ್. ಅವರು ''ಇನ್ನು ಮುಂದೆ ನಾವು ಸಂಸ್ಕೃತ ಪದಗಳನ್ನು ಬಳಸಬೇಕಾಗಿಲ್ಲ; ಅವನ್ನು ತ್ಯಜಿಸುವುದರಿಂದ ಕನ್ನಡಕ್ಕೆ ಯಾವುದೇ ಕೊರತೆಯಾಗುವುದಿಲ್ಲ; ಐರೋಪ್ಯ ಭಾಷೆಗಳಲ್ಲಿಯೂ ಇತ್ತೀಚೆಗೆ, ಅದರಲ್ಲೂ ಮುಖ್ಯವಾಗಿ ಇಂಗ್ಲಿಷ್‌ನಲ್ಲಿ – ಲ್ಯಾಟಿನ್, ಗ್ರೀಕ್ ಪದಗಳನ್ನು ಪ್ರಯೋಗಿಸುವುದು ನಿಂತುಹೋಗಿದೆ; ನಿಲ್ಲಿಸಿಬಿಟ್ಟಿದ್ದಾರೆ; ಅದರಿಂದಾಗಿ ಅವರಿಗೇನೂ ತೊಂದರೆಯಾಗಿಲ್ಲ'' ಎಂದಿದ್ದರು.

ಆದರೆ ಅವರು ನನ್ನ ಮಾರುತ್ತರವನ್ನು ನಿರೀಕ್ಷಿಸಿರಲಿಲ್ಲವೆಂದು ತೋರುತ್ತದೆ. ತಕ್ಷಣ ನಾನೆಂದೆ – ''ಕನ್ನಡದಿಂದ ಪೂರ್ತಿಯಾಗಿ ಸಂಸ್ಕೃತವನ್ನು ಕಳೆದರೆ ಕನ್ನಡಕ್ಕೇ ನಷ್ಟ.''

ಡಿ.ಎನ್.ಎಸ್. ಮುಂದೆ ಮಾತಾಡಲು ಇಷ್ಟವಿಲ್ಲದವರಂತೆ ಹೊರಟುಹೋದರು. ಆ ಬಳಿಕ ನನ್ನೊಡನೆ ಮಾತನಾಡುವುದನ್ನೇ ಬಿಟ್ಟುಬಿಟ್ಟರೆನ್ನಬಹುದು (ಆದರೆ ನಾನು ಬಿಡಬೇಕಲ್ಲ!) ಕೆಲ ಕಾಲ ಕಳೆದು ಅವರು ಮೈಸೂರಿನಿಂದ ಹೆಗ್ಗೋಡಿಗೆ ಮನೆ ಬದಲಾಯಿಸಿದರು. ಹೀಗಾಗಿ ಅವರ ಸಂಪರ್ಕ ಕಡಿಮೆಯಾಯಿತಾದರೂ ಅವರ 'ಯದ್ವಾತದ್ವಾ' ಆಲೋಚನೆಗಳು ನನ್ನಲ್ಲಿ ಆಕ್ರೋಶವನ್ನುಂಟು ಮಾಡುತ್ತಲೇ ಇವೆ. 'ತಾಮ್ರತವರಗಳು ಎರಕಗೊಂಡು ಘನಘಂಟೆಯಾಗಿ ಢಾಳಿಸುವಂತೆ' ಕನ್ನಡ ಸಂಸ್ಕೃತಗಳು ಒಂದನ್ನೊಂದು ಸೇರಿಕೊಂಡಿರುವ ಕನ್ನಡ ಘಂಟೆಯನ್ನು ಒಡೆಯುವ ಕೆಲಸವನ್ನು ಯಾರೇ ಮಾಡಿದರೂ ಅದು ಖಂಡನಾರ್ಹವೆಂದು ಉದ್ವಿಗ್ನಳಾಗುತ್ತೇನೆ, ತಳಮಳಗೊಳ್ಳುತ್ತೇನೆ.

ಶ್ರೀ ಅಜಕ್ಕಳ ಗಿರೀಶರ 'ಕನ್ನಡಕ್ಕೇಕೆ ಶಂಕರ ಭಟ್ಟರ ಕತ್ತರಿ?' ಪುಸ್ತಕ ಕೈಸೇರಿದ ಮೇಲೆ ನನಗೆ ಸಮಾಧಾನವಾಯಿತು. ನನ್ನಂತೆ ಭಾವಿಸುವ ಹಲವರು ಇನ್ನೂ ಇದ್ದಾರೆಂದು ಧೈರ್ಯ ಬಂತು. ಶಂಕರ ಭಟ್ಟರ ಸಂಸ್ಕೃತ ಮತ್ತು ಅಕ್ಷರ ದ್ವೇಷದ ಹಿಂದೆ ಬಹುದೊಡ್ಡ ರಾಜಕೀಯವಿದೆಯೆಂದು ಯಾರಿಗಾದರೂ ಭಾಸವಾದೀತು. ಶಂಕರ ಭಟ್ಟರು ಹಿಂದೆ ತಮಿಳುನಾಡಿನಲ್ಲಿ ಉಂಟಾದ ಬ್ರಾಹ್ಮಣ, ಅಬ್ರಾಹ್ಮಣ ತಮಿಳು – ಸಂಸ್ಕೃತ ಸಂಘರ್ಷವನ್ನು ಕರ್ನಾಟಕದಲ್ಲೂ ಉಂಟುಮಾಡಲು ಹೊರಟವರಂತೆ ಕಾಣುವುದಲ್ಲವೆ? ಆದರೆ ಗಿರೀಶರು, ''ಡಿ.ಎನ್.ಎಸ್. ರಾಜಕೀಯ ಮಾಡುವವರಲ್ಲ'' ಎನ್ನುತ್ತಾರೆ. ಈಗ ಇತ್ತೀಚೆಗೆ 8, 10 ವರ್ಷಗಳಿಂದಷ್ಟೇ ಈ ಬದಲಾವಣೆ ಬಂದಿದೆ. ಭಾಷಾವಿಜ್ಞಾನಿಗೆ ಇರಬೇಕಾದ ನಿರ್ಲಿಪ್ತ ಧೋರಣೆ ಮುಗಿದ ಅಧ್ಯಾಯವಾಗಿದೆ. ಇವರಿಗೆ ಹಿಂದುಳಿದ ವರ್ಗಗಳ ದನಿಯಾಗುತ್ತಿದ್ದೇನೆಂಬ ಹೆಮ್ಮೆ ಮೂಡಿದೆ. ಆದರೆ ದಲಿತರು ಸಂಸ್ಕೃತ ವಿದ್ಯಾಭ್ಯಾಸ ಮಾಡುವುದು ಬೇಡವೇ? ''ಸಂಸ್ಕೃತ, ಮಹಾಪ್ರಾಣ ಅಕ್ಷರಗಳನ್ನು ಉಚ್ಚರಿಸಲು ಕಷ್ಟ. ಆದ್ದರಿಂದ ಕನ್ನಡವನ್ನು

ಸರಿಪಡಿಸೋಣ'' ಎನ್ನುವ ಶಂಕರ ಭಟ್ಟರ ವಾದವನ್ನು ದಲಿತರು ಪುರಸ್ಕರಿಸುವರೇ? ತಮ್ಮನ್ನು ಇನ್ನಷ್ಟು ಹಿಂದಕ್ಕೆ ತಳ್ಳುವ ತಂತ್ರವಿದು ಎನ್ನದಿರುವರೇ? ಉಚ್ಚಾರ ಬಾರದ ದಡ್ಡರೆಂದು ದಲಿತರು ಮತ್ತು ಹಿಂದುಳಿದವರನ್ನು ಕರೆಯುವುದು ಹುಚ್ಚುತನವಲ್ಲವೇ?

ದಲಿತ ಕನ್ನಡಿಗರಿಗೆ ಸಂಸ್ಕೃತದ ಮಹಾಪ್ರಾಣಾಕ್ಷರಗಳಿಲ್ಲದ ಭಾಷೆಯನ್ನು ನಿರ್ಮಿಸಹೊರಟಿರುವುದು ಹೇಗೆಂದರೆ - ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕುವ ಬುದ್ಧಿವಂತಿಕೆಯಂತೆ. ಪ್ರಾಚೀನ ಕಾಲದಿಂದಲೇ, ಮೊನ್ನೆ ಮೊನ್ನೆಯವರೆಗೆ - ಎಂದರೆ ಸುಮಾರು 90 - 80 ವರ್ಷಗಳಷ್ಟು ಹಿಂದಿನವರೆಗೆ ಎಂದರೆ ಇಸವಿ 1918 - 20ರ ವರೆಗೆ ಎಳೆಯ ಬಾಲಕ ಬಾಲಕಿಯರಿಗೆ ಪ್ರಥಮ ದರ್ಜೆಯಲ್ಲಿ ಕನ್ನಡ ಮೂಲ ಪಾಠಕ 'ಬಾಲಶಿಕ್ಷೆ' ಎಂಬ ಪಠ್ಯಪುಸ್ತಕವನ್ನು ಕಲಿಸಲಾಗುತ್ತಿತ್ತು. ಶಿಕ್ಷಕರು ಬಹಳ ಕಟ್ಟುನಿಟ್ಟಾಗಿ ಅದರ ಎಲ್ಲ ಪಾಠಗಳನ್ನು ಚಾಚೂತಪ್ಪದೆ ಸ್ವರ ವರ್ಣಮಾಲೆಯ ಎಲ್ಲ ಅಕ್ಷರಗಳನ್ನು ಕ್ರಮಬದ್ಧ ರೀತಿಯಲ್ಲಿ ಶುದ್ಧರೂಪದಲ್ಲಿ ಬರೆಯಿಸುವುದು, ಕಂಠಪಾಠ ಮಾಡಿಸುವುದು ಸಾಮಾನ್ಯ ವಿಷಯವೇ ಆಗಿತ್ತು. ಇದರಿಂದ ಬಾಲ್ಯದಲ್ಲೇ ಕಾಗುಣಿತಾದಿ ಎಲ್ಲ ಅಕ್ಷರಸ್ವರೂಪಗಳು ಅವರ ನಾಲಗೆಯಲ್ಲಿ ಅಚ್ಚುಹೊಡೆದಂತೆ ಸ್ಥಿರವಾಗುತ್ತಿದ್ದುವು. ಪರಿಣಾಮವಾಗಿ ಮಕ್ಕಳು ಚೆನ್ನಾಗಿ ಮಾತನಾಡಲು, ಓದಲು ಮತ್ತು ಬರೆಯಲು ತರಬೇತಿಯಾಗುತ್ತಿತ್ತು. ತುಳು, ಮಲಯಾಳ ಇತ್ಯಾದಿ ಭಾಷೆಗಳನ್ನು ಮಾತೃಭಾಷೆಗಳಾಗಿ ಹೊಂದಿರುವವರೂ ಚೆನ್ನಾಗಿ ಕನ್ನಡ ಕಲಿಯಲಿಲ್ಲವೇ? ತುಳುನಾಡಿನ ಇಂದಿನ ಹಲವಾರು ಉತ್ತಮ ಸಾಹಿತಿಗಳು ಕನ್ನಡ ಮಾತೃಭಾಷೆಯವರಲ್ಲ.

ಸ್ವಾತಂತ್ರ್ಯ ನಂತರದ ಕಾಲಕ್ಕೆ ಈ ಕ್ರಮವು ಬದಲಾಗಿ ಹೊಸ ಚಿಂತನೆಗಳ ಪಠ್ಯಗಳು ಶಾಲೆಗಳಲ್ಲಿ ಸ್ವೀಕಾರಗೊಂಡು ಮಕ್ಕಳ ಕಲಿಯುವಿಕೆಯನ್ನು ಸರಳಗೊಳಿಸುತ್ತಿದ್ದೇವೆಂಬ ಭ್ರಮೆಯಲ್ಲಿ ಉಚ್ಚಾರಕ್ಕೆ ಮಹತ್ವ ಕಮಡಿಮೆಯಾಗುತ್ತಾ ಬಂತು. ಈಚೆಗೆ ಬೋಧಕರ ಶ್ರದ್ಧೆ, ಸಾಮರ್ಥ್ಯಗಳ ಬಗ್ಗೆಯೇ ಟೀಕೆಗಳು ಬರುತ್ತಿವೆ.

ಇದರಿಂದ ಭಾಷಾಶುದ್ಧತೆ, ಉಚ್ಚಾರಗಳು ಮಾನ್ಯತೆ ಕಳೆದುಕೊಂಡು ಇಂದಿನ 'ಹೇಗೆ ಬೇಕಾದರೂ ಓದಬಹುದು, ಹೇಗೆ ಬೇಕಾದರೂ ಬರೆಯಬಹುದು' ಎಂಬಲ್ಲಿವರೆಗೆ ನಾವೆಲ್ಲ ಮುಟ್ಟಿದ್ದೇವೆ. ಇದನ್ನು ದಿನನಿತ್ಯ ಪತ್ರಿಕೆಗಳು, ಸುದ್ದಿ ಸಂಸ್ಥೆ, ಟಿ.ವಿ., ಆಕಾಶವಾಣಿ ಮಾಧ್ಯಮ ಗಳಲ್ಲಿಯೂ ಕೇಳುತ್ತಿದ್ದೇವೆ. ನೋಡುತ್ತಿದ್ದೇವೆ. ಇವೆಲ್ಲದರ ಮುಖ್ಯ ಕಾರಣ ಸಮರ್ಥ ಶಿಕ್ಷಕರ ಕೊರತೆ, ಪಠ್ಯಪುಸ್ತಕಗಳಲ್ಲಿ ಉಚ್ಚಾರಕ್ಕೆ ಪ್ರಾಧಾನ್ಯವುಳ್ಳ ಶಿಕ್ಷಣ ಪದ್ಧತಿ ಕಣ್ಮರೆಯಾಗುತ್ತಾ ಬಂದುದು.

ಡಿ.ಎನ್.ಎಸ್. ಇದನ್ನು ತಿಳಿಯಹೇಳಿದ್ದರೆ ಅವರ ಮಾತಿಗೆ ತೂಕವೂ ಇರುತ್ತಿತ್ತು. ಅವರ ನಾಡೋಜ ಪದವಿಗೂ ಯೋಗ್ಯವೆನಿಸುತ್ತಿತ್ತು. ಅದನ್ನು ಬಿಟ್ಟು ಅಕ್ಷರಗಳನ್ನು - ಇವು ಭಾಷಾದೇವಿಯ ಅಂಗಾಂಗಗಳು! - ಅಲ್ಲಿ ಇಲ್ಲಿ ಕತ್ತರಿಸಿ ಅಂಗಹೀನಗೊಳಿಸಿ ತಾನೊಂದು ಮಹಾಕ್ರಾಂತಿ ಮಾಡಿದ್ದೇನೆ ಎಂದು ಭ್ರಮಿಸುವ ಇವರ ಭಾಷಾವಿಜ್ಞಾನಕ್ಕೆ ನಗಬೇಕೋ ಅಳಬೇಕೋ?

ಆದರೆ ಶ್ರೀ ಅಜಕ್ಕಳರು ಡಿ.ಎನ್.ಎಸ್.ರವರ ವಿತಂಡವಾದವನ್ನು ಬಹಳ ತಾಳ್ಮೆಯಿಂದ, ಕಾರಣ ಮತ್ತು ಆಧಾರಸಹಿತವಾಗಿ, ನಮ್ರತೆಯಿಂದ ಮೃದುವಚನಗಳಿಂದ ಖಂಡಿಸುತ್ತಾ ಕನ್ನಡ ಲೋಕವನ್ನು ಎಚ್ಚರಿಸುವ ಮಹತ್ವದ ಕೆಲಸ ಮಾಡಿದ್ದಾರೆ. ಶ್ರಿ ಗಿರೀಶರು ಈ ಪುಸ್ತಕದಲ್ಲಿ ಆರು ಅಧ್ಯಾಯಗಳನ್ನು ರಚಿಸಿ ವಿಷಯ ಪ್ರತಿಪಾದನೆ ಮಾಡಿದ್ದಾರೆ. ಒಂದು ರೀತಿಯಲ್ಲಿ, ಶಂಕರ ಭಟ್ಟರ ಮನೋವ್ಯಾಪಾರ ವನ್ನು ವಿಶ್ಲೇಷಣೆಗೊಳಪಡಿಸಿದ್ದಾರೆ ಎಂದರೆ ತಪ್ಪಾಗದು.

ಡಿ.ಎನ್. ಶಂಕರ ಭಟ್ಟರ 'ಹೊಸ ಬರಹ' ಮತ್ತು 'ಕನ್ನಡವನ್ನು ಸರಿಪಡಿಸೋಣ' ವಾದಗಳಿಗೆ ಪ್ರತಿಕ್ರಿಯೆಯಾಗಿ 'ದೇಶಕಾಲ' ಪತ್ರಿಕೆಯ 14ನೇ ಸಂಚಿಕೆಯಲ್ಲಿ ಪ್ರಕಟವಾದ ಪರ ಮತ್ತು ವಿರೋಧ

ಅಭಿಪ್ರಾಯಗಳನ್ನು ಯಥಾವತ್ತಾಗಿ ಉದ್ಧರಿಸಿ ಈ 'ಕನ್ನಡಕ್ಕೇಕೆ ಕತ್ತರಿ' ಪುಸ್ತಕದಲ್ಲಿ ಪ್ರಕಟಿಸಿ ಅಂತಿಮ ತೀರ್ಮಾನವನ್ನು ವಾಚಕರಿಗೇ ಬಿಟ್ಟಿದ್ದಾರೆ.

ಡಿ.ಎನ್.ಎಸ್. ವಾದಕ್ಕೆ ವಿರೋಧ ವ್ಯಕ್ತಪಡಿಸಿದ ಶ್ರೀ ಕೆ.ವಿ. ತಿರುಮಲೇಶರು (ಯುಕ್ತಿಯುಕ್ತವಾಗಿ ವಿಮರ್ಶಿಸುವ, ಸ್ವತಃ ಕಥೆ, ಕಾದಂಬರಿ, ಕವನ ರಚಿಸುವ ಉನ್ನತ ಶ್ರೇಣಿಯ ವಿದ್ವಾಂಸರಿವರು) ದೇಶಕಾಲ 14ನೇ ಸಂಚಿಕೆಯ 94ನೇ ಪುಟದಲ್ಲಿ ಈ ರೀತಿ ಬರೆದಿದ್ದಾರೆ – ''ಭಾಷೆಯನ್ನು ಬೈದರೆ ಗಾಳಿಯನ್ನು ಗುದ್ದಿದಂತೆ ಎಂದು ತಿಳಿದಿರುವ ಡಿ.ಎನ್.ಎಸ್. ಕಳೆದ ಹತ್ತು ಹನ್ನೆರಡು ಶತಮಾನಕ್ಕೂ ಹಿಂದೆ ಜೀವಿಸಿದ್ದ, ಸಂಸ್ಕೃತ ಬಲ್ಲ ಕನ್ನಡ ಬರಹಗಾರರನ್ನು ಗುರಿಯಾಗಿಟ್ಟು 'ಕನ್ನಡಕ್ಕೆ ಅನ್ಯಾಯ ಮಾಡಿದವರು ಇವರು' – ಎಂದು ಬೆರಳೆತ್ತಿ ತೋರಿಸುತ್ತಾರೆ. ಭಾಷೆಯೊಂದರ ಸಹಜವಾದ ಬೆಳವಣಿಗೆಯನ್ನು ಸಂಸ್ಕೃತದ ಹೇರಿಕೆಯ ಪರಿಣಾಮವೆಂದು ಕನ್ನಡಕ್ಕೆ ಅಪಚಾರವೆಸಗಿದ್ದಾರೆಂದು ಆಪಾದನೆ ಹೊರಿಸುವುದನ್ನು ನೋಡಿದರೆ ಭಾಷಾವಿಜ್ಞಾನಿಗೆ ಇರಬೇಕಾದ ನಿಷ್ಪಕ್ಷಪಾತ, ನಿರ್ಲಿಪ್ತ ಧೋರಣೆಯಿಂದ ಡಿ.ಎನ್.ಎಸ್. ದೂರ ಸರಿದಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ವಸ್ತುನಿಷ್ಠ ವಿಶ್ಲೇಷಣೆಯ ಮಾರ್ಗವನ್ನೂ ತೊರೆದಿದ್ದಾರೆ.''

ಅದೇ ಸಂಚಿಕೆಯ 118ನೇ ಪುಟದಲ್ಲಿ ಶ್ರೀಯುತ ಶತಾವಧಾನಿ ಆರ್. ಗಣೇಶರು ಕೂಡ ಶ್ರೀ ತಿರುಮಲೇಶರ ಅಭಿಪ್ರಾಯವನ್ನು ಪುಷ್ಟೀಕರಿಸಿದ್ದಲ್ಲದೆ ಡಿ.ಎನ್.ಎಸ್. ವಾದವು ಎಂಥ ಅಪಾಯಕಾರಿ ಎಂಬುದನ್ನು ಘಂಟಾಘೋಷದಂತೆ ಸಾರಿ ಹೇಳುವುದನ್ನು ಕಾಣುವಾಗ ಡಿ.ಎನ್.ಎಸ್. ಭಾಷಾ ವಿಜ್ಞಾನವೇ ತಲೆತಗ್ಗಿಸಬೇಕಾಗುತ್ತದೆ. ನಲುವತ್ತು ವರ್ಷಗಳ ಸಾಧನೆಯ ಫಲಶ್ರುತಿ ಇಂಥ ಮುಸಲ ಪ್ರಸವವೇ? (ಯಾದವೀ ಅಂತರ್ಯುದ್ಧವನ್ನು ಸ್ಮರಿಸಬೇಕು) ಒಡೆದು ಆಳುತ್ತಿದ್ದ ವೈರಿ ಬ್ರಿಟೀಷರಿಂದಲೂ ಒಂದು ಹೆಜ್ಜೆ ಮುಂದುವರಿದು ಇವರು ಕನ್ನಡಿಗರನ್ನೇ ಒಡೆದು ಹಾಕಿ ವರ್ಗಭೇದವನ್ನು ಶಾಶ್ವತಗೊಳಿಸಿ, ತನ್ನ ಬುದ್ಧಿವಂತಿಕೆಯನ್ನು ಮೆರೆಯಿಸುವ ಸಂಚ ಲ್ಲವೇ ಇದು? ''ಸಂಸ್ಕೃತ ನಮ್ಮದಲ್ಲ, ಪರಕೀಯ ಅತ್ಯಾಚಾರಿ'' ಎಂಬ ವಿಷಕೀಟವನ್ನು ಪೆಂಡೋರಾ ಪೆಟ್ಟಿಗೆ ತೆರೆದು ಜಗತ್ತನ್ನು ರೋಗಗ್ರಸ್ತವಾಗಿಸಿದಂತೆ – ಇವರು ಕರ್ನಾಟಕದೊಳಗೆ ಹಾರಿಸಿಬಿಟ್ಟಿದ್ದಾರೆ. ಮುಂದೆ ಈ ಕೀಟದ ಅಣ್ಣ ತಮ್ಮ ಅಕ್ಕ ತಂಗಿಯರೂ ಉದ್ಭವವಾಗಿ ಏನೇನು ನಡೆದೀತೋ ಭವಿಷ್ಯದಲ್ಲಿ! – ಏಕೆ ಈ ಭಯವೆಂದರೆ ಈಗಾಗಲೇ ಹಲವರು ಇದರಿಂದ ಪ್ರಭಾವಿತರಾಗಿರುವುದು ಕಂಡುಬರುತ್ತಿದೆ!

ಎಲ್ಲರೂ ತಿಳಿದಂತೆ ಇಂದು ವಿಜ್ಞಾನ ತಂತ್ರಜ್ಞಾನಗಳು ಬೆಳಕಿನ ವೇಗದಿಂದ ಬೆಳೆಯುತ್ತಿರುವ ಸನ್ನಿವೇಶದಲ್ಲಿ ಅವುಗಳ ಬಗ್ಗೆ ಗ್ರಂಥ ರಚನೆಗೆ ಪಾರಿಭಾಷಿಕ ಪದಗಳ ಅವಶ್ಯಕತೆ ಹಿಂದೆಂದೂ ಇಲ್ಲದಷ್ಟು ಅಗಾಧವಾಗಿದೆ. ಈ ಸ್ಥಿತಿಯಲ್ಲಿ ಸಂಸ್ಕೃತ ಮೂಲ ಎಂಬ ಕಾರಣಕ್ಕೆ ಶಿಕ್ಷಣದಿಂದ ಈಗಾಗಲೇ ಅಸ್ತಿತ್ವದಲ್ಲಿರುವ ಪದಗಳನ್ನು ನಿರಾಕರಿಸುವ ಉದ್ಧಟತನವನ್ನು ಯಾರೇ ಮಾಡಿದರೂ ಅದು ಖಂಡನೀಯ. ಅಂಥ ಭಾಷೆಯ ಆದನ್ನಾಡುವ, ಬರೆಯುವ ಜನಸಮುದಾಯವು ಹಿಂದುಳಿಯುವುದು ಶತಸ್ಸಿದ್ಧ. ಭವಿಷ್ಯದಲ್ಲಿ, ವಿಜ್ಞಾನ ಸಾಹಿತಿಗಳು ಮಾತ್ರವಲ್ಲ, ಕಥೆ ಕಾವ್ಯ ನಾಟಕ ಕಾದಂಬರಿಕಾರರು ಕೂಡ ಭಯಂಕರವಾದ ಶಬ್ದಕ್ಷಾಮವನ್ನೆದುರಿಸಬೇಕಾಗುವುದು ಖಂಡಿತ. ಶತಶತಮಾನಗಳಿಂದ, ನೂರಾರು ತಲೆಮಾರಿನ ಕೋಟ್ಯಾನುಕೋಟಿ ಜನ – ನಮ್ಮ ಹಿರಿಯರು ಅತ್ಯಂತ ಜಾಗರೂಕತೆಯಿಂದ ಕಟ್ಟಿ ಬೆಳೆಯಿಸಿದ, ಸಂರಕ್ಷಿಸಿಕೊಂಡು ಬಂದ, ಅತ್ಯಮೂಲ್ಯವಾದ, ಅತಿ ಸುಂದರವಾದ ಕನ್ನಡ ಸೌಧವನ್ನು ಹಾಳುಗೆಡವಲು ಇವರಿಗೆ ಅಧಿಕಾರ ಕೊಟ್ಟವರಾರು? ಕನ್ನಡ ಇವರ ಸ್ವಂತ ಆಸ್ತಿಯೇ?

'ಹೊಸ ಬರಹ'ವನ್ನು ಸಮರ್ಥಿಸುತ್ತಿರುವ, ದೊಡ್ಡ ವಿದ್ವಾಂಸರೆಂದು ಪ್ರಸಿದ್ಧಿ ಪಡೆದ

ಮಹನೀಯರು ಅದರ ಮುಂದಿನ ಪರಿಣಾಮದ ಬಗ್ಗೆ ಯೋಚಿಸಿಯೇ ಇಲ್ಲವೆಂದು ಸ್ಪಷ್ಟವಾಗುತ್ತದೆ.

ಆದರೆ, ಆರ್. ಗಣೇಶರು ತಿಳಿಸಿರುವಂತೆ, ''ತಮಿಳರು ಇತ್ತೀಚೆಗೆ 100 ವರ್ಷಗಳಿಂದೀಚೆಗಷ್ಟೇ ಸಂಸ್ಕೃತ ನಿರಾಕರಣೆಯ ಮಾರ್ಗವನ್ನು ಅನುಸರಿಸಿದರು ಎಂದು ಇತಿಹಾಸದ ಸಾಕ್ಷ್ಯಾಧಾರ ಸಿಗುತ್ತದೆ. ಅಲ್ಲಿ ಬೆಳೆದು ನಿಂತ ಸಂಸ್ಕೃತ ದ್ವೇಷನೀತಿಯ ದುಷ್ಪರಿಣಾಮವೇನೆಂದು ಅಲ್ಲಿಯ ವಿದ್ಯಾರ್ಥಿಗಳನ್ನೇ ಕೇಳಿ ತಿಳಿದುಕೊಳ್ಳಬಹುದು : ಉನ್ನತ ವ್ಯಾಸಂಗ ಮಾಡಬಯಸುವ ತಮಿಳುನಾಡಿನ ವಿದ್ಯಾರ್ಥಿಗಳು ಹೀಗೆನ್ನುತ್ತಾರೆ – ''ನಮ್ಮ ಭಾಷಾ ಸಂಕುಚಿತತೆಯಿಂದಾಗಿ ನಾವು ಎಷ್ಟೋ ಅವಕಾಶಗಳಿಂದ ವಂಚಿತರಾಗಿದ್ದೇವೆ. ನಮ್ಮ ರಾಜ್ಯದ ಹೊರಗೆ ಯಾವ ಪ್ರದೇಶಕ್ಕೆ ಹೋದರೂ ಕಷ್ಟತಪ್ಪಿದ್ದಲ್ಲ. ದೇಶದ ಇತರ ಭಾಷೆಗಳನ್ನು ಕಲಿಯಲು, ಇತರ ಭಾಷಿಕರೊಂದಿಗೆ ವ್ಯವಹರಿಸಲು ಮತ್ತು ಬರೆಯುವಾಗ, ಕೊನೆಗೆ ರಾಜ್ಯಗಳ, ವ್ಯಕ್ತಿಗಳ ಹೆಸರನ್ನು ಹೇಳುವಾಗಲೂ, ಎಲ್ಲ ವ್ಯಂಜನಗಳ ಉಚ್ಚಾರ ತಿಳಿಯದೆ ತೊದಲಿ ನಗೆಪಾಟಲಾಗುವುದು, ಮುಜುಗರ ಪಟ್ಟುಕೊಳ್ಳುವುದು, ಇವೆಲ್ಲ ಸರ್ವಸಾಮಾನ್ಯ ಅನುಭವ! ಎಲ್ಲದಕ್ಕೂ ನಾವು ಇಂಗ್ಲೀಷನ್ನೇ ಅವಲಂಬಿಸಬೇಕಾಗಿದೆ. ಆದರೆ ಇಂಗ್ಲಿಷ್ ಉಚ್ಚಾರದಲ್ಲೂ ನಾವು ಎಡವುತ್ತಿರುತ್ತೇವೆ ಎಂಬುದೂ ನಿಜವೇ.''

ಆದರೆ ಕನ್ನಡಿಗರಿಗೆ ಇಂಥ ಯಾವ ಪ್ರಮೇಯವೂ ಬರುವುದಿಲ್ಲ. ಅರೇಬಿಕ್ ಭಾಷೆಯೊಂದನ್ನು ಹೊರತುಪಡಿಸಿ ಭಾರತೀಯ ಮಾತ್ರವಲ್ಲ ವಿಶ್ವದ ಯಾವ ಭಾಷೆಯನ್ನಾದರೂ ಕನ್ನಡ ಮಕ್ಕಳು ಕಲಿಯಬಲ್ಲರು. ಆಶ್ಚರ್ಯದ ವಿಷಯವೆಂದರೆ, ಮೇಲಿನ ಈ ಮಾತುಗಳಿಗೆ ಪೂರಕವಾದ ಅಭಿಪ್ರಾಯವನ್ನೇ ಡಿ.ಎನ್.ಎಸ್. ಹತ್ತು ವರ್ಷದ ಹಿಂದೆ ಬರೆದಿದ್ದಾರೆ – ತಮ್ಮ 'ಭಾಷೆಯ ಬಗೆಗೆ ನೀವೇನು ಬಲ್ಲಿರಿ' ಎಂಬ ಕೃತಿಯಲ್ಲಿ.

– ''ನಿಜಕ್ಕೂ ಒಂದು ಭಾಷೆಯನ್ನು ಕಲಿಯುವ ಅವಶ್ಯಕತೆ ಬಂದರೆ ಚೀನೀ ಭಾಷೆಗಿರುವಂಥ ಅತೀ ಕ್ಲಿಷ್ಟ ವಾದ ಲಿಪಿಯನ್ನೂ ಜನ ಅರಗಿಸಿಕೊಂಡಾರು.''

ಶ್ರೀ ಗಿರೀಶರು ಡಿ.ಎನ್.ಎಸ್.ರವರ ಇಂಥ ಪೂರ್ವಾಪರ ವಿರೋಧವಾದ ವಾಕ್ಯಗಳ, ಹೇಳಿಕೆಗಳ ಉದಾಹರಣೆಯನ್ನೂ ತಮ್ಮ ಗ್ರಂಥದಲ್ಲಿ ವಾಚಕರ ಮುಂದಿಟ್ಟು ಸಕಾರಣವಾಗಿಯೇ ಡಿ.ಎನ್.ಎಸ್. ಕನ್ನಡಿಗರನ್ನು ಹೇಗೆ ತಪ್ಪು ದಾರಿಗೆ ಎಳೆಯುತ್ತಿದ್ದಾರೆಂದು ತೋರಿಸಿಕೊಟ್ಟಿದ್ದಾರೆ. ಮೇಲ್ವರ್ಗ, ಕೆಳವರ್ಗ ಎಂಬ ದ್ವೇಷದ ಬೀಜಾರೋಪಣೆ ಬಹಳ ಹಿಂದೆಯೇ ನಡೆದಿದೆಯಷ್ಟೆ, ಅದನ್ನು ಇನ್ನಷ್ಟು ಪೋಷಿಸಿ ಬೆಳೆಸಲು ಹೊರಟಿರುವ ಇವರ ವಿಚಾರಧಾರೆ ಎಷ್ಟು ಅಪಾಯಕಾರಿ ಎಂಬುದನ್ನು ಕನ್ನಡಿಗರೆಲ್ಲ ಮನಗಾಣಬೇಕಾಗಿದೆ ಎಂದಿದ್ದಾರೆ.

ಇವರ ಇನ್ನೊಂದು ರಾದ್ಧಾಂತವನ್ನು ತಿಳಿಸಲೇಬೇಕು. ಇವರು ಅ, ಆ, ಇ, ಈ ಸ್ವರಮಾಲೆಯನ್ನೂ 'ತಿರುಗ ಮುರುಗ' ಮಾಡಲು ಹೊರಟಿರುವುದು ಮತ್ತೊಂದು 'ಭಂಡತನ'. ಭಾರತೀಯ ಭಾಷೆಗಳ ಸ್ವರ ವರ್ಣಾಕ್ಷರಗಳ ಅನುಕ್ರಮ ಸರಣಿಯ ಹಿಂದಿರುವ ವೈಜ್ಞಾನಿಕ ತತ್ತ್ವವೇ ಇವರಿಗೆ ತಿಳಿದಿಲ್ಲ ಎನ್ನಲೇ? ಅಥವಾ ಮರೆತಿದ್ದಾರೋ? ಮನುಷ್ಯನ ಬಾಯಿ, ನಾಲಗೆ, ಗಂಟಲು, ತುಟಿ, ಮೂಗು ಇವೆಲ್ಲ ಸೇರಿರುವ ಯಂತ್ರವೇ ಈ ಅನುಕ್ರಮಕ್ಕೆ ಆಧಾರವೆಂಬ ಪ್ರಾಥಮಿಕ ಜ್ಞಾನವೇ ಇವರಿಗಿಲ್ಲವೆಂದು ಹೇಗೆ ಹೇಳಲಿ? ವರ್ಣಮಾಲೆಯನ್ನು ಐದು ವರ್ಗಗಳಲ್ಲಿ ವಿಭಜಿಸಿ ಸ್ವರ, ವರ್ಣ, ವರ್ಗೀಯ, ಅವರ್ಗೀಯಗಳೆಂದು ಅತ್ಯಂತ ಪ್ರಾಚೀನ ಕಾಲದಲ್ಲೇ ಪರಿಗ್ರಹಿಸಲಾಗಿತ್ತೆಂದು ತಿಳಿದುಬರುತ್ತದೆ. ಹೀಗಿರುವಾಗ ಭಾಷಾವಿಜ್ಞಾನಿಗೆ ಇಂಥ ಯೋಚನೆ ಏಕೆ ಬಂತು?

ಇವರ ಸಂಸ್ಕೃತ ದ್ವೇಷವು ಇನ್ನಷ್ಟು ಗೊಂದಲಗಳನ್ನು ಹುಟ್ಟಿಸಲು ಕಾರಣವಾಗದಿರದು. ಸಂಸ್ಕೃತವಿಂದು ವಿಶ್ವಮಾನ್ಯ ಭಾಷೆಯಾಗಿ ಬೆಳೆಯುತ್ತಿದೆ. ಪಾಶ್ಚಾತ್ಯರೂ ಸಂಸ್ಕೃತವನ್ನು ಸಂಸ್ಕೃತದ

ಅಪಾರ ಜ್ಞಾನಭಂಡಾರವನ್ನು ತಮ್ಮದಾಗಿಸಿಕೊಳ್ಳಲು ಧಾವಿಸಿ ಬರುತ್ತಿದ್ದಾರೆ. ಇಂಗ್ಲಿಷ್‌ನ್ನೂ ಸೇರಿದಂತೆ ದೇಶೀಯವಾದ ಸಂಸ್ಕೃತಜನ್ಯ ಭಾಷೆಗಳನ್ನು ಕಲಿಯಲು ವಿದ್ಯಾರ್ಥಿಗಳಿಗೆ ಎಲ್ಲ ಅಕ್ಷರಗಳ ಉಚ್ಚಾರ ತಿಳಿಯಬೇಕಾದ್ದು ಅವಶ್ಯ. ವಿಜ್ಞಾನ ವಿಷಯಗಳ ಕಲಿಕೆಗೆ ದೇಶೀಯ ಭಾಷೆಯನ್ನು ಸಮರ್ಥಿಸುವವರಿಗೆ ಪಾರಿಭಾಷಿಕ ಶಬ್ದಗಳ ಅವಶ್ಯಕತೆಯ ಬಗ್ಗೆ ಹೇಳಬೇಕಿಲ್ಲ. 2000 ವರ್ಷಗಳಷ್ಟು ಹಳೆಯದಾದ, ಕನ್ನಡ ಸಂಸ್ಕೃತದ ಹಾಲು ಜೇನಿನಂಥ ಸಂಬಂಧವನ್ನು ಧಿಕ್ಕರಿಸುವ ಅಗತ್ಯವೇನು ಬಂತು? ಬ್ರಿಟೀಷರು 200 ವರ್ಷ ಹಿಂದೆ ಹಚ್ಚಿದ 'ಸಂಸ್ಕೃತ ಮೃತಭಾಷೆ' ಎಂಬ ಹಣೆಪಟ್ಟಿ ಇಂದು ಎಲ್ಲೂ ಪುರಸ್ಕೃತವಾಗಿಲ್ಲವೆಂಬುದಕ್ಕೆ ಸಂಸ್ಕೃತದ ಜನಪ್ರಿಯತೆಯೇ ಸಾಕ್ಷಿ. ಕನ್ನಡಕ್ಕೆ ಸಂಸ್ಕೃತದಿಂದ ಅನ್ಯಾಯವಾಗಿದೆ ಎನ್ನುವವರಿಗೆ ದೃಷ್ಟಿದೋಷವಿದೆ ಎನ್ನಬೇಕಾಗುವುದು. ದಿವಂಗತ ಡಿವಿಜಿ, ಸೇಡಿಯಾಪು ಇವರೆಲ್ಲ ಕನ್ನಡ ಸಂಸ್ಕೃತ ಸಂಬಂಧವು ದಾಯಾದಿ ಸಂಬಂಧವಲ್ಲ. ಮಧುರ ದಾಂಪತ್ಯವೆಂದು ಬಣ್ಣಿಸಿರುವುದು ಸರ್ವವಿದಿತ. ಸಂಸ್ಕೃತದಿಂದ ಕನ್ನಡವು ಸಂಪದ್ಭರಿತ, ಸರ್ವಸುಂದರ ಭಾಷೆಯಾಗಿ ಅರಳಿರುವುದು ಪ್ರತ್ಯಕ್ಷವಾಗಿ ಕಾಣುತ್ತಿರುವಾಗ ಈ ಅಪಸ್ವರವೇಕೆ ಬೇಕು? ಇನ್ನು ಮುಂದೆಯೂ ಸಂಸ್ಕೃತ ಪದಗಳನ್ನು ತಂದು ಕನ್ನಡದಲ್ಲಿ ತುಂಬಬೇಕೆಂದು ಇದರರ್ಥವಲ್ಲ. ಆದರೆ ಈಗಾಗಲೇ ಕನ್ನಡದೊಳಗೆ ಹೊಂದಿಕೊಂಡಿರುವ ಪದಗಳನ್ನು ಕೀಳುವುದು ಸರಿಯಲ್ಲ.

ಇವರ ಹೊಸ ಬರಹವು 'ಕೂಡಲೇ ಜ್ಯಾರಿಯಾಗಲಿ' ಎನ್ನುವ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಿರುವಾಗ ಇವರನ್ನು ತಡೆಯುವುದೆಂತು? ಮುಂದಿನ ಪೀಳಿಗೆಯವರಿಗೆ ಆಗಬಹುದಾದ ಅನ್ಯಾಯವನ್ನು ಶ್ರೀ ಗಿರೀಶರು ವಿವರಿಸಿದ್ದಾರೆ. ಅದರೊಂದಿಗೆ ನನ್ನ ಅನಿಸಿಕೆಗಳನ್ನೂ ಸೇರಿಸಿ ತಿಳಿಸುವ ತುಡಿತ ನನ್ನಲ್ಲೇಳುತ್ತಿದೆ. ಈವರೆಗೆ ಎಲ್ಲ ಅಕ್ಷರಗಳನ್ನು ಓದಬಲ್ಲ, ಬರೆಯಬಲ್ಲ ಇಂದಿನವರಿಂದ ಮುಂದಿನವರು ಪ್ರತ್ಯೇಕಗೊಳ್ಳುವರು. ಈವರೆಗಿನ ಎಲ್ಲ ಸಾಹಿತ್ಯ ಪ್ರಕಾರಗಳನ್ನು ಇಂದಿನ ಯಾವುದೇ ಸಾಹಿತ್ಯ ಕಥೆ, ಕಾದಂಬರಿಗಳನ್ನೂ ಓದಲು ಸಾಧ್ಯವಾಗದು. ಈ ಮಕ್ಕಳಿಗೆ ಕರ್ನಾಟಕದಲ್ಲೆಲ್ಲಾ ಪ್ರಚಾರದಲ್ಲಿರುವ ಪತ್ರಿಕೆಗಳನ್ನು, ಲೈಬ್ರೆರಿಯಲ್ಲಿರುವ ಅಮೂಲ್ಯ ಪುಸ್ತಕ ಭಂಡಾರವನ್ನೂ ಓದಲು ಸಾಧ್ಯವಾಗದು. ಏಕೆಂದರೆ ಅವರಿಗೆ ಎಲ್ಲ ಅಕ್ಷರಗಳ ಪರಿಚಯವೇ ಇರುವುದಿಲ್ಲ. ಭಾರತ ದೇಶ, ಭಾರತಿ ಇವೆಲ್ಲ ಅರ್ಥ ಕಳೆದುಕೊಳ್ಳುವುವು. ತಮಿಳರಂತೆ ಕನ್ನಡಿಗರೂ ಇನ್ನು ಮುಂದೆ ಭಾರತವನ್ನು ಬಹಿಷ್ಕರಿಸಿ, ಇಂಡಿಯಾ ಎನ್ನಬೇಕಾದೀತು. ಸಂಸ್ಕೃತ ಶಬ್ದಸಂಪತ್ತಿನಿಂದ ವಂಚಿತರಾಗಿ ಭಾವಾಭಿವ್ಯಕ್ತಿಗಾಗಿ ಪರದಾಡಬೇಕಾಗುವುದು. ಶಬ್ದಗಳ ಬರಗಾಲವನ್ನು ಅನುಭವಿಸುವರು. ಇತರ ಭಾಷೆಗಳನ್ನೂ ಅವರು ಸರಿಯಾಗಿ ಆಡಲಾರರು. ಏಕೆಂದರೆ ಬಾಲ್ಯದಲ್ಲಿ ಅಕ್ಷರಗಳು ನಮ್ಮ ನಾಲಗೆಯಲ್ಲಿ ಹದಗೊಳ್ಳುತ್ತವೆ. ಮುಂದೆ ವಯಸ್ಸಾದಂತೆ ಅದನ್ನು ಪಳಗಿಸುವುದು ಕಷ್ಟಸಾಧ್ಯ. ನಮ್ಮ ಮಕ್ಕಳಿಗೆ ಇಂಥ ದುರ್ಗತಿ ಬೇಕೇ?

ಸಂಸ್ಕೃತವನ್ನು ಹೊರಗಟ್ಟಬೇಕೆಂಬ ಹಠದಿಂದ ಹಿಂದೆಂದೂ ಪ್ರಯೋಗದಲ್ಲಿಲ್ಲದ ಪದಗಳನ್ನು ಸೃಷ್ಟಿಸಿ ತಮ್ಮ ಇಂದಿನ ಬರಹಗಳಲ್ಲಿ ಬಳಸುತ್ತಿದ್ದಾರೆ. 'ಮಾತಾಡುವವ' ಶಬ್ದಕ್ಕೆ ಬದಲಾಗಿ 'ಆಡುಗ', ನೋಡುವವನಿಗೆ 'ನೋಡುಗ', ವಿಜ್ಞಾನಿ ಪದಕ್ಕೆ 'ಅರಿಗ', ವಿಜ್ಞಾನಕ್ಕೆ 'ಅರಿಮೆ', ಸಂಶೋಧನೆಗೆ 'ಅರಕೆ', ಮೃಗ ಶಬ್ದಕ್ಕೆ 'ಮಿಗ'! ಏತಕ್ಕಾಗಿ ಇವೆಲ್ಲಾ ಅವಾಂತರಗಳು? ಇದರಿಂದಾಗುವ ಲಾಭವೇನು? – ಇಲ್ಲಿ ನೋಡುಗ ಎಂಬುದು ಇತ್ತೀಚೆಗೆ ಪ್ರಚಾರದಲ್ಲಿದೆ, ಸ್ವೀಕಾರವೆಂದು ಒಪ್ಪಿಕೊಳ್ಳೋಣ. ಏಕೆಂದರೆ 'ನೋಡು' ಎಂಬ ಶಬ್ದಕ್ಕೆ ಒಂದೇ ಅರ್ಥವಿರುವದರಿಂದ. ಆದರೆ ಆಡುಗ ಶಬ್ದಲ್ಲಿ ಆಡುವವನು ಶಬ್ದಕ್ಕೆ ಆಡುಗ ಪ್ರಯೋಗವಾದರೆ ಸ್ವಲ್ಪ ವಿಚಿತ್ರವೆನಿಸುವುದಿಲ್ಲವೇ? (ಆಡು = ಆಟವಾಡು, ಅಲ್ಲಾಡು, ಮಾತಾಡು, ಕೊನೆಗೊಂದು ಚತುಷ್ಪಾದ ಪ್ರಾಣಿ ಆಡು). ಇನ್ನು

‘ತಿರುಳು’ ಎಂದರೆ ಸಾರಾಂಶ ಎಂದು ಡಿ.ಎನ್.ಎಸ್. ಹೇಳುತ್ತಾರೆ. ಶ್ರೀ ಕೇ.ವಿ. ನಾರಾಯಣರೂ ಇವರಂತೆ ಸಂಸ್ಕೃತದಿಂದ ಬಾಧೆಗೊಳಗಾದವರೇ. ಅವರು ‘ತಿರುಳು’ ಎಂದು ಪ್ರಯೋಗಿಸುವುದು ಅರ್ಥ ಎಂಬ ಅರ್ಥದಲ್ಲಿ. ಶ್ರೀ ಗಿರೀಶರು ಮಾರ್ಮಿಕವಾಗಿ ಹೀಗೆ ಮುಂದುವರಿಸುತ್ತಾರೆ – ‘‘ಅರ್ಥ ಎನ್ನುವುದಕ್ಕೆ ಡಿ.ಎನ್.ಎಸ್. ‘ಹುರುಳು’ ಪ್ರಯೋಗಿಸಬೇಕೆನ್ನುತ್ತಾರೆ. ಸರಳವಾಗಿರುವ ‘ಅರ್ಥ’ವನ್ನು ನೂಕಿ ಹುರುಳು ಕೂರಬೇಕೆಂದಿಲ್ಲವಾದರೂ ಅದನ್ನು ಬಳಸುವುದರಲ್ಲಿ ತಿರುಳಿಗಿಂತ ಹೆಚ್ಚು ಹುರುಳಿದೆ!’’

ಡಿ.ಎನ್.ಎಸ್. ತಮ್ಮ ಹೊಸ ಪ್ರಯೋಗಗಳಿಗೆ ಹೊಸ ನಿಘಂಟು ಬರೆದಿದ್ದಾರೆ. ಇವೆಲ್ಲ ‘ಉದರನಿಮಿತ್ತಂ ಬಹುಕೃಷವೇಷಂ’ ಎಂದು ಭಾಸವಾದರೆ ಆಶ್ಚರ್ಯವಿಲ್ಲ!

ಯಾರಿಗೂ ಅರ್ಥವಾಗದ ಇವರ ಅರಿಮೆ, ಅರಕೆ, ಅರಿಗ ಇವೆಲ್ಲ ಜನರ ಬಾಯಲ್ಲಿ ಹರಿಮೆ, ಹರಿಗ, ಹರಕೆ ಎಂದಾಗಿ ಹೋದರೆ? ಅದಕ್ಕಾಗಿ ಈಗಲೇ ಇವರ ‘ನಿಘಂಟು’ವಿನಲ್ಲಿ ಉಲ್ಲೇಖಿಸುವುದು ಒಳ್ಳೆಯದೆಂದು ನನ್ನ ಸಲಹೆ! ಇದು ವ್ಯಂಗ್ಯವಲ್ಲ. ಯಾಕೆಂದರೆ, ಕರ್ನಾಟಕದ ಹಲವು ಭಾಗಗಳಲ್ಲಿ ಇವು ಸಹಜ ಉಚ್ಚಾರಣೆಗಳು.

ಸಂಸ್ಕೃತದ ‘ಭೂತ’ವನ್ನು ಹೊಡೆದೋಡಿಸಲು ಹರಸಾಹಸ ಪಡುತ್ತಿರುವ ಇವರ ‘ಮಿಗ’ ಶಬ್ದಕ್ಕೆ ನಿಘಂಟುವಿನಲ್ಲಿ ‘ಮೃಗ’ವನ್ನು ನೋಡಬೇಕೆಂದಾದರೆ ‘ಮಿಗ’ ಏತಕ್ಕಾಗಿ ಮೃಗವೇ ಸಾಲದೇ? ಎಂದು ಎಂ.ಎ. ಹೆಗಡೆಯವರು ಪ್ರಶ್ನಿಸುತ್ತಾರೆ.

ವಿಮಾನ ಶಬ್ದವು ಕನ್ನಡದಲ್ಲಿ ಪ್ರಯೋಗ ಪಡೆದು ಸಾವಿರ ವರ್ಷಗಳೇ ಕಳೆದಿರಬಹುದು. ಅಂಥ ವಿಮಾನಕ್ಕೆ ನಡೆಮಾಡ, ಬಾನೋಡ, ಹಕ್ಕಿ, ಪಾರು ಇವುಗಳನ್ನುಪಯೋಗಿಸುವ ಅಗತ್ಯ ವಿದೆಯೇ? ಕೊನೆಪಕ್ಷ ಹೊಂದಿಕೆಯಾದರೂ ಇದೆಯೇ? ಒಂದು ಶಬ್ದವು ಸಂಪೂರ್ಣ ಅರ್ಥ ವ್ಯಕ್ತಪಡಿಸುವುದರೊಂದಿಗೆ ನಮ್ಮ ಕಿವಿ, ನಾಲಗೆಗಳಿಗೂ ಅಪ್ಯಾಯಮಾನವಾಗಿದ್ದರೆ ಮಾತ್ರ ಅದನ್ನು ಸರಿಯಾದ ಪ್ರತಿಶಬ್ದ ಎನ್ನಬಹುದೇ ವಿನಾ ಏನೇನೋ ಅಕ್ಷರ ಜೋಡಿಸಿ ಅದಕ್ಕೆ ಈ ಅರ್ಥ ಎಂದು ಹೇಳಿದರೆ ಒಪ್ಪುವವರಾರು? ಇದುವರೆಗೆ ಪ್ರಯೋಗದಲ್ಲಿಲ್ಲದ ಪದಗಳನ್ನು ಇದೇ ಕನ್ನಡ ಪದವೆಂದು ಹೇಳಿ ಅಪಾರ್ಥಕ್ಕೆ ಎಡೆಮಾಡುವ ಹೊಸ ಶಬ್ದಗಳಿಂದ ಆಗುವ ಪ್ರಯೋಜನವೆಂದರೆ ಗೊಂದಲ ಮಾತ್ರ.

ತಮಿಳಿನಲ್ಲಿ ಅಕ್ಷರಗಳ ಕೊರತೆಯಿದೆ. ಉಚ್ಚಾರಕ್ಕೂ ಬರಹಕ್ಕೂ ಇರುವ ವ್ಯತ್ಯಾಸವನ್ನು ಅರಿಯಲಾರದಷ್ಟು ಮೂಢರು ಕನ್ನಡಿಗರಲ್ಲ. ಓದುವಂತೆ ಬರಹ ಎನ್ನುವ ಡಿ.ಎನ್.ಎಸ್.ರಿಗೆ ಮತ್ಸರಿಗಳಾದ ತಮಿಳರು ಮಾದರಿಯಾದುದು ಹೇಗೆ? ಇದೊಂದು ಆಶ್ಚರ್ಯದ ಸಂಗತಿಯೇ.

ಇಂದಿನ ರಾಷ್ಟ್ರೀಯ ಶಿಕ್ಷಣ ಅಭಿಯಾನದಲ್ಲಿ, ಅತ್ಯಾಧುನಿಕ ತಾಂತ್ರಿಕ ಶಿಕ್ಷಣವನ್ನು ಪ್ರಾದೇಶಿಕ ಭಾಷೆಗಳಲ್ಲಿ ಕಲಿಸುವ ಸಂದರ್ಭದಲ್ಲಿ, ಪಠ್ಯಪುಸ್ತಕಗಳ ನಿರ್ಮಾಣವೂ ಏಕರೂಪ ಹೊಂದಿರಬೇಕಾದ್ದು ಅನಿವಾರ್ಯ ಮಾತ್ರವಲ್ಲ ವ್ಯಾವಹಾರಿಕ ಅನುಕೂಲಗಳೂ ಇದರ ಮೂಲ ಉದ್ದೇಶ. ನಾವೆಲ್ಲ ತಿಳಿದಂತೆ ವಿಜ್ಞಾನಕ್ಕೆ ಸಂಬಂಧಪಟ್ಟ ಎಲ್ಲ ಗ್ರಂಥಗಳು ಆಂಗ್ಲ ಭಾಷೆಯಲ್ಲಿರುವುದರಿಂದ ದೇಶೀಯ ಭಾಷೆಗೆ ಅವುಗಳನ್ನು ಭಾಷಾಂತರಿಸುವುದೂ ಅನಿವಾರ್ಯವಷ್ಟೆ? ಏಕರೂಪತೆ ಇದ್ದಷ್ಟು ವಿದ್ಯಾರ್ಥಿಗಳಿಗೆ ಅನುಕೂಲವೆಂಬುದೂ ವಾಸ್ತವ. ಎಲ್ಲ ದೇಶೀಯ ಭಾಷಾ ಗ್ರಂಥಕರ್ತರು ಪಾರಿಭಾಷಿಕ ಪದಗಳ ಸೃಷ್ಟಿ ಮತ್ತು ಪ್ರಯೋಗಕ್ಕೆ ಸಂಸ್ಕೃತವನ್ನು ಅವಲಂಬಿಸುತ್ತಿರುವ ಸಂದರ್ಭದಲ್ಲಿ ಕನ್ನಡ ವಿದ್ಯಾರ್ಥಿಗಳಿಗೆ ಸಂಸ್ಕೃತ ನಿಷೇಧಿಸುವ ಡಿ.ಎನ್.ಎಸ್. ಯಾವ ಉದ್ದೇಶವಿಟ್ಟುಕೊಂಡಿದ್ದಾರೆ? ಇವರು ಮಾಡುತ್ತಿರುವುದು ದಲಿತರಿಗೆ, ಕೆಳವರ್ಗದವರಿಗೆ ಉಪಕಾರವೋ, ಉಪಟಳವೋ?

ನಿರಂತರವಾಗಿ ಸಂಶೋಧನೆಯಲ್ಲೇ ತೊಡಗಿಸಿಕೊಂಡು ಕೊನೆಗೆ ಈ ಮಟ್ಟದಲ್ಲಿ ಡಿ.ಎನ್.ಎಸ್.

ತಮ್ಮ ಪಥವನ್ನು ಬದಲಾಯಿಸಿಕೊಂಡಿರುವುದು ನಿಜಕ್ಕೂ ಶೋಚನೀಯವೇ. ಭಾಷೆಯೆಂಬುದು ಒಂದು ಸಂಸ್ಕೃತಿಯ ದರ್ಪಣ. ಒಂದು ಜನಾಂಗದ ಅಸ್ತಿತ್ವದ ಪ್ರಶ್ನೆ. ಈ ವಿಷಯದಲ್ಲಿ ನೆಂಟರು ಇಷ್ಟರು ಇವೆಲ್ಲ ಗೌಣವೆನಿಸುತ್ತದೆ. ಹತ್ತಿರದ ಬಳಗವೆಂದು ಸುಮ್ಮನಿರುವಂತಿಲ್ಲ. ಕಿವಿಗೆ ಹುಳು ಹೊಕ್ಕರೆ ಉಪ್ಪುನೀರು ಸುರಿದು ಹುಳುವನ್ನು ಹೊರಗೋಡಿಸಬಹುದು. ಆದರೆ ಹುಳು ಹೊಕ್ಕು ಕೀವಾದರೆ ಶಸ್ತ್ರಚಿಕಿತ್ಸೆ ಅನಿವಾರ್ಯ. ಅದಕ್ಕಾಗಿ ವ್ಯಸನಪಡುತ್ತೇನೆ. ಡಾ. ಬಿ.ವಿ. ವಸಂತಕುಮಾರರ ಮಾತಿನಲ್ಲಿ ಹೇಳುವುದಾದರೆ – ಡಿ.ಎನ್.ಎಸ್. ಹಾದಿಯೆಂದರೆ, ''ಇದು ಅಪ್ಪನ ಹೆಗಲೇರಿ ಕುಳಿತು ಜಗತ್ತನ್ನು ನೋಡಿ ಆ ಬಳಿಕ ಅಪ್ಪನ ಕತ್ತು ಹಿಸುಕಿ ಕೊಲ್ಲುವ ಪರಿ.'' 'ಚಿಂತನ ಬಯಲು' ಪತ್ರಿಕೆಯಲ್ಲಿ ಮಾಧವ ಪೆರಾಜೆ ಹಾಗೂ ಮೋಹನ ಕುಂಟಾರು ಇಂಥವರ ಲೇಖನಗಳು ಈ ನಿಟ್ಟಿನಲ್ಲಿ ಗಮನಾರ್ಹವಾಗಿವೆ, ಶ್ಲಾಘನೀಯವಾಗಿವೆ.

**ಟಿಪ್ಪಣಿ**

ಡಾ. ಬಿ.ವಿ. ವಸಂತಕುಮಾರರು ದಿನಾಂಕ 17 ಫೆಬ್ರವರಿ 2012ರ ರಾತ್ರಿ 9.15ರಂದು ಮೈಸೂರು ಆಕಾಶವಾಣಿಯಲ್ಲಿ ವ್ಯಾಕರಣದ ಕುರಿತು ನಡೆಯುತ್ತಿರುವ ವಾದಗಳ ಬಗ್ಗೆ ವಿವರಿಸುತ್ತಾ, ಕನ್ನಡ ವಾಙ್ಮಯವನ್ನು ಬೆಳೆಯಿಸಿ ಅರಳಿಸಿದ ನಮ್ಮ ಹಿರಿಯರ ಮಹತ್ವಪೂರ್ಣ ಕೊಡುಗೆಗಳನ್ನು ಸಮರ್ಥಿಸುತ್ತಾ ಕನ್ನಡವನ್ನು ದುರ್ಬಲಗೊಳಿಸುವ ಪ್ರಮಾದವನ್ನು ಯಾರೊಬ್ಬನೂ ಮಾಡಕೂಡದೆಂದು ಎಚ್ಚರಿಕೆಯನ್ನೂ ನೀಡಿದರು. ವಿವೇಕಪೂರ್ಣವಾದ ಹಿತವಚನಗಳಿಂದ ಕೂಡಿದ ವ್ಯಾಖ್ಯಾನದಲ್ಲಿ ಡಾ. ವಸಂತಕುಮಾರರು ಕುಲಕ್ಕೆ ಕೊಡಲಿಯಾಗುವ, ಹೆತ್ತತಾಯನ್ನೇ ನಿರಾಕರಿಸುವ, ಆತ್ಮವಂಚನೆ ಮಾಡಿಕೊಳ್ಳುತ್ತಿರುವವರ ಬಗ್ಗೆ ಮತ್ತು ಅವುಗಳ ಪರಿಣಾಮಗಳ ಬಗ್ಗೆಯೂ ಕನ್ನಡಿಗರಿಗೆ ಮನವರಿಕೆ ಮಾಡುವ ಅಗತ್ಯವಿದೆಯೆಂದೂ ವಿವರಿಸಿದರು. ಶ್ರೀಯುತರಂತೆ ಕನ್ನಡಕ್ಕಾಗಿ ಕೈಎತ್ತುವವರು ಇನ್ನೂ ನಮ್ಮಲ್ಲಿದ್ದಾರೆಂದು ಇದರಿಂದ ಸ್ಫುಟವಾಯಿತು. ಸಮಾಧಾನವೂ ಆಯಿತು.

ಬುದ್ಧನಾಗಲು ಸಿದ್ಧ ಎದ್ದು ಹೊರಟಿದ್ದ
ಬದ್ಧಜೀವನಕಾಗಿ ಯಶೋಧರೆ
ಸಿದ್ಧಮನವನು ಬಿಟ್ಟೆದ್ದು ಪ್ರ–ಬುದ್ಧೆಯಾದಳು

‘ಚಿಂತನ ಬಯಲು’ ಮೂರನೆ ಸಂಚಿಕೆಯು ಮೂರು ‘ತರ್ಕಬದ್ಧ’ ಲೇಖನಗಳನ್ನೂ ಎರಡು ಮಾಹಿತಿಪೂರ್ಣ ಬರಹಗಳನ್ನೂ ಒಂದು ಪ್ರತಿಕ್ರಿಯಾತ್ಮಕ ಅಭಿಪ್ರಾಯ ಲೇಖನವನ್ನೂ ಮತ್ತು ಮೂರು ಪುಸ್ತಕ ಕುರಿತ ಲೇಖನಗಳನ್ನೂ ಹೊಂದಿರುವ ಮೂಲಕ ವೈವಿಧ್ಯಯುತವಾಗಿಯೇನೂ ಇದೆ. ಆದರೆ ಒಟ್ಟಾರೆಯಾಗಿ ಹೇಳುವುದಾದರೆ ಈ ಹಿಂದಿನ ಸಂಚಿಕೆಗಳಲ್ಲಿಯ ಲೇಖನಗಳಿರುವ ಆಳವು ಈ ಸಂಚಿಕೆಯ ಲೇಖನಗಳಿಗಿಲ್ಲ.

‘ತರ್ಕಬದ್ಧ’ ಮೂರು ಲೇಖನಗಳನ್ನು ಹೊರತುಪಡಿಸಿ ಉಳಿದ ಬರಹಗಳ ಕುರಿತು ಪ್ರತಿಕ್ರಿಯೆಯಾಗಿ ದಾಖಲಿಸುವಂತಹ ಮೌಲಿಕ ಅಭಿಪ್ರಾಯ ನಾಸ್ತಿ. ಅವೆಲ್ಲ ‘ಸಾಮಾನ್ಯ’ ಬರಹಗಳು ಅಷ್ಟೆ.

‘ಅಸಾಮಾನ್ಯ’ವೆನ್ನಬಹುದಾದ ಮೂರು ಲೇಖನಗಳ ಕುರಿತು ನನ್ನ ಅವಲೋಕನ ಇಂತಿದೆ.

ವಿಧಿ ಆಚರಣೆ ಕುರಿತ ಲೇಖನವು ಆಚರಣೆಯೊಂದನ್ನೆತ್ತಿಕೊಂಡು, ಅದನ್ನು ಒಳಹೊಕ್ಕು ಅರಿಯುವ ಬದಲು ಅದನ್ನು ತರ್ಕದ ಒರೆಗೆ ಹಚ್ಚಿ ಒಂದಷ್ಟು ಪ್ರಶ್ನೆಗಳನ್ನೆಸೆಯುವುದರಲ್ಲೇ ತೃಪ್ತಿಹೊಂದಿಬಿಟ್ಟಿದೆ. ಕೇಡಿನಿಂದ ಪಾರಾಗಲು ಅಥವಾ ಒಳಿತನ್ನು ಹೊಂದಲು ನಾವು ಆಶ್ರಯಿಸಿರುವ ದೇವರೆಂಬ ನಂಬಿಕೆಯ ಹಲವು ಕೂಸುಗಳಲ್ಲಿ ವಿಧಿ ಆಚರಣೆಯೂ ಒಂದು. ಈ ನಂಬಿಕೆ ಮತ್ತು ಅದರ ಕೂಸಿನ ಹುಟ್ಟು ಮತ್ತು ಅದಕ್ಕೂ ಪೂರ್ವದ ಗರ್ಭಧಾರಣ ಈ ಎರಡು ಸಂಗತಿಗಳ ಬೆಳಕಿನಲ್ಲಿ ವಿಧಿ ಆಚರಣೆಯ ವಿಶ್ಲೇಷಣೆ ನಡೆದಿದ್ದಲ್ಲಿ ಈ ಲೇಖನವು ವಾಸ್ತವಾಂಶದ ವಿವರಣೆಯಾಗಿ ಸಾರ್ಥಕ್ಯ ಹೊಂದುತ್ತಿತ್ತು.

ವಚನ ಸಾಹಿತ್ಯ ಕುರಿತ ಮತ್ತು ಲಿಂಗಾಯತ ವರ್ಗ ಕುರಿತ ಲೇಖನಗಳೂ ವಾಸ್ತವಾಂಶದ ಪರಿಶೀಲನೆಗಿಂತ ತರ್ಕವನ್ನೇ ಪ್ರಧಾನವಾಗಿಸಿಕೊಂಡಿವೆ. ವಚನಸಾಹಿತ್ಯವಾಗಲೀ ಲಿಂಗಾಯತ ವರ್ಗವಾಗಲೀ ಹುಟ್ಟಿದ್ದು ಏಕೆ ಮತ್ತು ಹೇಗೆ ಎಂಬುದನ್ನು ಮುಖ್ಯವಾಗಿಟ್ಟುಕೊಂಡು ಯೋಚಿಸಿದಾಗ (ಮತ್ತು ಅವಲೋಕಿಸಿದಾಗ) ಮಾತ್ರ, ‘ವಚನ ಸಾಹಿತ್ಯವು ಜಾತಿವ್ಯವಸ್ಥೆಯ ವಿರುದ್ಧ ಮಾತನಾಡುತ್ತದೆಯೇ’? ಎಂಬ ಪ್ರಶ್ನೆಗೆ ಮತ್ತು ‘ಲಿಂಗಾಯತ : ರಿಲಿಜನ್, ಜಾತಿ ಅಥವಾ ಸಂಪ್ರದಾಯ?’ ಎಂಬ ಪ್ರಶ್ನೆಗೆ ನಿಖರವೂ, ಸಮರ್ಪಕವೂ ಆದ ಉತ್ತರಗಳನ್ನು ಕಂಡುಕೊಳ್ಳಲು ಸಾಧ್ಯ. ಉಪಖಂಡದ ವಿವಿಧೆಡೆಗಳ ಜೀವನಕ್ರಮಗಳ ಸಮನ್ವಯ ರೂಪವು ಹಿಂದೂ ಧರ್ಮವೆಂಬ ಹೆಸರನ್ನು ಹೊಂದಿ, ಕಾಲಕ್ರಮದಲ್ಲಿ ಜಾತಿ–ಪಂಗಡಗಳ ಹಣೆಪಟ್ಟಿಗಳನ್ನು ಅಂಟಿಸಿಕೊಂಡು, ರಿಲಿಜನ್ ಎಂದು ಅಪಾರ್ಥಕ್ಕೀಡಾದುದರ ಜೊತೆ ಜೊತೆಗೇ ರಿಲಿಜನ್ನಿನ ಗುಣಸ್ವರೂಪಗಳನ್ನು ಆವಾಹಿಸಿಕೊಳ್ಳುತ್ತಲೂ ಸಾಗಿತು. ಇಂಥ ‘ಹಿಂದು ಧರ್ಮ’ವನ್ನು ಪ್ರಧಾನವಾಗಿ ಎದುರಿಟ್ಟುಕೊಂಡು, ಜೊತೆಯಲ್ಲಿ ‘ಹಿಂದು ಧರ್ಮ’ದ ಉಪಧರ್ಮಗಳಂತೆ ಬಿಂಬಿತವಾದ ಜೈನ ಮತ್ತು ಬೌದ್ಧ ಧರ್ಮಗಳನ್ನೂ ಗಮನಿಸಿ, ಸಿಮಿಟಿಕ್ ರಿಲಿಜನ್‌ಗಳಾದ ಕ್ರಿಶ್ಚಿಯನ್ ಮತ್ತು ಇಸ್ಲಾಂ ಮತಧರ್ಮಗಳ ರೂಪುರೇಷೆಯ ಅರಿವನ್ನೂ ಹೊಂದಿದ್ದು, ಕನ್ನಡನಾಡಿನ ಹಲವು ವಿಚಾರಶೀಲರು ಸಮಾಜದಲ್ಲುಂಟು

ಮಾಡಲೆತ್ನಿಸಿದ 'ಜೀವನವಿಧಾನದ ಮತ್ತು ಜೀವನದೃಷ್ಟಿಯ ಬದಲಾವಣೆ'ಗೆ ತಳಹದಿಯೂ (ಅನಂತರ) ಸಾಧನವೂ ಆಗಿ ವಚನಸಾಹಿತ್ಯವು ಮೂಡಿಬಂದರೆ, ತತ್ಫಲವಾಗಿ ಮಾರ್ಪಾಟು ಹೊಂದಿದ ಸಮುದಾಯವು 'ಲಿಂಗಾಯತ' ಎನ್ನಿಸಿಕೊಂಡಿತು. ಈ ವಾಸ್ತವದ ಹಿನ್ನೆಲೆಯಲ್ಲಿ ಈ ಉಭಯ ಲೇಖನಗಳೂ ಯೋಚಿಸಿದ್ದಲ್ಲಿ ಅವು ಸತ್ಯಕ್ಕೆ (ಇನ್ನಷ್ಟು) ಹತ್ತಿರವಾಗುತ್ತಿದ್ದವು.

ಜೀವನಾರ್ಥ ಶೋಧದ ಫಲವಾಗಿ ಮತ್ತು ಅನುಭವ – ಅನುಭಾವಗಳ ಬಲದಿಂದ ಹುಟ್ಟಿದ ವಚನ ಸಾಹಿತ್ಯವು ಇಂದು, ಲಿಂಗಾಯತರಿಗೆ (ಮಾತ್ರ) ಸಂಬಂಧಿಸಿದುದೆಂಬ ತಪ್ಪು ಕಲ್ಪನೆಗೀಡಾಗಿರುವುದು, ಮತ್ತು ಲಿಂಗಾಯತ ಧರ್ಮವೆಂಬ ಜೀವನಕ್ರಮವು ಜಾತಿ – ಉಪಜಾತಿಗಳ ಹಣೆಪಟ್ಟಿ ಅಂಟಿಸಿಕೊಂಡು, ಮೂಲೋದ್ದೇಶಿತ ಜೀವನದೃಷ್ಟಿಯಿಂದಲೇ (ಅಂದಿನ ವಿಚಾರಕ್ರಾಂತಿಯಿಂದಲೇ) ದೂರ ಸರಿಯುತ್ತಿರುವುದು ಸ್ವಾಗತಾರ್ಹ ಬೆಳವಣಿಗೆಯೇನಲ್ಲ.

ಈ ಸಂಚಿಕೆಯ ಕೆಲವು ಪದದೋಷಗಳ ಬಗ್ಗೆಯೂ ಹೇಳಬೇಕು. 'ತಿಳಿವಳಿಕೆ' ಎಂದು (ಪ್ರತಿಕ್ರಿಯೆಯಲ್ಲಿ) ನಾನು ಸರಿಯಾಗಿ ಬರೆದಿದ್ದಾಗ್ಯೂ ಮುದ್ರಣದಲ್ಲಿ ಅದು 'ತಿಳುವಳಿಕೆ' ಆಗಿದೆ. ನನ್ನ ಬರಹ ಮಾತ್ರವಲ್ಲ, ಎಲ್ಲರ ಬರಹಗಳಲ್ಲೂ 'ತಿಳುವಳಿಕೆ'ಯೇ ಎದ್ದು ಕಾಣುತ್ತಿದೆ! ವಿವಿಧ ಬರಹಗಳಲ್ಲಿ, 'ಮೌಢ್ಯತೆ, ಚಳುವಳಿ, ಪೂರ್ವಾಗ್ರಹ, ಮೌಲಿಕತೆ' ಇಂತಹ ತಪ್ಪು ಪದಪ್ರಯೋಗಗಳಿವೆ. ಬರಹವೊಂದರ ಒಂದು ವಾಕ್ಯದಲ್ಲೇ, 'ಆಧಾರಿತ, ಆಧರಿತ' ಈ ಎರಡೂ ಪ್ರಯೋಗಗಳು ನಡೆದಿವೆ! ಲೇಖಕರು ತಪ್ಪಾಗಿ ಬರೆದರೂ ಮುದ್ರಿಸುವಾಗ ತಪ್ಪು ತಿದ್ದಲ್ಪಟ್ಟಿರಬೇಕೆಂದು 'ಚಿಂತನ ಬಯಲು' ಅಂತಹ ಪತ್ರಿಕೆಯಿಂದ ನಾನು ಬಯಸುತ್ತೇನೆ. ಮೌಢ್ಯತೆಯಿಂದ ಕೂಡಿಕೊಂಡು ಚಳುವಳಿಯನ್ನು ಬದಿಗಿಕ್ಕಿ ಪೂರ್ವಾಗ್ರಹ ಹೊಂದಿ ಮೌಲಿಕತೆಯನ್ನು ಕಡೆಗಣಿಸುವ, ತಿಳುವಳಿಕೆಯಿಲ್ಲದ ಬುದ್ಧಿ ನಮ್ಮದಾಗಿರಲಿ. ಮೌಢ್ಯವನ್ನು ತೊರೆದು ಚಳವಳಿಗಿಳಿದು ಪೂರ್ವಗ್ರಹ ತೊಡೆದು ಮೌಲ್ಯವನ್ನು ಗುರುತಿಸುವ ತಿಳಿವಳಿಕೆ ನಮಗೆ ಬರಲಿ.

**ಎಚ್. ಆನಂದರಾಮ ಶಾಸ್ತ್ರೀ , ಬೆಂಗಳೂರು**

ಪ್ರಿಯರೆ,

ಈ ತಿಂಗಳ ಸಂಚಿಕೆ ತುಂಬಾ ಚೆನ್ನಾಗಿ ಬಂದಿದೆ. ಅದರಲ್ಲೂ 'ವಚನ ಸಾಹಿತ್ಯವು ಜಾತೀಯತೆಯ ವಿರುದ್ಧ ಮಾತಾಡುತ್ತಿದೆಯೇ' ಎಂಬ ಲೇಖನ ವಚನಗಳ ಅಧ್ಯಯನ ಕ್ಷೇತ್ರದಲ್ಲಿ Pardigm Shiftನ್ನು ಉಂಟುಮಾಡಬಲ್ಲ ಘನವಾದ, ಅದ್ಭುತ ಎನ್ನಬಹುದಾದ ಲೇಖನ. 'ಲಿಂಗಾಯತ ರಿಲಿಜನ್' ಸಹ ಉತ್ತಮ ಲೇಖನವಾಗಿದೆ. ಇಂತಹ ಲೇಖನಗಳು 'ಸ್ವಬೋಧ ಪರಿಶುದ್ಧ್ಯರ್ಥಂ' ಎಂಬಂತೆ ವಿದ್ವಾಂಸರು ಮತ್ತು ಸಾಮಾನ್ಯರು ತಮ್ಮ ತಿಳುವಳಿಕೆ ಸರಿಯೇ ಎಂದು ಪುನರ್ವಿಮರ್ಶೆ ಮಾಡಿಕೊಳ್ಳುವಂತೆ ಒತ್ತಾಯಿಸುತ್ತವೆ. ಇಂಥ ಮೌಲಿಕ ಲೇಖನಗಳನ್ನು ಪ್ರಕಟಿಸಿದುದಕ್ಕಾಗಿ ಅಭಿನಂದನೆಗಳು ಹಾಗೂ ಕೃತಜ್ಞತೆಗಳು.

ಡಾ. ಶಂಕರ ಭಟ್ಟರ ವಿಕ್ಷಿಪ್ತವಾದಗಳ ಬಗ್ಗೆ ಆನಂದರಾಮ ಶಾಸ್ತ್ರಿಗಳು ಹೇಳಿದ್ದು ನನಗೆ ಸರಿಯೆನಿಸುತ್ತದೆ. ಹಾಗೆಯೇ ಮೋಹನ ಕುಂಟಾರ್ ಅವರ ವಿಚಾರಗಳೂ ನನಗೆ ಸಮ್ಮತವಾಗಿವೆ.

**ಬಿ.ವಿ. ಕೆದಿಲಾಯ**

ಬೆಂಗಳೂರು

ಡಂಕಿನ್ ಝಳಕಿ ಮತ್ತು ಎನ್ ಎಸ್ ಬಾಲಗಂಗಾಧರ ಇವರು ಜಂಟಿಯಾಗಿ ಬರೆದ ಲೇಖನ ಓದಿದೆ. ಅವರ ಸಂಶೋಧನೆಗಳು ನಿಜಕ್ಕೂ ಹೊಸತಾಗಿದೆ. ಪಾಶ್ಚಾತ್ಯರು ನಮ್ಮ ದೇಶದ ಕುರಿತಾಗಿ ಬರೆದ ಇತಿಹಾಸವನ್ನೇ ನಾವು ಒಪ್ಪಿಕೊಂಡು, ಅದನ್ನೇ ನಿತ್ಯ ಸತ್ಯ ಎಂದು ತಿಳಿದು ಹಾದಿ ತಪ್ಪಿದ್ದೇವೆ. ವಸಾಹತುಶಾಹಿ ಎಂಬುದು ನಮ್ಮ ಬದುಕಿನ ಒಂದು ಅವಿಭಾಜ್ಯ ಅಂಗವಾ ಆಗಿಬಿಟ್ಟಿದೆ. ಅವರ ಈ ವಾದದಲ್ಲಿ ಬಹಳಷ್ಟು ಸತ್ಯವಿದೆ. ನಾವು ನಮ್ಮ ಮಕ್ಕಳಿಗೆ ಸುಳ್ಳು ಇತಿಹಾಸವನ್ನೇ ಕಲಿಸುತ್ತಿದ್ದೇವೆ. ಅದನ್ನು ಸರಿಪಡಿಸಬೇಕಾದದ್ದು ಯಾರು? ಯಾರಿಗೆ ಆ ಅಧಿಕಾರವಿದೆ? ಈಗ ಇವರ, ವಚನಗಳು ಜಾತೀಯತೆಯ ವಿರುದ್ಧವಾಗಿ ಮಾತನಾಡುವುದಿಲ್ಲ ಎಂಬ ವಾದವನ್ನು ನೋಡೋಣ. ಲೇಖಕರು ಹಲವಾರು ಆಧಾರಗಳ ಮೇಲೆ ಈ ತೀರ್ಮಾನಕ್ಕೆ ಬಂದು ತಲುಪಿದ್ದಾರೆ. ಇವರ ವಾದ ಎಷ್ಟರಮಟ್ಟಿಗೆ ಸರಿ? ಅದಕ್ಕೆ ಲೇಖಕರು ನೀಡಿದ ತರ್ಕ ಅಥವಾ ವಾದಗಳು ಎಷ್ಟರಮಟ್ಟಿಗೆ ಸಮಂಜಸ? ನಾನು ನನ್ನ ಓದಿನ ಆಧಾರದ ಮೇಲೆ ಈ ಕೆಳಗಿನ ತರ್ಕವನ್ನು ಮುಂದಿಡುತ್ತಿದ್ದೇನೆ.

ಫ.ಗು. ಹಳಕಟ್ಟಿ ಎಂಬ ವಿದ್ವಾಂಸರು ವೇದಪರಿಣಿತರೂ ಹೌದು ಮತ್ತು ಒಬ್ಬ ನಿಷ್ಠಾವಂತ ವೀರಶೈವ ಅಥವಾ ಲಿಂಗಾಯಿತ. ಅವರ ಮಾತನ್ನು ನಾನು ಕ್ವೋಟ್ ಮಾಡುತ್ತೇನೆ: ''ಈ ವೇದಗಳಲ್ಲಿ ಸ್ಥೂಲ ರೀತಿಯಿಂದ ಜ್ಞಾನಕಾಂಡ, ಕರ್ಮಕಾಂಡ, ಉಪಾಸನಾ ಕಾಂಡಗಳೆಂಬ ಮೂರು ಪ್ರಕಾರ ಇರುತ್ತವೆ. ಇವುಗಳಲ್ಲಿ ಕರ್ಮಕಾಂಡದೊಳಗೆ ಕೇವಲ ಯಜ್ಞಯಾಗಾದಿಗಳನ್ನು ಹೇಳಿರುತ್ತವೆ. ಈ ಯಜ್ಞದ ಅರ್ಥ ಬರಬರುತ್ತ ಬೇರೆ ಬೇರೆ ರೀತಿಯಿಂದ ಮಾಡಿ ಪಶುಗಳ ವಧೆಯನ್ನು ಮಾಡಲಿಕ್ಕೆ ಪ್ರಾರಂಭಿಸಿದರು. ಯಜ್ಞಗಳಲ್ಲಿ ಪಶುಗಳನ್ನು ಕೊಂದದ್ದಾದರೆ ದೋಷವಿಲ್ಲವೆಂದು 'ಮಾಹಿಂಸ್ಯಾತ್ಸರ್ವಭೂತಾನಿ' ಎಂಬ ಸಾಮಾನ್ಯ ಶಾಸ್ತ್ರಕ್ಕೆ ಯಜ್ಞದಲ್ಲಿ ಪಶುಗಳನ್ನು ಕೊಂದರೆ ದೋಷವಿಲ್ಲ ಎಂಬ ವಿಶೇಷ ಶಾಸ್ತ್ರವನ್ನು ಮಾಡಿದರು. ಇಂತಹ ವೇದಪ್ರಮಾಣವನ್ನು ಕೊಟ್ಟು ಹಿಂಸೆಯನ್ನು ಎಲ್ಲೆಡೆಯಲ್ಲಿಯೂ ಮಾಡಲು ಪ್ರವೃತ್ತರಾದರು. ಹಿಂಸೆ ಹೇಳತಕ್ಕವು ವೇದಗಳಾದರೂ ಸರಿ ಅವು ತ್ಯಾಜ್ಯವಾದವುಗಳೆಂದು ಬಸವಣ್ಣನವರು ಅಂತಹ ವೇದಗಳ ವಿರುದ್ಧ ಕರ್ನಾಟಕದಲ್ಲಿ ದೊಡ್ಡ ಬಂಡಾಯವನ್ನೆಬ್ಬಿಸಿದರು. ಹಿಂಸೆಯನ್ನು ಹೇಳತಕ್ಕ ವೇದಭಾಗವನ್ನು ತ್ಯಾಜ್ಯವೆಂದು ಸಾರಿ ಸಾರಿ ಹೇಳಿದರು. ವೇದಗಳಲ್ಲಿ ನಾಲ್ಕು ವರ್ಣಗಳನ್ನು ಹೇಳಿದ್ದರೂ ಅವು ಗುಣಕರ್ಮಗಳಿಂದ ಇರತಕ್ಕವುಗಳೆಂದು ಸಿದ್ಧಪಡಿಸಲಾಗಿದೆ. ಅವುಗಳು ಕಾಲಕ್ರಮದಿಂದ ಜಾತಿಯ ವಾಹಕಗಳಾದವು. ಹೀಗೆ ಮೇಲು, ಕೀಳುಗಳನ್ನು ಹೇಳತಕ್ಕ ವೇದಗಳು ಎಷ್ಟೇ ಹಿರಿಯ ಗ್ರಂಥಗಳಾದರೂ ಬಸವಣ್ಣನವರು ನಿರ್ದಾಕ್ಷಿಣ್ಯವಾಗಿ

ಅವುಗಳನ್ನು ಖಂಡಿಸಿದರು.'' ತಮ್ಮ ವಾದಕ್ಕೆ ಅವರು ಕೊಡುವ ಉದಾಹರಣೆ ಈ ವಚನ.

> ಹೊಲೆಯೊಳಗೆ ಹುಟ್ಟಿ ಕುಲವನರಸುವದಿಲ್ಲವೋ, ಮಾತಂಗಿಯ
> ಮಗ ನೀನು! ಸತ್ತುದವನೆಳೆವನೆತ್ತಣ ಹೊಲೆಯ? ಹೊತ್ತು ಕಂಡು
> ನೀವು ಕೊಲುವಿರಿ. ಶಾಸ್ತ್ರವೆಂಬುದು ಹೋತಿಂಗೆ ಮಾರಿ.
> ವೇದವೆಂಬುದು ನಿಮಗೆ ತಿಳಿಯದು. ನಮ್ಮ ಕೂಡಲಸಂಗಮದೇವನ
> ಶರಣರಾರು ಕರ್ಮವಿರಹಿತರು, ಶರಣಸನ್ನಿಹಿತರು, ಅನುಪಮ
> ಚಿತ್ತರು, ಅವರಿಗೆ ತೋರಲು ಪ್ರತಿ ಇಲ್ಲವೋ!''

ಇದರ ಅರ್ಥ ಹೀಗೆ : ''ಹುಟ್ಟುವುದು ಎಲ್ಲರೂ ಮೈಲಿಗೆಯಲ್ಲಿ, ಹೀಗಿರುವಾಗ ಕುಲವನ್ನು ಹುಡುಕಲು ಹೊರಟಿರುವ ನೀನೇ ಚಾಂಡಾಲ ಸ್ತ್ರೀಯ ಮಗ. ಸತ್ತಂತಹ ಪ್ರಾಣಿಯನ್ನು ಎಳೆದು ತರುವವನು ಚಾಂಡಾಲನಲ್ಲ. ಜೀವವುಳ್ಳ ಪ್ರಾಣಿಯನ್ನು ಎಳೆದು ತಂದು, ನಿಷ್ಕಾರಣವಾಗಿ ಅವನ್ನು ಬಲಿಕೊಡುವ ನೀವು ಹೊಲೆಯರು. ನಿಮ್ಮ ಇಂತಹ ಶಾಸ್ತ್ರವು ಹೋತನಿಗೆ ಮೃತ್ಯುವಾಗಿದೆ. 'ವೇದ' ಎಂಬುದರ ಅರ್ಥವೇ ವೈದಿಕರೆನಿಸಿರುವ ನಿಮಗೆ ತಿಳಿಯದು. ನಮ್ಮ ಕೂಡಲಸಂಗಯ್ಯನ ಶರಣರು ಇಂತಹ ಯಾವ ದುಷ್ಕರ್ಮವನ್ನು ಮಾಡದ ಭಕ್ತರು. ಶಿವನ ಸಮೀಪದಲ್ಲಿರುವವರು. ಉಪಮೆಯೇ ಇಲ್ಲದ ಚಾರಿತ್ರ್ಯವಂತರು. ಅವರಿಗೆ ಸರಿದೂಗುವ ಗುಣಸಾಮರ್ಥ್ಯ ಬೇರೆ ಯಾರಿಗೂ ಇರದು.''

> ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ ವೇದನೋದಿ ಹಾರುವನಾದ
> ವ್ಯಾಸ ಬೋಯಿತಿಯ ಮಗ, ಮಾರ್ಕಾಂಡೇಯ ಮಾತಂಗಿಯ ಮಗ
> ಮಂಡೋದರಿ ಕಪ್ಪೆಯ ಮಗಳು, ಕುಲವನರಸದಿರಿಂ ಭೋ, ಕುಲದಿಂದ
> ಮುನ್ನೇನಾದಿರಿಂ ಭೋ? ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದುರ್ವಾಸ
> ಮಚ್ಚಿಗ, ಕಶ್ಯಪ ಕಮ್ಮಾರ, ಕೌಂಡಿಲ್ಯನೆಂಬ ಋಷಿ ಮೂರು ಭುವನರಿಯೆ
> ನಾಯಿದ ಕಾಣಿಂ ಭೋ, ನಮ್ಮ ಕೂಡಲಸಂಗಮದೇವನ ವಚನವಿಂತೆಂದುದು
> ಶ್ವಪಚೋಪಿಯಾದೊಡೇನು! ಶಿವಭಕ್ತನೇ ಕುಲಜನು.

ವಚನಗಳ ಸಂಖ್ಯೆಯ ಆಧಾರದಲ್ಲಿ ವಚನಗಳ ಧೋರಣೆಯ ಕುರಿತು ಹೀಗೆ ತೀರ್ಪು ನೀಡುವುದು ಎಷ್ಟು ಸಮಂಜಸ? ವಚನಕಾರರಿಗೆ ಕೇವಲ ಜಾತಿ ವಿರುದ್ಧ ಮಾತ್ರ ಸಿಟ್ಟಿರಲಿಲ್ಲ. ಎಲ್ಲ ಬಗೆಯ ಅಸಮಾನತೆಯ ಬಗ್ಗೆ ಕಿಡಿ ಕಾರಿದ್ದರು. ಶೂದ್ರರ ಸಂಘಟನೆ, ಮಹಿಳೆಯರ ಸ್ವಾತಂತ್ರ್ಯ, ಹಲವಾರು ಮಾನವನಿರ್ಮಿತ ಅನಾಚಾರಗಳು, ಇವುಗಳಲ್ಲದೆ ಪ್ರಜಾಪ್ರಭುತ್ವದ ಮೂಲ ಬುನಾದಿಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಘನತೆಯನ್ನು ತನ್ನ ಜನರಿಗೆ ತಂದುಕೊಡುವ ಜವಾಬ್ದಾರಿ ಕೂಡ ಅವನಿಗಿತ್ತು. ವಚನ ಚಳವಳಿ ಬಹು ಆಯಾಮವುಳ್ಳ ಚಳುವಳಿಯಾಗಿತ್ತು. ಬಿಜ್ಜಳನಂತಹ ಮೂರ್ಖ ದೊರೆಯೊಂದಿಗೆ ಅವನು ಏಗಬೇಕಿತ್ತು. ಇವೆಲ್ಲವುಗಳು ವಚನ ಚಳವಳಿಯನ್ನು ಒಂದು ಸಂಕೀರ್ಣ ಚಳವಳಿ, ಮಾನವನ ಹಕ್ಕೊತ್ತಾಯದ

ಚಳವಳಿ, ಜಾತಿವಿರೋಧಿ ಚಳವಳಿ ಎಂದು ಹೇಳುವಂತೆ ಮಾಡಿವೆ. ಹನ್ನೆರಡನೆಯ ಶತಮಾನದಲ್ಲಿ ನಡೆದ ಸಂಗತಿಗಳ ಖಚಿತ ವಿವರಗಳನ್ನು ವಿವರಿಸಲು ಯಾರಿಂದಲೂ ಸಾಧ್ಯವಿಲ್ಲ. ಇತಿಹಾಸದ ಬರವಣಿಗೆ ಮತ್ತು ಸಂಶೋಧನೆಗಳು ಊಹಾ ಸಿದ್ಧಾಂತದ ಮೇಲೆ ನಿಂತಿವೆ ಮತ್ತು ಅದಕ್ಕೆ ಪೂರಕವಾಗಿ ಶಿಲಾಶಾಸನಗಳು, ತಾಳೆಓಲೆಗಳು ಇತ್ಯಾದಿಗಳು ಸತ್ಯಕ್ಕೆ ಹತ್ತಿರ ತಂದು ನಿಲ್ಲಿಸಬಹುದು. ವಿದ್ವಾಂಸರು ಮುಂದಿಟ್ಟಿರುವ ವಾದಸರಣಿಗಳಲ್ಲಿ ಏನೋ ಐಬಿದೆ ಎಂದೆನಿಸುತ್ತದೆ. ಮೇಲೆ ನಮೂದಿಸಿದ ವಚನಗಳು ಜಾತಿವಿರೋಧಿ ಎಂದು ಸಾರಲು ಸಾಧ್ಯವೇ?

ಡಾ. ಪೂವಪ್ಪ ಕಣಿಯೂರು ಸುಳ್ಯ ಇವರಿಗೆ ಉತ್ತರ :

ಡಾ. ಪೂವಪ್ಪ ಕಣಿಯೂರು, ಸುಳ್ಯ, ಜಾನಪದ ವಿದ್ವಾಂಸರು ನನ್ನ ಪ್ರಶ್ನೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡಂತೆ ಕಂಡುಬರಲಿಲ್ಲ. ನಾನು ಹೇಳಿದ್ದೇನೆಂದರೆ ಕಂಬಳದ ಇಡಿ ಸಂಚಾಲಕತ್ವವನ್ನು ವಹಿಸಿ, ಬ್ರಾಹ್ಮಣರ ಮೇಲ್ವಿಚಾರಣೆ ಮತ್ತು ಅವರ ಯಾಜಮಾನ್ಯದಲ್ಲಿ ನಡೆದದ್ದು ಉಂಟೆ? ನಾನು ಬ್ರಾಹ್ಮಣರು ಕಂಬಳಕ್ಕೆ ಕೋಣಗಳನ್ನು ಕಳಿಸಿ ಚಿನ್ನದ ಪದಕ ಗೆಲ್ಲಲಿಲ್ಲ ಎಂದು ಹೇಳಿಲ್ಲ. ಪ್ರಶ್ನೆ ಇರುವುದು ಬ್ರಾಹ್ಮಣರ ನೇತೃತ್ವದ ಕುರಿತಾಗಿ. ಹಾಗಿದ್ದರೆ ಪೂವಪ್ಪನವರು ನಿಖರ ಮಾಹಿತಿಗಳನ್ನು ಕೊಡಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇನೆ. ಪೂರ್ಣ ಸತ್ಯ ಯಾವುದೆಂದು ವಿದ್ವಾಂಸರು ತಿಳಿಸಲಿ.

**ಉದಯಕುಮಾರ್ ಹಬ್ಬು**
ಕಿನ್ನಿಗೋಳಿ



ಕೆಳಗೆ ಬಿದ್ದ ಮೇಲಷ್ಟೇ ಏರಿದ್ದ ಎತ್ತರದ ಅರಿವು
ಅಳಿದ ಮೇಲಷ್ಟೇ ತಿಳಿವುದು
ಉಳಿದುದರ ಬೆಲೆಯು

ಹೊತ್ತಿಗೊಂದು
ಹೊತ್ತಿಗೆ




## ಭಾರತೀಯ ಸಂವೇದನೆ - ಸಂವಾದ

**ಸಂ : ಡಾ. ಪಾದೇಕಲ್ಲು ವಿಷ್ಣು ಭಟ್ಟ**
ರಾ.ಗೋ.ಪೈ ಸಂಶೋಧನ ಕೇಂದ್ರ, ಉಡುಪಿ
ಬೆಲೆ : ರೂ. 225/-

ಭಾರತೀಯ ಸಂವೇದನೆಯ ಕುರಿತು ಪಾದೇಕಲ್ಲು ನರಸಿಂಹ ಭಟ್ಟರು ಬರೆದ ಮೂಲ ಲೇಖನ, ವಿದ್ವಾಂಸರ ಪ್ರತಿಕ್ರಿಯೆಗಳು ಹಾಗೂ ಆ ಪ್ರತಿಕ್ರಿಯೆಗಳಿಗೆ ಲೇಖಕರ ಉತ್ತರಗಳು ಇರುವಂಥ ಒಂದು ಅಮೂಲ್ಯ ಪುಸ್ತಕ ಇದು. ಭಾರತೀಯ ಶಾಸ್ತ್ರಾಧ್ಯಯನ ಪರಂಪರೆಯನ್ನು ಹೇಗೆ ನೋಡಬೇಕು, ಮತ್ತು ಅಧ್ಯಯನ ಮಾಡಬೇಕು ಎಂಬ ಬಗ್ಗೆ ಇರುವ ನರಸಿಂಹ ಭಟ್ಟರ ಮೂಲ ಲೇಖನವನ್ನು ಮೊದಲು ಪ್ರಕಟಿಸಿದವರು ಅನಂತಮೂರ್ತಿಯವರು. ಭಾರತೀಯ ಸಂವೇದನೆಯ ಒಂದು ಅಂಶವಾದ ಕಾವ್ಯಮೀಮಾಂಸಾ ಶಾಸ್ತ್ರವನ್ನು ಅನುಲಕ್ಷಿಸಿಕೊಂಡು ನರಸಿಂಹ ಭಟ್ಟರ ಲೇಖನವು ವಿಷಯಮಂಡನೆ ಮಾಡುತ್ತದೆ. ಕೆ. ಕೃಷ್ಣಮೂರ್ತಿ, ಕೆ.ವಿ. ನಾರಾಯಣ, ಆರ್. ಗಣೇಶ್, ಬನ್ನಂಜೆ ಗೋವಿಂದಾಚಾರ್ಯ, ವಿವೇಕ ರೈ ಮೊದಲಾದ ಪ್ರಸಿದ್ಧರು ಪ್ರತಿಕ್ರಿಯಿಸಿದ್ದಾರೆ ಹಾಗೂ ಇನ್ನೂ ಹಲವು ಪ್ರಸಿದ್ಧರು ಪ್ರತಿಕ್ರಿಯಿಸಲು ಹಿಂಜರಿದಿದ್ದಾರೆ ಎಂಬೆರಡೂ ಅಂಶಗಳು ಮೂಲ ಲೇಖನದ ಮಹತ್ತ್ವವನ್ನು ಹೇಳುತ್ತವೆ.




## ತುಳು ಪೊಲಿ

**ಪ್ರೊ. ಎ.ವಿ. ನಾವಡ**
ಶೋಧನ ಪ್ರಕಾಶನ, ಮಂಗಳೂರು
ಬೆಲೆ : ರೂ. 350/-

ಕನ್ನಡ ತುಳು ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಹೆಸರು ಮಾಡಿರುವ ವಿದ್ವಾಂಸರಾದ ಪ್ರೊ. ಎ.ವಿ. ನಾವಡರು ಬರೆದ ಸಂಶೋಧನಾ ಲೇಖನಗಳ ಸಂಕಲನ ಇದು. ತುಳುನಾಡು, ತುಳು ಪಾಡ್ದನಗಳು, ತುಳು ಭಾಷೆಯ ಸುತ್ತಮುತ್ತ, ತುಳು ಸಾಹಿತ್ಯದ ಸುತ್ತಮುತ್ತ, ತುಳು ಜನ ಎಂಬ ಐದು 'ಕಟ್ಟು'ಗಳು ಈ ತುಳು ಪೊಲಿಯಲ್ಲಿ ಇವೆ. ತುಳು ಭಾಷೆ ಐದು ಸಾವಿರ ವರ್ಷಗಳಷ್ಟು ಹಳೆಯದು ಎಂದೆಲ್ಲ ಉತ್ಪ್ರೇಕ್ಷಿಸಿ ಹೇಳುವುದಕ್ಕಿಂತ ತುಳುನುಡಿಯನ್ನು ಇಂದು ಸಶಕ್ತಗೊಳಿಸುವುದು ಮುಖ್ಯ ಎಂಬ ಆಶಯ ನಾವಡರದು. ತುಳು ಸಾಹಿತ್ಯಕ್ಕೆ ಒಂದು ಮೀಮಾಂಸೆಯನ್ನು ಕಾಣುವುದು ಅವರ ಹಂಬಲ. ಆ ನಿಟ್ಟಿನ ಅವರ ಪ್ರಯತ್ನ ಈ ಕೃತಿಯಲ್ಲಿ ಎದ್ದುಕಾಣುತ್ತದೆ.

ಹೊತ್ತಿಗೊಂದು ಹೊತ್ತಿಗೆ




# ಆರನೆಯ ಇಂದ್ರಿಯ

**(ಕಥಾಸಂಕಲನ)**

**ಎಚ್.ಆರ್. ವಿಶ್ವಾಸ**

ಸಾಹಿತ್ಯ ಭಂಡಾರ, ಬೆಂಗಳೂರು

ಬೆಲೆ : ರೂ. 60/-

ಕನ್ನಡ ನವೋದಯ ಕಾಲಘಟ್ಟದ ಹಲವು ಕಥೆಗಳಂತೆ ನೈತಿಕ ಶೋಧವನ್ನೇ ಪ್ರಧಾನವಾಗಿ ಹೊಂದಿದ ಕಥೆಗಳು ಈ ಸಂಕಲನದಲ್ಲಿವೆ. ಧರ್ಮ, ಅರ್ಥ, ಕಾಮಗಳ ಜಿಜ್ಞಾಸೆ ಇಲ್ಲಿಯ ಕಥೆಗಳಲ್ಲಿ ಬರುತ್ತವೆ. ಪಂಚೇಂದ್ರಿಯಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು ಅರಿಷಡ್ವರ್ಗಗಳನ್ನು ಗೆದ್ದರೆ ಸಮಷ್ಟಿ ಹಿತ ಸಾಧಿತವಾಗುತ್ತದೆ ಎಂಬುದು ಇಲ್ಲಿಯ ಬಹುತೇಕ ಕಥೆಗಳ ಪ್ರಧಾನ ಆಶಯವಾಗಿದೆ. ಸರಳ ವಸ್ತುಗಳು ಹಾಗೂ ಸರಳ ಭಾಷೆ ವಿಶ್ವಾಸರ ಕಥೆಗಳ ವೈಶಿಷ್ಟ್ಯ.




## ಪರಿಧಿ ಮೀರಿದ ಕೇಂದ್ರ

**(ಕಥಾಸಂಕಲನ)**

**ತಿಲಕನಾಥ ಮಂಜೇಶ್ವರ**

ಶ್ರೀನಿವಾಸ ಪುಸ್ತಕ ಪ್ರಕಾಶನ, ಬೆಂಗಳೂರು

ಬೆಲೆ : ರೂ. 75/–

ತಿಲಕನಾಥರು ಹಲವಾರು ವರ್ಷಗಳ ಸಂಯಮದ ಬಳಿಕ ಪ್ರಕಟಿಸಿದ ಕಥಾಸಂಕಲನ ಇದು. ಸುಶಿಕ್ಷಿತರಾದ ಮಧ್ಯಮ ವರ್ಗದ ಜನರು ಆತ್ಮವಿಮರ್ಶೆ ಮಾಡಿಕೊಳ್ಳುವ ರೀತಿಯಲ್ಲಿ ಇಲ್ಲಿಯ ಕಥೆಗಳಿವೆ. ಜಾತಿ, ವರ್ಗಗಳ ನಡುವಿನ ತಾರತಮ್ಯ ತರುವ ಸಂಕಟಗಳೂ ಚಿತ್ರಿತವಾಗಿವೆ. ತೀವ್ರವಾಗಿ ಬೆಳೆಯುತ್ತಿರುವ ನಗರಗಳು ಬದುಕಿನ ರೀತಿ ನೀತಿಗಳನ್ನು ಬದಲಿಸುತ್ತಿರುವ ಬಗೆಯನ್ನು ಚಿತ್ರಿಸುವ ಕಥೆಗಳಿವೆ. ನಗರೀಕರಣಗೊಳ್ಳುತ್ತಿರುವ ಹಾಗೂ ಬದಲಾಗುತ್ತಿರುವ ಬದುಕಿನ ಸಂಕೇತಗಳಾಗಿ ಇಲ್ಲಿ ಬಡಾವಣೆಗಳು ಬರುತ್ತವೆ.




## ದೇವನೂರ ಮಹಾದೇವರ ಕಥೆಗಳು, ಕಾದಂಬರಿಗಳು

**ಉದಯಕುಮಾರ್ ಹಬ್ಬು**
ಮಾನಸ ಬುಕ್ ಹೌಸ್, ಮೈಸೂರು
ಬೆಲೆ : ರೂ. 65/-

ಕತೆ, ಕವಿತೆ, ಕಾದಂಬರಿಗಳನ್ನು ರಚಿಸಿರುವ ಹಬ್ಬು ಅವರು ಆಂಗ್ಲ ಸಾಹಿತ್ಯದ ಓದಿನ ಹಿನ್ನೆಲೆ ಇರುವವರು. ಈ ಕೃತಿಯಲ್ಲಿ ದೇವನೂರರ ಕಥೆಗಳು ಹಾಗೂ ಕಾದಂಬರಿಗಳ ಸಹೃದಯ ವಿಮರ್ಶೆಯನ್ನು ಮಾಡಿದ್ದಾರೆ. ದೇವನೂರರು ತಮ್ಮ ಕಥೆ ಕಾದಂಬರಿಗಳ ಮೂಲಕ ದಲಿತ ಸಮಾಜದ ಒಳ ವಿಮರ್ಶಕರಾಗಿದ್ದಾರೆ ಎಂಬುದನ್ನು ಈ ಕೃತಿಯಲ್ಲಿ ಹಬ್ಬು ಗುರುತಿಸಿದ್ದಾರೆ. ದಲಿತ ಸಾಹಿತ್ಯ ನಡೆದು ಬಂದ ದಾರಿಯನ್ನು ಪರಿಚಯಿಸುವ ಒಂದು ಪ್ರಸ್ತಾವನೆ ಕೂಡ ಉಪಯುಕ್ತವಾಗಿದೆ. ಇತರ ವಿದ್ವಾಂಸರ ಅಭಿಪ್ರಾಯಗಳನ್ನು ದಾಖಲಿಸುವಲ್ಲಿ ಇನ್ನಷ್ಟು ಸ್ಪಷ್ಟತೆ ಇದ್ದರೆ ಉತ್ತಮವಾಗುತ್ತಿತ್ತು.

ಹೊತ್ತಿಗೊಂದು ಹೊತ್ತಿಗೆ




## ಅನೇಕ

**(ಅಭಿನವ ಚಾತುರ್ಮಾಸಿಕ)**

**ಸಂ. : ಮಮತಾ ಜಿ.**

ಅಭಿನವ, ಬೆಂಗಳೂರು

ಬೆಲೆ : ರೂ. 250/–

ತಾಳಮದ್ದಲೆಯ ಬಗೆಗಿನ ವಿಶೇಷ ಸಂಚಿಕೆ ಇದು. ತಾಳಮದ್ದಲೆಗೆ ಸಂಬಂಧಿಸಿದಂತೆ ಒಂದು ವಿಶಿಷ್ಟ ಆಕರಗ್ರಂಥವಾಗಿ ಇದು ಸಲ್ಲುತ್ತದೆ. 'ಅನೇಕ'ದಲ್ಲಿ ಯಕ್ಷಲೋಕದ ಸ್ವಗತ, ಲಹರಿ, ರೂಪಸ್ವರೂಪ ಹಾಗೂ ಅವಲೋಕನ ಎಂಬ ನಾಲ್ಕು ಭಾಗಗಳಿವೆ. ತಾಳಮದ್ದಳೆಯ ಅನುಭವಗಳು, ಅದರ ಕುರಿತ ಅಭಿಪ್ರಾಯಗಳು, ಅದರ ರೂಪ – ಸ್ವರೂಪದ ಬಗ್ಗೆ ತಾತ್ವಿಕ ಜಿಜ್ಞಾಸೆಗಳು ಇಲ್ಲಿವೆ. ಅರ್ಥದಾರಿಕೆಯ ಮಾದರಿಗಳೂ ಇವೆ. ಯಕ್ಷಲೋಕದ ಮಹಾನ್ ಕಲಾವಿದರ ಹಾಗೂ ಪ್ರಸಿದ್ಧ ವಿಮರ್ಶಕರ ಲೇಖನಗಳಿಂದ ಕೂಡಿರುವ ಈ ಗ್ರಂಥ ಸಂಗ್ರಾಹ್ಯವಾಗಿದೆ.

## ನವನಿಧಿ

**1. ಬೆಟ್ಟ ಮಹಮದನ ಬಳಿಗೆ ಬಾರದಿದ್ದರೆ...**
ಲೇ: ಲಕ್ಷ್ಮೀಶ ತೋಳ್ಪಾಡಿ
ಪ್ರ: ಅಭಿನವ, ಬೆಂಗಳೂರು  ಬೆಲೆ – ರೂ. 100

**2. ದಶಾವತಾರಿಷ್ಟ**
ಲೇ: ಗಂಗಾಧರ ಶಾಸ್ತ್ರೀ ನಾಜಗಾರ
ಪ್ರ: ಚಿನ್ಮಯ ಕೀರ್ತಿ ಪ್ರಕಾಶನ, ಹೊನ್ನಾವರ
ಬೆಲೆ – ರೂ. 100

**3. ನಿಜದ ನಿಲುವು**
ಸಂ: ಭರತ್‌ಕುಮಾರ್ ಪೊಲಿಪು
ಪ್ರ: ಕನ್ನಡ ಸಾಹಿತ್ಯ ಪರಿಷತ್ತು, (ಮಹಾರಾಷ್ಟ್ರ ಘಟಕ), ಮುಂಬಯಿ  ಬೆಲೆ – ರೂ. 200

**4. ಕರಿನೀರ ಕೌರವ**
ಮೂಲ : ಸಾವರ್ಕರ್
ಅನು : ಗಿರಿಜಾ ಶಾಸ್ತ್ರೀ
ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ  ಬೆಲೆ – ರೂ. 90

**5. ಹುತ್ತದ ನೆರಳು**
ಲೇ: ವಿದ್ಯಾ ಅರಮನೆ
ಪ್ರ: ಪುಸ್ತಕ ಯಾನ, ಮೈಸೂರು
ಬೆಲೆ – ರೂ. 110

**6. ಸಾಹಿತ್ಯ – ಸಂಸ್ಕೃತಿ – ಪರಿಸರ**
ಲೇ: ರಾಜಶೇಖರ ಮಠಪತಿ
ಪ್ರ: ಕಣ್ವ ಪ್ರಕಾಶನ, ಬೆಂಗಳೂರು
ಬೆಲೆ – ರೂ. 85

**7. ಉಪ್ಪಡ್** (ತುಳು ಕಾದಂಬರಿ)
ಲೇ: ಅಂಶುಮಾಲಿ
ಪ್ರ: ಬಿಂದು ಪ್ರಕಾಶನ, ಪರ್ಕಳ, ಉಡುಪಿ
ಬೆಲೆ – ರೂ. 100

**8. ಅಕ್ಕನ ಮದುವೆ** (ಕಥಾಸಂಕಲನ)
ಲೇ: ಕುಗೋ
ಪ್ರ: ಜೆಓನ್‌ಸಿ ಪ್ರಕಾಶನ, ಬೆಂಗಳೂರು  ಬೆಲೆ – ರೂ. 120

**9. ಶನಿ ಹಿಡಿದವ** (ಕಥಾಸಂಕಲನ)
ಲೇ: ಕುಗೋ
ಪ್ರ: ಛಾಯಾ ಸಾಹಿತ್ಯ, ಬೆಂಗಳೂರು  ಬೆಲೆ – ರೂ. 70

**10. ಪಚ್ಚೆಸಿರಿ**
ಲೇ: ಉಗ್ಗಪ್ಪ ಪೂಜಾರಿ
ಪ್ರ: ಸ್ವಯಂಪ್ರಕಾಶನ, ಮೂಡಬಿದಿರೆ ಬೆಲೆ – ರೂ. 55

**11. ಪೋಕರಿ ಪಾಪಣ್ಣನ ಪರಾಕು**
ಲೇ: ಎಂ.ಎಸ್.ಕೆ. ಪ್ರಭು
ಪ್ರ: ಸಾಹಿತ್ಯ ಭಂಡಾರ, ಬೆಂಗಳೂರು ಬೆಲೆ – ರೂ. 105

**12. ಮಲೆನಾಡ ಮಂದಾರ**
ಲೇ : ಹೆಚ್.ಎನ್. ಸುಬ್ರಹ್ಮಣ್ಯ
ಪ್ರ: ಸಾಹಿತ್ಯ ಭಂಡಾರ, ಬೆಂಗಳೂರು
ಬೆಲೆ – ರೂ. 75

**13. ಕಪ್ಪೆ ನುಂಗಿದ ಹುಡುಗ**
ಲೇ : ಶ್ರೀನಿವಾಸ ವೈದ್ಯ
ಪ್ರ: ಅಂಕಿತ ಪುಸ್ತಕ, ಬೆಂಗಳೂರು  ಬೆಲೆ – ರೂ. 80

**14. ಮರೆವು**
ಲೇ: ಶ್ರೀನಿವಾಸ ಕುಂಡಂತಾಯ
ಪ್ರ: ಕೌಸ್ತುಭ ಪ್ರಕಾಶನ, ಬೆಂಗಳೂರು ಬೆಲೆ – ರೂ. 85

**15. ಪ್ರಪಂಚದ ಪ್ರಭಾವಿ ಮಹಿಳೆಯರು**
ಲೇ : ರಾಜೇಶ್ವರಿ ಎನ್.
ಪ್ರ: ಕಾಲ ಪ್ರಕಾಶನ, ಬೆಂಗಳೂರು  ಬೆಲೆ – ರೂ. 70

**16. ಮನುಷ್ಯರಂತೆ ಬದುಕಬಹುದು**
ಲೇ : ಬೆಳಗೋಡು ರಮೇಶ ಭಟ್
ಪ್ರ: ಶ್ರೀನಿವಾಸ ಪುಸ್ತಕ ಪ್ರಕಾಶನ,  ಬೆಂಗಳೂರು
ಬೆಲೆ – ರೂ. 50

**17. ದೇಶದ ಹಿಂದಿನ ಸ್ಥಿತಿಗತಿ**
ಲೇ : ಎಂ.ವಿ. ಭಟ್
ಪ್ರ: ಯುಗಪುರುಷ, ಕಿನ್ನಿಗೋಳಿ ಬೆಲೆ – ರೂ. 125

**18. ಸೆಕ್ಯುಲರಿಸಂ ಅಂದು ಇಂದು**
ಲೇ : ಕೆ.ಎಸ್. ನಾರಾಯಣಾಚಾರ್ಯ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ  ಬೆಲೆ – ರೂ. 60

**19. ಸಾಂಸ್ಕೃತಿಕ ಸಂದರ್ಭಗಳ ಅರ್ಥ ನಿರೂಪಣೆಯಲ್ಲಿ ಮಿಥ್‌ಗಳ ಪಾತ್ರ**
ಲೇ : ಕೆ.ಎಸ್. ನಾರಾಯಣಾಚಾರ್ಯ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ  ಬೆಲೆ – ರೂ. 150

**20. ಎಳೆಯರಿಗಾಗಿ ಭಾರತೀಯ ಸ್ವಾತಂತ್ರ್ಯದ ಇತಿಹಾಸ**
ಲೇ : ಎನ್.ವಿ. ಕಾಕತ್ಕರ್
ಅನು : ಪ್ರಹ್ಲಾದ ವೆಂ. ಕುಳಗೇರಿ
ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ  ಬೆಲೆ – ರೂ. 125

**21. ಜೀವನ ಚರಿತ್ರಾವಳಿ**
ಲೇ : ಆಗುಂಬೆ ಎಸ್. ನಟರಾಜ್
ಪ್ರ: ಹಂಸ ಪ್ರಕಾಶನ, ಬೆಂಗಳೂರು  ಬೆಲೆ – ರೂ. 200

**22. ದಿಲ್ಲಿಯಿಂದ ತಾಮ್ಡಿೀ ಸುರ್ಲಾಗೆ**
ಲೇ : ಆಗುಂಬೆ ಎಸ್. ನಟರಾಜ್
ಪ್ರ: ಹಂಸ ಪ್ರಕಾಶನ, ಬೆಂಗಳೂರು
ಬೆಲೆ – ರೂ. 100

**23. ಕವಿ ರಸಿಕ**
ಲೇ : ಆಗುಂಬೆ ಎಸ್. ನಟರಾಜ್
ಪ್ರ: ಹಂಸ ಪ್ರಕಾಶನ, ಬೆಂಗಳೂರು
ಬೆಲೆ – ರೂ. 40

# ಸಾಹಿತ್ಯ ಭಂಡಾರ

ಜಂಗಮ ಮೇಸ್ತ್ರಿ ಗಲ್ಲಿ

ಬಳೇಪೇಟೆ, ಬೆಂಗಳೂರು

**ಕತೆ, ಕಾದಂಬರಿ**

| | | | |
|---|---|---|---|
| ಕವಲು | (ಸಾದಾ 210/-) | ಎಸ್.ಎಲ್. ಭೈರಪ್ಪ | 285 |
| ಆವರಣ | (ಸಾದಾ 190/-) | ,, | 265 |
| ಭೀಮಕಾಯ | | ,, | 120 |
| ಮಂದ್ರ | (ಸಾದಾ 410/-) | ,, | 485 |
| ಸಾರ್ಥ | (ಸಾದಾ 195/-) | ,, | 270 |
| ತಂತು | (ಸಾದಾ 600/-) | ,, | 675 |
| ಅಂಚು | (ಸಾದಾ 235/-) | ,, | 310 |
| ಸಾಕ್ಷಿ | (ಸಾದಾ 215/-) | ,, | 290 |
| ನೆಲೆ | | ,, | 130 |
| ಪರ್ವ | (ಸಾದಾ 425/-) | ,, | 500 |
| ಅನ್ವೇಷಣೆ | | ,, | 140 |
| ದಾಟು | (ಸಾದಾ 275/-) | ,, | 350 |
| ಗ್ರಹಣ | | ,, | 145 |
| ನಿರಾಕರಣ | | ,, | 115 |
| ಗೃಹಭಂಗ | (ಸಾದಾ 245/-) | ,, | 320 |
| ಮತದಾನ | | ,, | 120 |
| ತಬ್ಬಲಿಯು ನೀನಾದೆ ಮಗನೆ | (ಸಾದಾ 205/-) | ,, | 280 |
| ನಾಯಿ-ನೆರಳು | | ,, | 115 |
| ಜಲಪಾತ | | ,, | 120 |
| ವಂಶವೃಕ್ಷ | (ಸಾದಾ 235/-) | ,, | 310 |
| ದೂರ ಸರಿದರು | | ,, | 170 |
| ಧರ್ಮಶ್ರೀ | | ,, | 180 |
| ಪುರುಷೋತ್ತಮ | | ಯಶವಂತ ಚಿತ್ತಾಲ | 225 |
| ಶಿಕಾರಿ | | ,, | 155 |
| ಛೇದ | | ,, | 70 |
| ಕೇಂದ್ರ ವೃತ್ತಾಂತ | | ,, | 135 |
| ಮೂರು ದಾರಿಗಳು | | ,, | 150 |
| ಮಲೆನಾಡ ಮಂದಾರ | | ಎಚ್.ಎನ್. ಸುಬ್ರಹ್ಮಣ್ಯ | 75 |
| ಕರಿಸಿರಿಯಾನ | | ಕೆ.ಎನ್. ಗಣೇಶಯ್ಯ | 165 |

| | | |
|---|---|---|
| ಗಂಗಾಧರ ಗಾಡ್ಗೀಳರ ಪ್ರಾತಿನಿಧಿಕ ಕತೆಗಳು | ಅನು ॥ ಚಂದ್ರಕಾಂತ ಪೋಕಳೆ | 70 |
| ಗರ (ಫ್ಯಾಂಟಸಿ ಕತೆಗಳು) | ಎಮ್.ಎಸ್.ಕೆ. ಪ್ರಭು | 60 |
| ಬಯಲು – ಬಸಿರು | ಕುಸುಮಾಕರ ದೇವರಗೆಣ್ಣೂರು | 45 |
| ನಟ ನಾರಾಯಣಿ | ಶಂಕರ ಮೊಕಾಶಿ ಪುಣೇಕರ | … |
| ಅವ್ಯಕ್ತ | ಸುಧಾಮೂರ್ತಿ | … |
| ಕೊಳಲು ಮತ್ತು ಖಡ್ಗ | ಬೆಸಗರಹಳ್ಳಿ ರಾಮಣ್ಣ | 100 |
| ಪ್ರೇಮಬಂಧನ | ಅನು॥ ಲಲಿತಾಶಾಸ್ತ್ರೀ | 18 |
| ಸ್ಮೃತಿ | ಎನ್. ಪ್ರಭಾಕರ | 4 |
| ಶಾಮರಾಯನ ಸತ್ಯ | ಶ್ರೀರಂಗ | 12 |
| ಮಲುಹಣ ಮಲುಹಣಿ | ಕಾ.ರಾ. ಸಾರಂಗ | 2 |
| ಬಿಡುಗಡೆ | ವೀಣಾ ಶಾಂತೇಶ್ವರ | 18 |
| ಕೃತಪುರದ ಡಾ॥ ಎಲಗುರ್ದ | ಅಶೋಕ ಕುಲಕರ್ಣಿ | 2 |
| ಇತಿಹಾಸ ಭೂತ | ರಾವ್ ಬಹದ್ದೂರ್ | 10 |
| ಬಲಿ | ಲಕ್ಷ್ಮಣ ಕೊಡಸೆ | 6 |
| ಬೇರು ಬಿಟ್ಟ ಈ ನೆಲದೊಳಗೆ | ಮಲ್ಲೆಪುರ ಜಿ. ವೆಂಕಟೇಶ | 7 |
| ಮುಂಗಾರಿನ ಹುಡುಗಿ | ಸಾಯಿಸುತೆ | 80 |
| ಮಾನಸವೀಣಾ | ’’ | 80 |
| ಮಾಳವಿಕ ಮತ್ತು ಇತರ ಕತೆಗಳು | | |
| ಅಂಕುರ್ ಬೆಟಗೇರಿ | | 45 |

**ನಾಟಕ**

| | | |
|---|---|---|
| ದಾರುಣ ಭಾರತ | ಹರಿಹರಪ್ರಿಯ | 40 |
| ಅಗ್ನಿಸಾಕ್ಷಿ | ಶ್ರೀರಂಗ | 35 |
| ಬಕ | ಎಮ್.ಎಸ್.ಕೆ. ಪ್ರಭು | 40 |
| ಮಹಾಪ್ರಸ್ಥಾನ | ’’ | 20 |
| ಸಿಸೆರೊ | ’’ | 30 |
| ದಾಸಿ ಭಾರ್ಮಲಿ | ಅನು ॥ ಎಮ್.ಎಸ್. ಮೂರ್ತಿ | 4 |
| ಇನ್ನಿಲ್ಲದವರು | ಆರ್.ಡಿ. ಕಾಮತ್ | 5 |

ಪ್ರತಿಗಳಿಗಾಗಿ ಸಂಪರ್ಕಿಸಿ

**ಸಾಹಿತ್ಯ ಭಂಡಾರ**

ಬೆಂಗಳೂರು

ದೂರವಾಣಿ : 080–22877618

## ಸಾಹಿತ್ಯ ಪ್ರಕಾಶನ, ಕೊಪ್ಪೀಕರ ರಸ್ತೆ, ಹುಬ್ಬಳ್ಳಿ

## ನಿಮ್ಮ ಬಹುಮುಖ ಆಸಕ್ತಿಗಾಗಿ, ವ್ಯಕ್ತಿತ್ವ ವಿಕಸನಕ್ಕಾಗಿ ಈ ಪುಸ್ತಕಗಳನ್ನು ಓದಿ :

**ಪಾಟೀಲ ಪುಟ್ಟಪ್ಪ**

ಕರ್ನಾಟಕದ ಸಂಗೀತ ಕಲಾರತ್ನರು
ಕರ್ನಾಟಕದ ಕವಿ, ಲೇಖಕರು
ಸೋತೆ ಎನಬೇಡಿ ಸೋಲಿನಲ್ಲೇ ಗೆಲುವು ಇದೆ
ಇಲ್ಲಿ ಬೆಳಕಿದೆ
ಬದುಕಲು ಬೇಕು ಬದುಕುವ ಈ ಮಾತು
ಅನುಭವ ಇರುವಲ್ಲಿ ಅಮೃತತ್ವ ಇದೆ
ಕನ್ನಡದ ಕಂಪು
ಅವರ ಬದುಕು ನಮಗೆ ಬೆಳಕು
ಪುಸ್ತಕ ಸಂಸ್ಕೃತಿ
ಚೆಲುವ ಕನ್ನಡನಾಡು
ಸುವರ್ಣ ಕರ್ನಾಟಕ
ಸರ್ ಸಾಹೇಬರು
ನೀವು ನಗಬೇಕು
ನೆನಪಿನ ಬುಟ್ಟಿ
ನಮ್ಮ ದೇಶ ನಮ್ಮ ಜನ
ತಾಯಿಯೇ ಮೊದಲ ಗುರು
(ಇಂದುಮತಿ ಪುಟ್ಟಪ್ಪ)
ಅನುಭವಾಮೃತದ ಅರವಟ್ಟಿಗೆ
(ಇಂದುಮತಿ ಪುಟ್ಟಪ್ಪ)

**ವಿಶ್ವೇಶ್ವರ ಭಟ್**

ನೂರೆಂಟು ಮಾತು II
ಜನಗಳಮನ I
ಬಾನಯಾನ
ನಾನೇಕೆ ಮಂತ್ರಿಯತ್ತ ಬೂಟನ್ನೆಸೆದೆ?
ಸ್ಫೂರ್ತಿ ಸೆಲೆ
ಧನ ದೇವೋಭವ
ಸುದ್ದಿಮನೆ ಕತೆ – 2
ನೂರೆಂಟು ಮಾತು II
ಬಾಲ್ಕನಿಯಿಂದ – 1, 2

**ಡಾ. ಬಿ.ವಿ. ಪಟ್ಟಾಭಿರಾಮ್**

ಮನಸ್ಸಿನ ಭಾಷೆ ಮೈಂಡ್ ಮ್ಯಾಜಿಕ್
ನೀ ನೆಮ್ಮದಿಯಿಂದಿರು, ಓ ಮನವೇ
ಸೊಗಸಾದ ಮಾತುಗಾರರಾಗಬೇಕೆ?
ಆತ್ಮವಿಶ್ವಾಸ
ಪಾಸಿಟಿವ್ ಥಿಂಕಿಂಗ್
ಸೆಲ್ಫ್ ಹಿಪ್ನಾಟಿಸಂ – ರಿಲ್ಯಾಕ್ಸೇಷನ್
ಯಶಸ್ಸಿನ ಮೊದಲ ಸೋಪಾನ ನಾಯಕತ್ವದ ಲಕ್ಷಣ
ಉತ್ತಮ ತಂದೆ + ಉತ್ತಮ ಗುರುಗಳು = ಅತ್ಯುತ್ತಮ ವಿದ್ಯಾರ್ಥಿ

**ಪ್ರತಾಪ್‌ಸಿಂಹ**

ಬೆತ್ತಲೆ ಜಗತ್ತು I-VI
ನರೇಂದ್ರ ಮೋದಿ : ಯಾರೂ ತುಳಿಯದ ಹಾದಿ
ಮೈನಿಂಗ್ ಮಾಫಿಯಾ – ಇವರಾರು ಗೊತ್ತೇನು?
ಮಹಮದಾಲಿ ಜಿನ್ನಾ

**ಯಂಡಮೂರಿ ವೀರೇಂದ್ರನಾಥ್**

ತಪ್ಪು ಮಾಡೋಣ ಬನ್ನಿ
ಯಶಸ್ಸಿನ ರಹಸ್ಯಗಳು : ಪಾಲಕರಿಗೆ ಗೊತ್ತಿಲ್ಲ; ಶಿಕ್ಷಕರು ಹೇಳಲ್ಲ!
ನೂರು ಮಾತು ಕೇಳಿ; ಒಂದು ರ್‍ಯಾಂಕ್ ಗಳಿಸಿ
ವ್ಯಕ್ತಿತ್ವ ವಿಕಾಸ ಮತ್ತು ಸಂವಹನ ಕೌಶಲ್ಯಗಳು
Personality Development & Communication Skills
ಯಶಸ್ಸಿನತ್ತ ಪಯಣ
ನಿಮ್ಮನ್ನು ನೀವು ಗೆಲ್ಲಬಲ್ಲಿರಿ
ಓ ಹೆಣ್ಣೇ ನೀನೆಷ್ಟು ಒಳ್ಳೆಯವಳು!
ನಿಮ್ಮ ಮಕ್ಕಳು ನಮ್ಮನ್ನು ಪ್ರೀತಿಸುವರೇ?

ದುಡ್ಡು ಮಾಡುವುದು ಹೇಗೆ?
ಇವರನ್ನೇನ್ರಿ ಮಾಡೋಣ?
ಮರಣ ಮೃದಂಗ
ಅಭಿಲಾಷೆ
ಅಂತರ್‌ಮುಖಿ
ಪ್ರೇಮ
ಮಂಜಿನ ಹೂಮಳೆ
ಮಳೆಗಾಲದ ಒಂದು ಸಂಜೆ
ದುಡ್ಡು ಮೈನಸ್ ದುಡ್ಡು
ಬೇಡ ಕೃಷ್ಣ ರಂಗಿನಾಟ
ಪರಿಮಳ

**ಆರ್.ವಿ. ಕಟ್ಟೀಮನಿ**
ಗೃಹಿಣಿಯರಿಗೆ ಸಲಹೆ
ಅತ್ಯುತ್ತಮ ಜ್ಞಾಪಕಶಕ್ತಿ ನಿಮ್ಮದಾಗಬೇಕೆ?
ನಿಮ್ಮ ಮುಖ ಏನನ್ನು ಹೇಳುತ್ತದೆ?
ವಿದ್ಯಾರ್ಥಿಗಳೇ ಓದುವುದು ಹಾಗಲ್ಲ, ಹೀಗೆ!
ಮಾನಸಿಕ ಒತ್ತಡದಿಂದ ಮುಕ್ತರಾಗುವುದು ಹೇಗೆ?
ಪರೀಕ್ಷೆಯಲ್ಲಿ ರ್‍ಯಾಂಕ್ ಗಳಿಸುವ ಸೂತ್ರಗಳು
ಯಶಸ್ಸಿನ ಶಿಖರಕ್ಕೆ ಮೂವತ್ತು ಮೆಟ್ಟಿಲು
ಮಹಿಳೆಯರಿಗಾಗಿ ಸೌಂದರ್ಯವರ್ಧಕ ವ್ಯಾಯಾಮಗಳು
ಆರೋಗ್ಯ ಮತ್ತು ಜೀವನೋಲ್ಲಾಸಕ್ಕಾಗಿ ನಿದ್ದೆ
ಸಂಖ್ಯೆಗಳಲ್ಲಿ ನಿಮ್ಮ ವ್ಯಕ್ತಿತ್ವ

**ಇತರ**
ಸೂರ್ಯ ನಮಸ್ಕಾರ, ಜೀವನ ಪಾಠಗಳು, ಮಾರ್ಕೆಟಿಂಗ್ ಮಂತ್ರಗಳು, ನಕ್ಕೀರಿ ಹಲ್ಲು ಕಂಡೀತು ಜೋಕೆ, ಮಕ್ಕಳ ಆರೋಗ್ಯ, ಸುರಕ್ಷತೆ ಮತ್ತು ನಡವಳಿಕೆ, ಕುಟುಂಬದಲ್ಲಿ ಹೊಂದಾಣಿಕೆ ಮತ್ತು ಮಕ್ಕಳು, ನಗೆ ನವಿಲು, ಇಡ್ಲಿ, ಆರ್ಕಿಡ್ ಮತ್ತು ಆತ್ಮಬಲ


ಪ್ರತಿಗಳಿಗಾಗಿ ಸಂಪರ್ಕಿಸಿ

**ಸಾಹಿತ್ಯ ಪ್ರಕಾಶನ**

ಕೊಪ್ಪೀಕರ ರಸ್ತೆ, ಹುಬ್ಬಳ್ಳಿ
ದೂರವಾಣಿ : 9448110034

# Form IV

## Statement about ownership and other particulars about CHINTHANA BAYALU (Quarterly)

| | | | |
|---|---|---|---|
| 1. | Place of Publication | : | Bantwal, Dakshina Kannada |
| 2. | Periodicity of its publication | : | Quarterly |
| 3. | Printers Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 4. | Publishers Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 5. | Editors Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 6. | Names and address of individuals who own the newspaper and partners or sharesholders holding more than one percent of the total capital | } | Reshma G. Bhat<br>No. 15-109, Modankapu,<br>Bantwala Taluk<br>D.K. - 574 219 |

I, Reshma G. Bhat, hereby declare that the particulars given above are true to the best of my knowledge and belief.

Date: 30 March 2013

**Reshma G. Bhat**
(Publisher)

★ ಚಿಂತನ ಬಯಲು ತ್ರೈಮಾಸಿಕ ಪತ್ರಿಕೆಯನ್ನು ವೃತ್ತಿಪರವಾಗಿ ನಡೆಸಿಕೊಂಡು ಹೋಗಬೇಕೆಂಬುದು ನಮ್ಮ ಅಪೇಕ್ಷೆ.

★ ಈ ಪತ್ರಿಕೆ ISSN ಮಾನ್ಯತೆ ಪಡೆದಿರುತ್ತದೆ. ISSN 2278-2192

★ ಗಂಭೀರ ಚಿಂತನೆಯನ್ನೊಳಗೊಂಡ ಲೇಖನಗಳು, ವಿಮರ್ಶಾ ಲೇಖನಗಳು ಹಾಗೂ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಣೆಗಾಗಿ ಆಹ್ವಾನಿಸುತ್ತಿದ್ದೇವೆ.

★ ಇಲ್ಲಿ ಪ್ರಕಟವಾಗುವ ಲೇಖನಗಳ ಗುಣಮಟ್ಟವನ್ನು ಉಳಿಸಿ ಬೆಳೆಸುವುದಕ್ಕಾಗಿ, ಲೇಖನಗಳನ್ನು ಆಯಾ ಕ್ಷೇತ್ರಗಳಲ್ಲಿ ಪರಿಣತರಾದವರಿಂದ ಸಮೀಕ್ಷೆ ಮಾಡಿಸಿ, ಅಂದರೆ, ಅನಾಮಿಕ ಸಂಪಾದಕರಿಂದ ಅಭಿಪ್ರಾಯ ಪಡೆದು ಪ್ರಕಟಿಸಲಾಗುವುದು. ತಜ್ಞರ ಸೂಚನೆಗಳನ್ನು ಅನುಸರಿಸಿ, ಅವಶ್ಯವೆನಿಸಿದರೆ, ಸೂಕ್ತ ಪರಿಷ್ಕರಣೆಗಳನ್ನು ಮಾಡುವಂತೆ ಲೇಖಕರನ್ನು ಕೋರಲಾಗುವುದು.

★ ಎಲ್ಲಾ ಪ್ರಕಟಿತ ಲೇಖನಗಳಿಗೆ ಸಂಭಾವನೆ ನೀಡಲಾಗುವುದು.

★ ಲೇಖನಗಳಿಗೆ ಬಹಳ ಕಟ್ಟುನಿಟ್ಟಾದ ಪದಗಳ ಮಿತಿ ಇಲ್ಲ.

★ ಯಾವುದೇ ಆಧಾರಗಳಿಲ್ಲದೆ, ಕೇವಲ ಹೇಳಿಕೆ, ಅಭಿಪ್ರಾಯ ರೂಪದ ಬರಹಗಳನ್ನು ದಯವಿಟ್ಟು ಕಳುಹಿಸುವುದು ಬೇಡ. ಅಗತ್ಯವಿರುವ ಕಡೆಗಳಲ್ಲಿ ಟಿಪ್ಪಣಿ, ಪರಾಮರ್ಶನ ಗ್ರಂಥಗಳು ಇತ್ಯಾದಿ ಮಾಹಿತಿಗಳನ್ನು ಲೇಖನಗಳು ಹೊಂದಿರಲಿ.

★ ಲೇಖನಗಳು ಬೇರೆ ಕಡೆ ಪ್ರಕಟವಾಗಿರಬಾರದು. ಜಾಲಲೇಖ (ಬ್ಲಾಗ್)ಗಳಲ್ಲಿ ಪ್ರಕಟವಾಗಿದ್ದರೆ ವಿವರಗಳನ್ನು ನೀಡಬೇಕು. ಅನುವಾದಿತ ಲೇಖನಗಳಾದರೆ ಮೂಲದ ಬಗ್ಗೆ ಪೂರ್ಣ ವಿವರ ಹಾಗೂ ಮೂಲಲೇಖಕರ ಅನುಮತಿ ಇತ್ಯಾದಿ ತಾಂತ್ರಿಕ ಆವಶ್ಯಕತೆಗಳನ್ನು ಪೂರೈಸಿರಬೇಕು. ಲೇಖನಗಳನ್ನು ಕೈಬರಹ ಅಥವಾ ಬೆರಳಚ್ಚು ಮಾಡಿ ಕಳುಹಿಸುವುದಾದರೆ ಒಂದೇ ಮಗ್ಗುಲಲ್ಲಿ ಇರಲಿ. ಮಿಂಚಂಚೆಯ ಮೂಲಕ ಕಳುಹಿಸಿದರೆ ಉತ್ತಮ. ಟಿಪ್ಪಣಿಗಳು ಲೇಖನದ ಕೊನೆಗೇ ಇರಬೇಕು.

★ ಲೇಖಕರು ತಮ್ಮ ಲೇಖನಗಳ ಪ್ರತಿಗಳನ್ನು ಇಟ್ಟುಕೊಳ್ಳಬೇಕಾಗಿ ಕೋರಿಕೆ.

★ ಲೇಖಕರು ತಮ್ಮ ಪೂರ್ಣ ಅಂಚೆ ವಿಳಾಸ, ಮಿಂಚಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು.

★ ಪುಸ್ತಕ ವಿಮರ್ಶೆ, ಸಮೀಕ್ಷೆಗಾಗಿ ಕೆಲವು ಪುಟಗಳನ್ನು ಮೀಸಲಿಡಲಾಗುವುದು. ಲೇಖಕರು, ಪ್ರಕಾಶಕರು ತಮ್ಮ ಪ್ರಕಟಿತ ಪುಸ್ತಕಗಳ ಎರಡು ಪ್ರತಿಗಳನ್ನು ವಿಮರ್ಶೆ ಸಮೀಕ್ಷೆಗಾಗಿ ಕಳುಹಿಸಿಕೊಡಬಹುದು.

★ ಓದುಗರ ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತೇವೆ.

★ ಚಂದಾದಾರರಿಗೆ ವಂಚನೆಯಾಗುವಂತೆ ಪತ್ರಿಕೆಯನ್ನು ಅರ್ಧದಲ್ಲಿ ನಿಲ್ಲಿಸುವುದಿಲ್ಲ.

★ ಸಂಪರ್ಕ ವಿಳಾಸ : ಸಂಪಾದಕರು, ಚಿಂತನ ಬಯಲು, ನಂ. 15-109
ಮೊಡಂಕಾಪು ಅಂಚೆ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ - 574 219.
ಮಿಂಚಂಚೆ : chinthanabayalu@gmail.com
ದೂರವಾಣಿ : 9449772651

ವಾರ್ಷಿಕ ಚಂದಾ :

**ರೂಪಾಯಿ ಇನ್ನೂರು**

(ಅಂಚೆ ವೆಚ್ಚಸೇರಿ)

ಮೂರು ವರ್ಷಗಳಿಗೆ :

**ರೂಪಾಯಿ ಆರು ನೂರು**

ಐದು ವರ್ಷಗಳಿಗೆ :

**ರೂಪಾಯಿ ಒಂದು ಸಾವಿರ**

ಆಜೀವ (ಪೋಷಕ) ಚಂದಾ :

**ರೂಪಾಯಿ ಐದು ಸಾವಿರ**

ಮಹಾಪೋಷಕ ಚಂದಾ :

**ರೂಪಾಯಿ ಹತ್ತು ಸಾವಿರ**

ಬಿಡಿ ಪ್ರತಿ :

**ರೂಪಾಯಿ ಅರುವತ್ತು**

ದಯವಿಟ್ಟು ಡಿ.ಡಿ./ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ನಾಟಕ ಬ್ಯಾಂಕಿನ ಬಂಟ್ವಾಳ ಮೂಡ ಶಾಖೆಯಲ್ಲಿ

**ಚಿಂತನ ಬಯಲು** ಹೆಸರಿನಲ್ಲಿರುವ

**ಕರೆಂಟ್ ಅಕೌಂಟ್ ಸಂಖ್ಯೆ :**

**0712000100041401 IFSC: KARB 0000071**

ಕೆಬಿಎಲ್

# ಕೃಷಿಕ್ ಸಿಂಚನ

## ನೀರಾವರಿ ಅಭಿವೃದ್ಧಿ ಸಾಲ ಯೋಜನೆ

**ಉದ್ದೇಶ:**

ಹೊಸ ಪಂಪ್‌ಸೆಟ್ /ಡೀಸಿಲ್ ಇಂಜಿನ್ ಖರೀದಿ/
ತುಂತುರು/ಹನಿ ನೀರಾವರಿ ವ್ಯವಸ್ಥೆ ಅಳವಡಿಕೆ /
ಬಾವಿ/ ಕೆರೆ/ ಜಲಾಶಯ / ತಡೆಗೋಡೆ ನಿರ್ಮಾಣ
ಇತ್ಯಾದಿ ನೀರಾವರಿ ಅಭಿವೃದ್ಧಿ ಚಟುವಟಿಕೆಗಳು.








ಕೆಬಿಎಲ್

# ಕೃಷಿಕ್ ಸಾರಥಿ

## ಕೃಷಿ ಯಂತ್ರೋಪಕರಣ ಮತ್ತು ಸಾಗಾಣಿಕೆ ವಾಹನ ಖರೀದಿ ಯೋಜನೆ

**ಉದ್ದೇಶ:**

ಟ್ರಾಕ್ಟರ್ / ಪವರ್ ಟಿಲ್ಲರ್ /ಟ್ರೈಲರ್ / ಇತರ ಕೃಷಿ
ಯಂತ್ರೋಪಕರಣ / ಬೆಳೆ ಕಟಾವು ಯಂತ್ರ /
ಸಿಂಪರಣಾ ಯಂತ್ರಗಳು /ಕೃಷಿ ಸಾಮಾಗ್ರಿ ಸಾಗಾಣಿಕೆ
ವಾಹನ / ದ್ವಿಚಕ್ರ ವಾಹನ ಇತ್ಯಾದಿ ಖರೀದಿಗೆ.

ಷರತ್ತುಗಳು ಅನ್ವಯಿಸುತ್ತವೆ.

ಹೆಚ್ಚಿನ ಮಾಹಿತಿಗಾಗಿ ಟೋಲ್ ಫ್ರೀ ಸಂಖ್ಯೆ 1800 425 1444ಗೆ ಕರೆ ಮಾಡಿ ಅಥವಾ ನಿಮ್ಮ ಸಮೀಪದ ಶಾಖೆಯನ್ನು ಸಂಪರ್ಕಿಸಿ

# ಕರ್ಣಾಟಕ ಬ್ಯಾಂಕ್ ಲಿ.

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002    ಇಮೇಲ್: info@ktkbank.com  ವೆಬ್‌ಸೈಟ್: www.karnatakabank.com

**TITLE VERIFICATION LETTER : KARKAN 21704/10/1/2011-TC**

CHINTHANA BAYALU ISSN 2278-2192
Kannada Quarterly, volume 1, Issue 3, January - March 2013.
Edited, Published, Printed & Owned by
Reshma G. Bhat
Door No. 15-109, Modankapu Post,
Bantwal Taluk, Dakshina Kannada 574 219.
Printed at
Aakrithi Prints
Light House Hill Road, Mangalore - 575 001
Pages : 88

ವಾರ್ಷಿಕ ಚಂದಾ : ರೂಪಾಯಿ ಇನ್ನೂರು
(ಅಂಚೆ ವೆಚ್ಚಸೇರಿ)
ಮೂರು ವರ್ಷಗಳಿಗೆ : ರೂಪಾಯಿ ಆರುನೂರು
ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ
ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ
ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ
ಬಿಡಿ ಪ್ರತಿ : ರೂಪಾಯಿ ಅರುವತ್ತು

ದಯವಿಟ್ಟು ಡಿ.ಡಿ./ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣ ವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

**ಕರ್ನಾಟಕ ಬ್ಯಾಂಕ್**

ಬಂಟ್ವಾಳ ಮೂಡ ಶಾಖೆಯಲ್ಲಿ

**ಚಿಂತನ ಬಯಲು** ಹೆಸರಿನಲ್ಲಿರುವ

**ಕರೆಂಟ್ ಅಕೌಂಟ್ ಸಂಖ್ಯೆ : 0712000100041401**

**IFSC: KARB 0000071**

**ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444ಗೆ ಕರೆ ಮಾಡಿರಿ**

**ಕರ್ನಾಟಕ ಬ್ಯಾಂಕ್ ಲಿ.**
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com